ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಆಗಸ್ಟ್ 15 ಗುರುವಾರ 2024
₹4
ಸಂಪುಟ: 45 | ಸಂಚಿಕೆ: 121 | ಪುಟಗಳು: 12 + IV
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


ಜನ್ಮದಿನದ
ಶುಭಾಶಯಗಳು
16.08.2024
Sandesh The Prince
A Unit of Hotel Sandesh Pvt. Ltd. Mysore
ಸಂದೇಶ್ ದಿ ಪ್ರಿನ್ಸ್
Sandesh the Pride
Sandesh Kingston
Sandesh Water Edge Kabini
SANDESH KINGSTON
ಸಂದೇಶ್ ದಿ ಪ್ರೈಡ್
ಸಂದೇಶ್ ದಿ ಕಿಂಗ್‌ಸ್ಟನ್
ಸಂದೇಶ್ ವಾಟರ್ ಎಡ್ಜ್ ಕಬಿನಿ
ವಿಸ್ಮಯ ಕಂಫರ್ಟ್ಸ್
ಅನ್ನದಾತ ಸುಖಿನೋ ಭವಂತು..
ನಮ್ಮೆಲ್ಲರ ಬದುಕಿಗೆ ಆಸರೆಯಾಗಿರುವ
ನಮ್ಮೆಜಮಾನ್ರು
ಶ್ರೀ ಸಂದೇಶ್ ನಾಗರಾಜು ಅವರಿಗೆ
ಜನ್ಮದಿನದ ಶುಭಾಶಯಗಳು
ನಾಡ ದೇವತೆ ತಾಯಿ ಚಾಮುಂಡೇಶ್ವರಿ ಇವರಿಗೆ ಆಯುರ್-ಆರೋಗ್ಯ,
ಭಾಗ್ಯ ಕಲ್ಪಿಸಲಿ, ಸದಾ ಅವರು ಸಂತೋಷದಿಂದಿರಲಿ
ಎಂಬುದೇ ನಮ್ಮೆಲ್ಲರ ಆಶಯ
ಶುಭಕೋರುವವರು :
ಸಿಬ್ಬಂದಿ ವರ್ಗ


80ನೇ
ವಸಂತಕ್ಕೆ ಕಾಲಿಡುತ್ತಿರುವ
ನಮ್ಮ ಕುಟುಂಬದ ಕಣ್ಮಣಿ
ಶ್ರೀ ಸಂದೇಶ್ ನಾಗರಾಜ್
ಅಣ್ಣ ಅವರಿಗೆ
ಹುಟ್ಟುಹಬ್ಬದ ಹಾರ್ದಿಕ
ಶುಭಾಶಯಗಳು.
ರಾಷ್ಟ್ರ ಪ್ರಶಸ್ತಿ ವಿಜೇತ ಚಿತ್ರ ನಿರ್ಮಾಪಕರು, ವಿಧಾನ ಪರಿಷತ್ ಮಾಜಿ ಸದಸ್ಯರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು, ರಾಜಕೀಯ ರಂಗದ ಧುರೀಣರು, ಯಶಸ್ವಿ ಉದ್ಯಮಿ, ಉದ್ಯೋಗದಾತ, ಸಮಾಜ ಸೇವಕ, ಹೃದಯವಂತ, ಕುಟುಂಬದ ಯಜಮಾನರಾದ ನಿಮಗೆ ಸದಾ ತಾಯಿ ಚಾಮುಂಡೇಶ್ವರಿ ಕೃಪೆ ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.
– ಸಂದೇಶ್ ಸ್ವಾಮಿ,
ಮಾಜಿ ಮೇಯರ್
ಶುಭಕೋರುವವರು: ಸಮಸ್ತ್ ಗ್ರೂಪ್ಸ್ ಆಫ್ ಹೋಟೆಲ್, ಮೈಸೂರು

ನಕ್ಕರೆ ಅದೇ ಸ್ವರ್ಗ

ಅತ್ತೆ ಸೊಸೆಗೆ : ನಿನ್ನ ಗಂಡ ನನ್ನ ಹೊಟ್ಟೆಯಲ್ಲಿದ್ದಾಗ ನಾನು ಏನೇನು ಇಷ್ಟವಾದ ತಿಂಡಿ–ತಿನಿಸುಗಳನ್ನು ತಿಂದಿದ್ದೇನೋ ಅದೆಲ್ಲ ಅವನಿಗೆ ಈಗಲೂ ಇಷ್ಟ..

ಸೊಸೆ ಅತ್ತೆಗೆ : ಹೌದು ಅತ್ತೆ... ಆದರೆ ಏನಾದ್ರೂ ಆಗ್ಲಿ ನೀವು ಗರ್ಭಿಣಿಯಾಗಿದ್ದಾಗ ಎಣ್ಣೆ ಮತ್ತು ಸಿಗರೇಟಿನಿಂದ ದೂರ ಇರಬೇಕಿತ್ತು...!

ಮೈಸೂರು ಮಿತ್ರ
ಗುರುವಾರ, 15 ಆಗಸ್ಟ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಅಂದಿನ ನಗುವೇ ಇಂದಿಲ್ಲ ಅಂದ ಮೇಲೆ, ಇಂದಿನ ಕಷ್ಟ ಮುಂದೆಯೂ ಇರುವುದಿಲ್ಲ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರಾಮಾಣಿಕತೆಯಿಂದಲೇ ಪಾರಮಾರ್ಥ

ನಿಮ್ಮ ಪತ್ರಗಳು

ಓಂಕಾರ್ ಬಡಾವಣೆಯ ದುಸ್ಥಿತಿ



ಮಾನ್ಯರೆ,

ಮೈಸೂರಿನ ಜೆ.ಪಿ.ನಗರದ ಅಕ್ಕಮಹಾದೇವಿ ರಸ್ತೆ ಹಾಗೂ ಅಕ್ಕಮಹಾದೇವಿಯವರ ಪ್ರತಿಮೆಯಿಂದ ಕೇವಲ ನೂರು ಮೀಟರ್ ಅಂತರದಲ್ಲಿರುವ ಓಂಕಾರ್ ಬಡಾವಣೆಯನ್ನು ನಿಜವಾಗಿಯೂ ಭೂಲೋಕದ ಮೇಲಿನ ನರಕವೆಂದೇ ಹೇಳಬಹುದು.

ಇಲ್ಲಿನ ಸಮಸ್ಯೆಗಳು ಹಲವಾರು. ಮೊದಲನೆಯದಾಗಿ, 1ನೇ ಅಡ್ಡ ರಸ್ತೆಯ ಪರಿಸ್ಥಿತಿ ಅತ್ಯಂತ ಹದಗೆಟ್ಟಿದೆ. ಮಳೆ ನೀರು ಚರಂಡಿ ಸೇರಲು ಸರಿಯಾದ ವ್ಯವಸ್ಥೆ ಇಲ್ಲ. ಎಲ್ಲಿ ಹೊಂಡವಿದೆ, ಎಲ್ಲಿ ರಸ್ತೆ ಇದೆ ಎಂದು ತಿಳಿಯುವುದಿಲ್ಲ. ರಸ್ತೆಯ ಹೊಂಡಗಳು ಮನುಷ್ಯರನ್ನೇ ನುಂಗುವಂತೆ ಗೋಚರಿಸುತ್ತದೆ. (ಮ್ಯಾನ್‌ಹೋಲ್ ಬಳಿ).

ಎರಡನೆಯದಾಗಿ ಪ್ರತಿಮೆಯ ಪಕ್ಕದಲ್ಲಿ ಇರುವ ಮಳೆ ನೀರು ಚರಂಡಿ ಸಂಪೂರ್ಣವಾಗಿ ಗಿಡಗಂಟಿಗಳಿಂದ ಮುಚ್ಚಿಹೋಗಿದೆ. ಈ ಚರಂಡಿಯ ಬಲ ಭಾಗಕ್ಕೆ ಕೇವಲ ಮೂರು ಅಥವಾ ನಾಲ್ಕು ಮನೆಗಳಿಗೆ ಕಾಂಕ್ರೀಟ್ ವಾಲ್ ಅಳವಡಿಸಲಾಗಿದೆ. ಚರಂಡಿಯ ಪಕ್ಕ ಖಾಲಿ ನಿವೇಶನದ ಎಲ್ಲ ಕಸದ ರಾಶಿ ಹಾಗೂ ಮಣ್ಣಿನ ರಾಶಿಯನ್ನು ಇತ್ತೀಚೆಗೆ ಚರಂಡಿಯೊಳಗೆ ತಳ್ಳಲಾಗಿದೆ. ಬಹಳ ಮುಂಚಿನಿಂದಲೂ ಇಲ್ಲಿ ಹಾವು ಹಾಗೂ ಇತರೆ ಕ್ರಿಮಿಗಳ ಹಾವಳಿ ಇದೆ. ಈ ಮಳೆ ನೀರು ಚರಂಡಿ ಈಗ ಸೊಳ್ಳೆಗಳ ಸಂತಾನೋತ್ಪತ್ತಿಗೆ ಹಾಗೂ ಡೆಂಗ್ಯೂ ಜ್ವರ ಹರಡಲು ಅತ್ಯಂತ ಸೂಕ್ತವಾದ ಜಾಗವಾಗಿದೆ.

ಮೂರನೆಯದಾಗಿ ಬಡಾವಣೆಯ ಖಾಲಿ ನಿವೇಶನಗಳಲ್ಲಿ ಎತ್ತರವಾಗಿ ಬೆಳೆದು ನಿಂತಿರುವ ಗಿಡಗಂಟಿಗಳನ್ನು MUDA ಅಥವಾ ಕಾರ್ಪೋರೇಶನ್‌ನವರು ಕಳೆದ 4–6 ತಿಂಗಳಿಂದ ಒಂದು ಸಾರಿಯೂ ತೆರವುಗೊಳಿಸಿಲ್ಲ. ವಿಪರ್ಯಾಸವೆಂದರೆ ಪಕ್ಕದ ಪ್ರತಿಮೆಯ ಸುತ್ತಲಿನ ರಸ್ತೆ ಹಾಗೂ ಖಾಲಿ ನಿವೇಶನಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ತೆರವುಗೊಳಿಸಲಾಗುತ್ತದೆ. ಇದನ್ನು ಪ್ರಶ್ನೆ ಮಾಡಿದ್ದಕ್ಕೆ ಸಿಕ್ಕ ಉತ್ತರ ಅ ಜಾಗ MUDA ಗೆ ಸೇರಿದ್ದು ಎಂದು. ಯಾಕೆ ಸ್ವಾಮಿ, ನಾವು ಕಂದಾಯ ಹಾಗೂ ತೆರಿಗೆ ಕಟ್ಟುವುದಿಲ್ಲವೇ?

ಈ ಎಲ್ಲಾ ವಿಚಾರ ನಮ್ಮ ಬಡಾವಣೆಯ ಕಾರ್ಪೊರೇಟರ್ ಕಣ್ಣಿಗೆ ಬಿದ್ದರು, ನಿರ್ಲಕ್ಷ್ಯ ಮಾಡಿದ್ದಾರೆ. ಕಾರ್ಪೊರೇಟರ್, ಪಾಲಿಕೆ ಅಧಿಕಾರಿಗಳು ಹಾಗೂ ಶಾಸಕರು ಈಗಲಾದರೂ ಎಚ್ಚರಗೊಳ್ಳುವರೇ? ಶೀಘ್ರವೇ ಪಾಲಿಕೆ ಅಧಿಕಾರಿಗಳು ಗಮನ ಹರಿಸಿ ದುರಸ್ತಿ ಕಾರ್ಯ ಪ್ರಾರಂಭಿಸಬೇಕು ಎಂದು ಮನವಿ.

–ಓಂಕಾರ್ ಬಡಾವಣೆಯ ನಿವಾಸಿಗಳು, ಜೆ.ಪಿ.ನಗರ, ಮೈಸೂರು.

ಆಧುನಿಕ ಮಹಿಷಾಸುರ

ಮಾನ್ಯರೆ,

ಚಾಮುಂಡಿಬೆಟ್ಟದ ಪ್ರಾಧಿಕಾರ ರಚಿಸುವುದರ ಹಿಂದೆ ಯಾವ ಸದುದ್ದೇಶವೂ ಇಲ್ಲ. ಈಗಾಗಲೇ 40–50 ನಿಗಮ ಮಂಡಳಿಗಳೆಂಬ ಬಿಳಿ ಆನೆಗಳು ಜನರ ತೆರಿಗೆ ದುಡ್ಡನ್ನು ನುಂಗುತ್ತಾ ಕುಳಿತಿವೆ. ಅದಕ್ಕೆ ಇನ್ನೊಂದು ಸೇರ್ಪಡೆ. ಇಲ್ಲಿ ತಮ್ಮ ಸಹಚರ ಒಬ್ಬರಿಗೆ ಅಧ್ಯಕ್ಷ ಸ್ಥಾನ ನೀಡಿ ಅವರಿಗೆ ಕ್ಯಾಬಿನೆಟ್ ಸ್ಥಾನಮಾನ ದೊರಕಿಸಿ ಕೊಡುವ ಘನವಾದ (?) ಹುನ್ನಾರ. ತಮಗೆ ಬೇಕಾದವರಿಗೆ ಬೆಟ್ಟದ ಮೇಲೆ ಭೂಮಿ ಕೊಡಿಸಿ ಹಿಂಬಾಗಿಲಿನಿಂದ ಹಣ ಲೂಟಿ ಮಾಡುವ ದೂರ (ದುರಾ) ದೃಷ್ಟಿ, ಪ್ರಾಧಿಕಾರದ ಅಧ್ಯಕ್ಷರಿಗೆ ಒಂದು ಕಚೇರಿ, ಒಂದು ಗೂಟದ ಕಾರು, ಅದಕ್ಕೆ ಮನಸೋ ಇಚ್ಛೆ ಬಾಡಿಗೆ, ಹತ್ತಾರು ಸಿ(ಇ)ಬ್ಬಂದಿಗಳು, ಅವರಿಗೆ ಸಂಬಳ, ಸಾರಿಗೆ ಖರ್ಚು, ಆಮೇಲೆ ಸ್ಟಡಿ ಟೂರ್ ಅಂತ ವಿದೇಶ ಯಾತ್ರೆ. ಕುಟುಂಬಸ್ಥರಿಂದ ಇವರ ಸ್ಥಾನದ ದುರುಪಯೋಗ ಬಿಟ್ಟು ಬೇರೆ ಯಾವ ಸಾಧನೆಯೂ ಆಗಲ್ಲ. ಈಗ ಇರುವಂತೆಯೇ ನಡೆದರೆ ಆಗುವ ತೊಂದರೆ, ನಷ್ಟ ಏನು?

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ.

ಪ್ರಾಥಮಿಕ ಶಿಕ್ಷಕರ ಸಮಸ್ಯೆ: ಸರ್ಕಾರ ನುಡಿದಂತೆ ನಡೆಯಲಿ

ಮಾನ್ಯರೆ,

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಕಳೆದ ಸೋಮವಾರ (ಆಗಸ್ಟ್ 12) ಫ್ರೀಡಂಪಾರ್ಕ್‌ನಲ್ಲಿ ನಡೆಸಿದ 'ಬೆಂಗಳೂರು ಚಲೋ' ಪ್ರತಿಭಟನೆಯಲ್ಲಿ ರಾಜ್ಯದ ನಾನಾ ಕಡೆಗಳಿಂದ ಬಂದಿದ್ದ ಸಾವಿರಾರು ಶಿಕ್ಷಕರು ಭಾಗವಹಿಸಿದ್ದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ್ದ ಶಿಕ್ಷಣ ಸಚಿವ ಮಧು ಬಂಗಾರಪ್ಪನವರು, ಆಗಸ್ಟ್ 17 ಅಥವಾ 20 ರಂದು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಶಿಕ್ಷಕರು ತಾತ್ಕಾಲಿಕವಾಗಿ ಹಿಂಪಡೆದಿದ್ದಾರೆ.

2017 ರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪೂರ್ವಾನ್ವಯಗೊಳಿಸಬಾರದು, ಹಾಲಿ ಸೇವಾನಿರತ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಪದನಾಮೀಕರಿಸಿ ವಿಲೀನಗೊಳಿಸಬೇಕು ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕ ಹುದ್ದೆಯಿಂದ ಮುಖ್ಯೋಪಾಧ್ಯಾಯರು ಮತ್ತು ಪ್ರೌಢಶಾಲಾ ಶಿಕ್ಷಕರ ಹುದ್ದೆಗಳಿಗೆ ಈ ಹಿಂದೆ ನೀಡುತ್ತಿದ್ದ ಬಡ್ತಿಯ ಸ್ವರೂಪವನ್ನೇ ಮುಂದುವರೆಸಬೇಕು ಎಂಬ ಪ್ರಮುಖ ಬೇಡಿಕೆಗಳನ್ನಿಟ್ಟು ಪ್ರಾಥಮಿಕ ಶಾಲಾ ಶಿಕ್ಷಕರು ಕಳೆದ ಏಳು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ನಿರಂತರ ಹೋರಾಟವು ನ್ಯಾಯಸಮ್ಮತ ಹಾಗೂ ಬಹುದಿನಗಳ ಒತ್ತಾಸೆಯು ಆಗಿದೆ.

ಸರ್ಕಾರ ಈಗಾಗಲೇ ರಾಜ್ಯದ ಜನತೆಗೆ ಹಲವು ಗ್ಯಾರಂಟಿಗಳನ್ನು ಪೂರೈಸಿ ತಮ್ಮದು ನುಡಿದಂತೆ ನಡೆಯುವ ಸರ್ಕಾರ ಎಂಬುದಾಗಿ ಹೇಳುತ್ತಾ ಬಂದಿದೆ. ಪ್ರಸ್ತುತ ಮಾನ್ಯ ಶಿಕ್ಷಣ ಸಚಿವರು ಫ್ರೀಡಂಪಾರ್ಕ್‌ನ ಪ್ರತಿಭಟನಾ ಸಭೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅಭಯಹಸ್ತ ನೀಡಿದಂತೆ ನಡೆದುಕೊಳ್ಳಲಿ. ಶಿಕ್ಷಕರಿಗೆ ಕೊಟ್ಟ ಭರವಸೆಯನ್ನು ಈಡೇರಿಸಲಿ. ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಹಾಗೂ ಬದಲಾವಣೆ ತಂದು, ಈ ಬಗ್ಗೆ ಸರ್ಕಾರ ಶೀಘ್ರವಾಗಿ ಸೂಕ್ತ ಆದೇಶ ಹೊರಡಿಸಲಿ.

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ನಮ್ಮ ಕನ್ನಡ ಸ್ವಾತಂತ್ರ್ಯ ಹೋರಾಟಗಾರ್ತಿಯರು

ಇಂದು ಭಾರತ ಮಾತ್ರವಲ್ಲ, ಭಾರತೀಯರು ಎಲ್ಲೆಲ್ಲಿ ಇದ್ದಾರೋ, ಅಲ್ಲೆಲ್ಲಾ ಸ್ವಾತಂತ್ರ್ಯೋತ್ಸವದ ಸಂಭ್ರಮ ಮನೆ ಮಾಡಿದೆ. ನಾವೆಲ್ಲರೂ 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಎಂದಿನಂತೆ ಶ್ರದ್ಧೆ, ಭಕ್ತಿ, ಹೆಮ್ಮೆಯಿಂದ ಆಚರಿಸಲು ಅಣಿಯಾಗಿದ್ದೇವೆ. **ಘರ್ ಘರ್ ತಿರಂಗಾ** ಎಂಬ ಪ್ರಧಾನ ಮಂತ್ರಿಗಳ ಕರೆಗೆ ಓಗೊಟ್ಟು, ಮನೆಮನೆಗಳಲ್ಲೂ ತ್ರಿವರ್ಣ ಧ್ವಜವನ್ನು ಹಾರಿಸಿರುವ ನಾವು ಅದಕ್ಕೊಂದು ಸಲ್ಯೂಟ್ ಖಂಡಿತಾ ಮಾಡಿಯೇ ಇರುತ್ತೇವೆ. ಸ್ವತಂತ್ರ ಲಭಿಸಲು ಕಾರಣಕರ್ತರಾದ ಹೋರಾಟಗಾರರ ತ್ಯಾಗ–ಬಲಿದಾನಗಳ ಕತೆಗಳು ಎಲ್ಲೆಡೆ ಕೇಳಿ ಬರುತ್ತಿವೆ. ಅವರಿಗೆ ಕೃತಜ್ಞತೆ ಮತ್ತು ಭಕ್ತಿಗಳಿಂದ ವಂದಿಸುತ್ತಾ ನಿಮಗೆಲ್ಲರಿಗೂ ಸ್ವಾತಂತ್ರ್ಯೋತ್ಸವದ ಶುಭಾಶಯವನ್ನು ಕೋರುತ್ತೇನೆ.

ಭಾರತಕ್ಕೆ ಸ್ವಾತಂತ್ರ್ಯ ಸುಲಭವಾಗಿ ದಕ್ಕಿದ್ದಲ್ಲ. 1857ರ ಪ್ರಥಮ ಹೋರಾಟವನ್ನು ಲೆಕ್ಕಕ್ಕೆ ತೆಗೆದುಕೊಂಡು 200 ವರ್ಷಗಳ ಹೋರಾಟ ಎನ್ನುತ್ತೇವೆ, 1498ರಲ್ಲಿ ವಾಸ್ಕೋಡಗಾಮ ಕಲ್ಲಿಕೋಟೆಯಲ್ಲಿ ಕಾಲೂರಿದ ಕ್ಷಣದಿಂದಲೇ ಯೂರೋಪಿಯನ್ನರ ಆಕ್ರಮಣ ಪ್ರಾರಂಭವಾಯಿತು ಎಂದರೆ, ತಪ್ಪಾಗುವುದಿಲ್ಲ. ಬ್ರಿಟಿಷರಿಗಿಂತಾ ಮೊದಲು ಕಾಲಿಟ್ಟ ಪೋರ್ಚುಗೀಸರು, ಡಚ್ಚರು, ಸ್ಪಾನಿಷರು ಸಾಕಷ್ಟು ದುರಾಕ್ರಮಣಗಳನ್ನು, ದಾಳಿಗಳನ್ನು, ಅತ್ಯಾಚಾರಗಳನ್ನು ನಡೆಸಿದರು. ನಂತರ ಸ್ವಲ್ಪ ನಿಧಾನಕ್ಕೆ ಭಾರತದ ಸಂಪತ್ತಿನ ಅಗಾಧತೆಯನ್ನು ಅರಿತ ಬ್ರಿಟಿಷರು ಇಲ್ಲಿಗೆ ಬಂದು, ತಮ್ಮದೇ ಪಾರಮ್ಯ ಸ್ಥಾಪಿಸಿದ ಬಗ್ಗೆ ನಮ್ಮ ಶಾಲೆಗಳಲ್ಲಿ ಓದಿದ್ದೇವೆ.

ಸ್ವತಂತ್ರ ಹೋರಾಟಗಾರರು ಎಂದ ತಕ್ಷಣ, ಗಾಂಧಿ, ನೆಹರು, ಬೋಸರು, ಗೋಖಲೆ, ಲಾಲ್–ಬಾಲ್–ಪಾಲ್, ಭಗತ್ ಸಿಂಗ್, ಸುಖದೇವ್, ಪಟೇಲ್ ಇವರೆಲ್ಲರೂ ನೆನಪಾಗುತ್ತಾರೆ. ಇವರ ಜೊತೆಗೆ ಇವರ ಸಮಸಮವಾಗಿ ಭಾರತದ ಸ್ವಾತಂತ್ರ್ಯಕ್ಕೆ ಸೆಣಸಿದ, ತ್ಯಾಗ ಮಾಡಿದ, ಮಡಿದ ವೀರ ವನಿತೆಯರ ಪಡೆಯೂ ಇದೆ. ಗಾಂಧೀಜಿ ಸ್ವಾತಂತ್ರ್ಯ ಹೋರಾಟದ ಖರ್ಚಿಗಾಗಿ ವಿನಂತಿಸಿಕೊಂಡಾಗ, ತಮ್ಮ ಒಡವೆಗಳನ್ನು ನಿಸ್ಪೃಹವಾಗಿ ತೆಗೆದುಕೊಟ್ಟ ಪುಟ್ಟ ಕೌಮುದಿ, ಕತೆಗಾರ್ತಿ ಕೊಡಗಿನ ಗೌರಮ್ಮನಂತಹ ಎಷ್ಟೋ ನಾರಿಯರಲ್ಲದೆ, ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀ ಬಾಯಿ, ಅಹಲ್ಯಾ ಬಾಯಿ ಹೋಳ್ಕರ್, ಉಲ್ಲಾಳದ ರಾಣಿ ಅಬ್ಬಕ್ಕ, ಕಾಳುಮೆಣಸಿನ ರಾಣಿ ಚೆನ್ನಭೈರಾದೇವಿ, ಕಸ್ತೂರ್ ಬಾ ಸರೋಜಿನಿ ನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ, ಸುಚೇತಾ ಕೃಪಲಾನಿ, ದುರ್ಗಾ ಬಾಯಿ, ವಿದೇಶದಲ್ಲಿದ್ದು ಹೋರಾಡಿದ ಮೇಡಂ ಭಿಕಾಜಿ ಕಾಮಾ ಹೀಗೆ ಅನೇಕ ವೀರ ಸಿಂಹಿಣಿಯರು ಬ್ರಿಟಿಷರ ವಿರುದ್ಧ ಹೋರಾಡಿದ್ದಾರೆ. ದೇಶದ ಪ್ರತಿ ಹಳ್ಳಿಯಲ್ಲೂ ಸ್ವಾತಂತ್ರ್ಯ ಪ್ರೇಮಿಗಳು ಹುಟ್ಟಿಕೊಂಡಿದ್ದರು. ಕುಗ್ರಾಮಗಳಲ್ಲೂ ಪ್ರತಿಭಟನೆಗಳು ನಡೆಯುತ್ತಿದ್ದವು. ಎಲ್ಲ ರಾಜ್ಯಗಳಲ್ಲೂ ಹೋರಾಟದ ಕಿಚ್ಚು ಹರಡಿ, ಸ್ವಾತಂತ್ರ್ಯ ಯೋಧರು ಮಾತ್ರವಲ್ಲದೆ, ವನಿತೆಯರೂ ಹುಟ್ಟಿಕೊಂಡಿದ್ದರು.

ಕರ್ನಾಟಕದಲ್ಲಿಯೂ ಸ್ವಾತಂತ್ರ್ಯ ಹೋರಾಟದ ಕಾವು ಬ್ರಿಟಿಷರ ನಿದ್ರೆ ಕೆಡಿಸಿತ್ತು. ಕಾರ್ನಾಡ್ ಸದಾಶಿವ ರಾಯರು, ಎನ್.ಎಸ್.ಹರ್ಡೀಕರ್, ಕೆ.ಜಿ.ಗೋಖಲೆ, ನಿಜಲಿಂಗಪ್ಪ, ಹರ್ಡೇಕರ್ ಮಂಜಪ್ಪ, ನಿಟ್ಟೂರು ಶ್ರೀನಿವಾಸರಾಯರು ಇವರ ನೇತೃತ್ವದಲ್ಲಿ ಹೋರಾಟ ತನ್ನ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇವರ ಜೊತೆಯಲ್ಲಿಯೇ ಅನೇಕ ಮಹಿಳಾಮಣಿಗಳು ಹೋರಾಟದ ಕಣಕ್ಕಿಳಿದು ತಮ್ಮ ಸರ್ವಸ್ವವನ್ನು ದೇಶಕ್ಕಾಗಿ ಮುಡಿಪಿಟ್ಟರು. ಅವರುಗಳ ಕಿರುಪರಿಚಯ ಇಲ್ಲಿದೆ.

ಉಲ್ಲಾಳದ ರಾಣಿ ಅಬ್ಬಕ್ಕ



ಅಭಯ ರಾಣಿ ಎಂದೇ ಹೆಸರಾಗಿದ್ದ ಉಲ್ಲಾಳದ ರಾಣಿ, ಚೌಟ ವಂಶಕ್ಕೆ ಸೇರಿದವಳು. ಉಲ್ಲಾಳವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಈಕೆ, 4 ದಶಕಗಳ ಕಾಲ ಪೋರ್ಚುಗೀಸರನ್ನು ಕಟ್ಟಿಹಾಕಿದ್ದಳು. ಜೈನರು, ಹಿಂದೂಗಳು ಮತ್ತು ಮುಸ್ಲಿಮರಿದ್ದ ತನ್ನ ರಾಜ್ಯವನ್ನು ಸಕ್ಷಮವಾಗಿ ಆಳಿದ ಈಕೆ, ತಾನು ಸಂಬಂಧ ಕಡಿದುಕೊಂಡಿದ್ದ ಪತಿಯ ಕುತಂತ್ರದಿಂದಲೇ ಸೋತು ಪ್ರಾಣ ತೆತ್ತದ್ದು ದುರಂತವೇ ಸರಿ. ಭಾರತದ ಇತಿಹಾಸವೇ ಹೀಗಲ್ಲವೇ? ಬೆನ್ನಿಗೆ ಚೂರಿ ಹಾಕುವ ಸ್ವಜನರೇ ಎಷ್ಟೋ ದುರಂತಗಳಿಗೆ ಮೂಲವಾಗಿದ್ದಾರೆ. ಆದರೆ ವಸಾಹತುಶಾಹಿಗಳ ವಿರುದ್ಧ ಹೋರಾಡಿದ ಪ್ರಥಮರಲ್ಲಿ ರಾಣಿ ಅಬ್ಬಕ್ಕ ಅತ್ಯಂತ ಪ್ರಮುಖಳು.

ಚೆನ್ನಭೈರಾದೇವಿ



ಕಾಳುಮೆಣಸಿನ ರಾಣಿ ಎಂದೇ ಖ್ಯಾತಳಾಗಿದ್ದ ಚೆನ್ನಭೈರಾದೇವಿ, ಸಾಳುವ ವಂಶದ ಧೀರರಾಣಿ. 54 ವರ್ಷಗಳ ಕಾಲ ಗೇರುಸೊಪ್ಪೆ ಯಲ್ಲಿ ಅಖಂಡ ಆಡಳಿತ ನಡೆಸಿದ ಈಕೆಯನ್ನು ಅವಳ ಪ್ರಜೆಗಳು ಪ್ರೀತಿಯಿಂದ ಅವ್ವರಸಿ ಎಂದು ಕರೆದರೆ, ಪೋರ್ಚುಗೀಸರು ರೈನಾ ದೆ ಪಿಮೆಂಟಾ ಎಂದು ಕರೆಯುತ್ತಿದ್ದರು. ಆ ಪ್ರದೇಶದಲ್ಲಿ ಹೇರಳವಾಗಿದ್ದ ಮೆಣಸನ್ನು ಯೂರೋಪಿಗೆ ರಫ್ತು ಮಾಡುತ್ತಿದ್ದ ರಾಣಿ, ಬಹಳ ಜಾಣ್ಮೆಯಿಂದ ಬಿಜಾಪುರದ ಸುಲ್ತಾನರು, ಕೆಳದಿಯ ಅರಸರು ಮತ್ತು ಪೋರ್ಚುಗೀಸರನ್ನು ನಿಭಾಯಿಸಿದ್ದಳು. ಪೋರ್ಚುಗೀಸರ ವಿರುದ್ಧ ಎರಡು ಯುದ್ಧ ಗಳು ಮತ್ತು ಕೆಳದಿಯ ಅರಸರ ವಿರುದ್ಧದ ಯುದ್ಧಗಳನ್ನು ಚಾಣಾಕ್ಷವಾಗಿಯೇ ನಿಭಾಯಿಸಿದ ಚೆನ್ನಭೈರಾದೇವಿಯ ಸೋಲೂ, ತನ್ನ ಸೇನಾ ಧಿಪತಿಯ ಮೋಸದಿಂದಲೇ ಆಗುವುದು. ಟೆಕ್ಸಾಸ್ ವಿಶ್ವ ವಿದ್ಯಾನಿಲಯದ ಡಾ.ಹನ್ನಾಚಾಪೆಲ್ ವೋಜಿ ಹೋಸ್ಕಿ ಚೆನ್ನಭೈರಾದೇವಿಯನ್ನು ಇಂಗ್ಲೆಂಡಿನ ರಾಣಿ ಎಲಿಜಬೆತ್‌ಗೆ ಸರಿಸಮನಾದವಳು ಎಂದು ಬಣ್ಣಿಸಿ ದ್ದಾರೆ. ಕಾದಂಬರಿಕಾರರಾದ ಗಜಾನನ ಶರ್ಮ ಆಳವಾದ ಅಧ್ಯಯನ ಮಾಡಿ ಇವಳದೇ ಹೆಸರಿನ ಕಾದಂಬರಿಯನ್ನು ರಚಿಸಿದ್ದಾರೆ.

ಕಿತ್ತೂರು ರಾಣಿ ಚೆನ್ನಮ್ಮ



ಭಾರತದಲ್ಲಿ ಪ್ರಪ್ರಥಮವಾಗಿ ಬ್ರಿಟಿಷರ ವಿರುದ್ಧ ಹೋರಾಡಿದ ಮಹಿಳೆ ಎಂಬ ಖ್ಯಾತಿಯನ್ನು ತನ್ನದಾಗಿಸಿಕೊಂಡಿರುವ ಕೆಚ್ಚೆದೆಯ ರಾಣಿ ಚೆನ್ನಮ್ಮ. ತನ್ನ ಪತಿ ಮಲ್ಲಸರ್ಜನ ಮತ್ತು ಮಗನ ನಿಧನದ ನಂತರ, ದತ್ತು ಮಗನಿಗೆ ಪಟ್ಟ ಕಟ್ಟಬೇಕೆಂದು ಯೋಚಿಸಿದಾಗ, ಬ್ರಿಟಿಷರು, ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ಕಾನೂನನ್ನು ಮುಂದಿಟ್ಟು ಆಕೆಯನ್ನು ಬೆದರಿಸಿದಾಗ ಕೆರಳಿ ಹೋರಾಟಕ್ಕಿಳಿದವಳು ಚೆನ್ನಮ್ಮ. ಸಂಗೊಳ್ಳಿ ರಾಯಣ್ಣನಂತಹ ಬಂಟನ ಸಹಾಯದಿಂದ ಬ್ರಿಟಿಷರನ್ನು ಬಗ್ಗು ಬಡಿದ ಚೆನ್ನಮ್ಮ 1824ರಲ್ಲಿ ನಡೆದ ಯುದ್ಧದಲ್ಲಿ ಸೆರೆಯಾಗುತ್ತಾಳೆ ಮತ್ತು 1829ರಲ್ಲಿ ಮರಣಿಸುತ್ತಾಳೆ. ಅವಳ ಜೀವನ ಮುಂದಿನ ಹೋರಾಟಗಾರರಿಗೆ ಸ್ಫೂರ್ತಿಯಾಯಿತು. 1961ರಲ್ಲಿ ಪಂತುಲು ಅವರ ನಿರ್ದೇಶನದಲ್ಲಿ ಬಂದ ಚೆನ್ನಮ್ಮನ ಜೀವನಾಧಾರಿತ ಚಿತ್ರದಲ್ಲಿ ಬಿ.ಸರೋಜಾ ದೇವಿ ಅವರು ನೀಡಿರುವ ಅಮೋಘ ಅಭಿನಯ, ಚೆನ್ನಮ್ಮ ಹೀಗೆಯೇ ಇದ್ದಿರಬಹುದೇನೋ ಎಂಬ ಭ್ರಮೆ ಹುಟ್ಟಿಸುವಂತಿದೆ. 1920ರ ನಂತರ ಗಾಂಧೀಜಿ ಅವರ ನೇತೃತ್ವದಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಹೋರಾಟ, ಅನೇಕ ಮಹಿಳೆಯರನ್ನು ಸೆಳೆಯಿತು. ಗಾಂಧೀಜಿ ಅವರ ಬೆಳಗಾವಿ ಭೇಟಿಯ ನಂತರ ಕರ್ನಾಟಕದಲ್ಲಿಯೂ ಗಾಂಧೀಜಿ ಪ್ರಭಾವದಿಂದ ಹೋರಾಟಕ್ಕಿಳಿದ ಅನೇಕ ಮಹಿಳೆಯರು ಬ್ರಿಟಿಷ್ ಸರ್ಕಾರವನ್ನು ನಡುಗಿಸಿದರು.

ಬಳ್ಳಾರಿ ಸಿದ್ಧಮ್ಮ (1903–1982)



ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಧುಂಡಸಿ ಗ್ರಾಮದಲ್ಲಿ ಜನಿಸಿದ ಸಿದ್ಧಮ್ಮನವರು ಬಳ್ಳಾರಿಯ ಮುರಿಗೆಪ್ಪನವರನ್ನು ಮದುವೆಯಾಗಿ ಬಳ್ಳಾರಿ ಸಿದ್ಧಮ್ಮ ಆದರು. ಗಾಂಧೀಜಿ ಅವರಿಂದ ಅತ್ಯಂತ ಪ್ರಭಾವಿತರಾಗಿದ್ದ ಸಿದ್ಧಮ್ಮ ಅವರನ್ನು ನೋಡಿ ಮಾತನಾಡಿಸಲು ವಾರ್ಧಾದ ಆಶ್ರಮಕ್ಕೇ ಹೋಗಿದ್ದರು. ಅಲ್ಲಿ ಅವ ರೊಡನೆ ಮಾತನಾಡಿ ಅವರ ಕೆಲಸಗಳನ್ನು ನೋಡಿ ಅವನ್ನು ಅಳವಡಿಸಿ ಕೊಳ್ಳಬೇಕೆಂಬ ಅದಮ್ಯ ಇಚ್ಛೆಯಿಂದ ಮರಳಿದರು. ಸ್ವಾತಂತ್ರ್ಯ ಹೋರಾಟದ ಕಾವು ಇವರನ್ನು ತಟ್ಟಲು ಹೆಚ್ಚು ಸಮಯ ಬೇಕಾಗಲಿಲ್ಲ. ದಾವಣಗೆರೆ, ಚಿತ್ರದುರ್ಗದ ಕಡೆ ಹಳ್ಳಿ–ಹಳ್ಳಿಗೂ ಹೋಗಿ ಜನರಲ್ಲಿ ಪ್ರೇರಣೆ ತುಂಬಿದರು. ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ವಂದೇ ಮಾತರಂ ಹಾಡಿದ್ದಲ್ಲದೇ, ಧ್ವಜಾರೋಹಣಕ್ಕೂ ಜೊತೆಗೂಡಿದ್ದ ರಿಂದ ಪೊಲೀಸರಿಂದ ಬಂಧಿತರಾದರು. ನಿಮಗೆ ಗೊತ್ತೇ? ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಬಂಧಿತರಾದ ಮೊಟ್ಟ ಮೊದಲ ಮಹಿಳೆ ಬಳ್ಳಾರಿ ಸಿದ್ಧಮ್ಮ! ನಂತರ ವಿದುರಾಶ್ವತ್ಥದಲ್ಲಿಯೂ ಧ್ವಜಾ ರೋಹಣಕ್ಕೆ ಸಿದ್ಧಮ್ಮನವರು ಹಾಜರಿದ್ದರು! ಖಾದಿ ಪ್ರಚಾರ, ಮದ್ಯಪಾನ ನಿಷೇಧ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದ ಸಿದ್ಧಮ್ಮನವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿಯೂ ಸಕ್ರಿಯರಾಗಿದ್ದರು. ಸ್ವಾತಂತ್ರ್ಯ ನಂತರ ಸಮಾಜ ಸೇವೆಯಲ್ಲಿ ತೊಡಗಿದ್ದ ಸಿದ್ಧಮ್ಮನವರಿಗೆ ಭಾರತ ಸರ್ಕಾರ ತಾಮ್ರಪತ್ರ ನೀಡಿ ಗೌರವಿಸಿದೆ.

ಯಶೋಧರಾ ದಾಸಪ್ಪ (1905–1980)



ಬೆಂಗಳೂರಿನಲ್ಲಿ ಜನಿಸಿದ ಯಶೋಧರಾ ಅವರು ಬಳ್ಳಾರಿ ಸಿದ್ಧಮ್ಮನವರ ಸಮಕಾಲೀನರು. ಶ್ರೀಮಂತ ಕುಟುಂಬಕ್ಕೆ ಸೇರಿದವರಾದರೂ, ತಾರುಣ್ಯದಲ್ಲಿಯೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದವರು. ಶಿವಪುರದ ಧ್ವಜ ಸತ್ಯಾಗ್ರಹ, ವಿದುರಾಶ್ವತ್ಥದ ಹತ್ಯಾಕಾಂಡಕ್ಕೆ ಸಾಕ್ಷಿಯಾಗಿದ್ದವರು. ಹೋರಾಟದಲ್ಲಿ ತೊಡಗಿದ್ದಕ್ಕೆ ಜೈಲಿಗೂ ತಳ್ಳಲ್ಪಟ್ಟಿದ್ದರು. ಹಲವಾರು ಸತ್ಯಾಗ್ರಹಗಳಲ್ಲಿ ಭಾಗವಹಿಸಿದ್ದ ಯಶೋಧರಾ ಅವರು, ಮೈಸೂರಿನ ಟೌನ್ ಪೊಲೀಸ್ ಸ್ಟೇಷನ್‌ಗೆ ಹ್ಯಾಮಿಲ್ಟನ್ ಎಂಬ ಕ್ರೂರ ಬ್ರಿಟಿಷ್ ಅಧಿಕಾರಿಯ ಹೆಸರು ಇಡಲು ಬ್ರಿಟಿಷ್ ಸರ್ಕಾರ ಮುಂದಾದಾಗ ಉಗ್ರವಾಗಿ ವಿರೋಧಿಸಿ ಸರ್ಕಾರ ನಿರ್ಧಾರ ಬದಲಿಸುವಂತೆ ಮಾಡಿದವರು. ಸ್ವಾತಂತ್ರ್ಯಾನಂತರ ರಾಜಕಾರಣಿಯಾಗಿ, ಸಚಿವೆಯಾಗಿ, ಸಮಾಜಸೇವಕಿಯಾಗಿ ಸೇವೆ ಸಲ್ಲಿಸಿದ ಯಶೋಧರಾ ದಾಸಪ್ಪನವರಿಗೆ ಪದ್ಮಭೂಷಣ ಪುರಸ್ಕಾರ ಲಭಿಸಿದೆ. ಅವರ ಸೇವೆಯ ಪ್ರತೀಕವೆಂಬಂತೆ ಗಾಂಧೀಜಿಯವರ ಚಿತಾಭಸ್ಮ ಮತ್ತು ಸ್ಮಾರಕ ಇರುವ ಕಸ್ತೂರ ಬಾ ಬಾಲಿಕಾ ಆಶ್ರಮ ಅರಸೀಕೆರೆಯಲ್ಲಿ ಇಂದಿಗೂ ಕಾರ್ಯನಿರ್ವಹಿಸುತ್ತಿದೆ.

ಉಮಾಬಾಯಿ ಕುಂದಾಪುರ (1892–1992)

ತಿಲಕರ ಅಂತಿಮಯಾತ್ರೆಯನ್ನು ನೋಡಿ ಪ್ರಭಾ ವಿತರಾಗಿ ಸ್ವಾತಂತ್ರ್ಯ ಹೋರಾಟಕ್ಕಿಳಿದ ಉಮಾಬಾಯಿ ಅವರು ಅಂದಿನ ರಿವಾಜಿನಂತೆ ಬಾಲ್ಯವಿವಾಹವಾಗಿ ಬಾಂಬೆಯಲ್ಲಿ ವಾಸವಿದ್ದರು. ತಮ್ಮ ಮಾವ ನವರ ಬೆಂಬಲದಿಂದ ತಮ್ಮ 27ನೇ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದ ಉಮಾಬಾಯಿ ಅವರು ತಮ್ಮ ಪತಿ ಕ್ಷಯ ದಿಂದ ತೀರಿಕೊಂಡಾಗ ಮಾವನವರೊಂದಿಗೆ ಹುಬ್ಬಳ್ಳಿ ಸೇರಿದರು. ಅಲ್ಲಿ ನ.ಸು. ಹರ್ಡೀಕರ್ ಅವರ ಮಾರ್ಗದರ್ಶನದಲ್ಲಿ ಹೋರಾಟಕ್ಕೆ ಧುಮುಕಿದರು. ಅವರ ಮನೆ, ಅವರ ಮಾವನವರ ಕರ್ನಾಟಕ ಪ್ರೆಸ್ ಸ್ವಾತಂತ್ರ್ಯ ವೀರರಿಗೆ ಆಶ್ರಯ ತಾಣವಾಯಿತು. ತಮ್ಮ ಹೋರಾಟಗಳಿಗಾಗಿ ಯರವಾಡ ಜೈಲು ಸೇರುವಂತಾದರೂ, ಅವರ ಹೋರಾಟದ ಕೆಚ್ಚು ಕಡಿಮೆಯಾಗಲಿಲ್ಲ. ಬಹುತೇಕ ಎಲ್ಲ ಚಳುವಳಿಗಳಲ್ಲೂ ಭಾಗವಹಿಸಿದ ಉಮಾಬಾಯಿ, ಮುಖ್ಯವಾಗಿ ತನ್ನಂತಹ ವಿಧವೆಯರನ್ನು ಹೋರಾಟಕ್ಕೆ ಧುಮುಕುವಂತೆ ಹುರಿ ದುಂಬಿಸಿದರು. ಸ್ವಾತಂತ್ರ್ಯಾನಂತರ ಸರ್ಕಾರದ ಯಾವುದೇ ಬಿರುದು ಬಾವಲಿ ಸನ್ಮಾನ ಮಾಸಾಶನಗಳನ್ನು ಸ್ವೀಕರಿಸದ ಉಮಾಬಾಯಿ ಸಮಾಜ ಸೇವಕಿಯಾಗಿ, ತಳಮಟ್ಟದ ಕಾರ್ಯಕರ್ತೆಯಾಗಿಯೇ ದುಡಿದು ತಮ್ಮ ನೂರನೆಯ ವಯಸ್ಸಿನಲ್ಲಿ ನಿಧನರಾದರು.



ನಾಗಮ್ಮ ಪಾಟೀಲ್ (1905–2002)



ಸ್ವಾತಂತ್ರ್ಯ ಹೋರಾಟಗಾರ ಸರ್ದಾರ್ ವೀರನಗೌಡ ಪಾಟೀಲರ ಧರ್ಮಪತ್ನಿ ನಾಗಮ್ಮನವರು ಪತಿಯ ಆಶಯಗಳಿಗೆ ನೆರಳಾಗಿ ನಿಂತವರು ಮಾತ್ರವಲ್ಲ, ಅಪ್ಪಟ ಗಾಂಧೀ ಅನುಯಾಯಿ ಆಗಿದ್ದ ಅವರು, ಸ್ವಾತಂತ್ರ್ಯ ಹೋರಾಟದೊಂದಿಗೆ, ಗಾಂಧೀಜಿ ಅವರು ಪ್ರತಿಪಾದಿಸುತ್ತಿದ್ದ ಹರಿಜನೋದ್ಧಾರದಲ್ಲಿ ಅಪಾರ ನಂಬಿಕೆಯಿಟ್ಟವರು. ಹರಿಜನ ಬಾಲಿಕಾ ಆಶ್ರಮ ಸ್ಥಾಪಿಸಿ, ಊರೂರು ತಿರುಗಿ ನೆರವಿನ ಅವಶ್ಯಕತೆಯಿದ್ದ ಹರಿಜನ ಬಾಲಕಿಯರನ್ನು ಆಶ್ರಮಕ್ಕೆ ಕರೆತಂದು ಅವರ ಜೀವನಕ್ಕೆ ಗಟ್ಟಿ ಬುನಾದಿ ಹಾಕಿಕೊಟ್ಟರು. ಅಲ್ಲದೇ ಅಬಲ ಮಹಿಳೆಯರಿಗಾಗಿ ಸಾಕಷ್ಟು ಕೆಲಸ ಮಾಡಿದರು. ವಿನೋಬಾ ಭಾವೆ ಅವರ ಭೂದಾನ ಚಳುವಳಿಗೆ ಸೇರಿದ ಈ ಪ್ರಾಂತ್ಯದ ಮೊದಲಿಗರು. ರಾಣೇಬೆನ್ನೂರು ಕ್ಷೇತ್ರದಿಂದ ಬಾಂಬೆ ಪ್ರೆಸಿಡೆನ್ಸಿಗೆ ಆಯ್ಕೆಯಾಗಿದ್ದರು.

ಕಮಲಾದೇವಿ ಚಟ್ಟೋಪಾಧ್ಯಾಯ (1903–1988)



ಕಮಲಾದೇವಿ ಅವರದು ಹೋರಾಟದ ಬದುಕೇ. ಎಳವೆಯಲ್ಲಿಯೇ ಮದುವೆಯಾಗಿ ಬಾಲ ವಿಧವೆಯಾಗಿದ್ದ ಕಮಲಾ ದೇವಿಯವರು ನಂತರ ಸರೋಜಿನಿ ನಾಯ್ಡು ಅವರ ಸಹೋದರ ಹರೀಂದ್ರನಾಥ್ ಚಟ್ಟೋಪಾಧ್ಯರನ್ನು ಮದುವೆಯಾಗಿ ಲಂಡನ್ನಿಗೆ ಹೋಗಿ ಉನ್ನತ ಶಿಕ್ಷಣ ಪಡೆಯುತ್ತಾರೆ. ಭಾರತಕ್ಕೆ ಹಿಂತಿರುಗಿದ ನಂತರ ಚಳವಳಿಯ ಭಾಗವಾಗುತ್ತಾರೆ. ಸೇವಾದಳದ ನೇತೃತ್ವ ವಹಿಸುತ್ತಾರೆ. ಬೆಂಕಿ, ಗುಂಡು ಮತ್ತು ಲಾಠಿಗೆ ಹೆದರದಂತೆ ಮಹಿಳೆಯರನ್ನು ತರಬೇತು ಮಾಡಿ ಸತ್ಯಾಗ್ರಹಗಳಿಗೆ ಸನ್ನದ್ಧರನ್ನಾಗಿ ಮಾಡುವ ಹೊಣೆ ವಹಿಸಿಕೊಳ್ಳುತ್ತಾರೆ. ನಂತರದ ದಿನಗಳಲ್ಲಿ ಭಾರತೀಯ ಕರಕುಶಲ ಕ್ಷೇತ್ರದ ಔನ್ನತ್ಯಕ್ಕೆ ಶ್ರಮಿಸಿದ ಕಮಲಾದೇವಿ ಅವರಿಗೆ 1966ರಲ್ಲಿ ಮ್ಯಾಗ್ಸಸ್ಸೇ ಪ್ರಶಸ್ತಿ ಲಭಿಸಿತು.

ಇವರಷ್ಟೇ ಅಲ್ಲದೇ, ಕೃಷ್ಣಾಬಾಯಿ ಪಣ್ಜೀಕರ್, ಜಯದೇವಿ ತಾಯಿಲಿಗಾಡೆ, ಸೀತಾಬಾಯಿ ರಾಮಚಂದ್ರ, ಶಕುಂತಲಾ ಕುರ್ತಕೋಟಿ, ಸುಬ್ಬಮ್ಮ ಜೋಯಿಸ್, ಶಾಂತಾಬಾಯಿ ಕರ್ಮಾರ್ಕರ, ಅಂಬಕ್ಕ ಬಳೆಗಾರ, ರಾಧಾ ಕಾರ್ನಾಡ್, ಆನಂದೀ ಬಾಯಿ, ಟಿ.ಸುನಂದಮ್ಮ, ಪದ್ಮಾವತಿ ಬಿರಾದರಿ, ರಮಾಬಾಯಿ ಪ್ರಭು, ಭಾಗೀರಥೀ ಬಾಯಿ ಪುರಾಣಿಕ, ದೇವಯಾನಿ ಹರಿ ಪೈ, ಲಕ್ಷ್ಮೀಬಾಯಿ ರಂಗಪ್ಪ, ಸರಸ್ವತೀ ಬಾಯಿ ಚೌಗುಲೆ, ತಂಗೆವ್ವ ಬಡಿಗೇರ ಪಟ್ಟಿ ಉದ್ದ ಬೆಳೆಯುತ್ತದೆ. ಅಲ್ಲದೇ ಈಸೂರಿನ ಸ್ವಾತಂತ್ರ್ಯ ಚಳುವಳಿಯ ಸಿದ್ಧಮ್ಮ, ಹಾಲಮ್ಮ ಮತ್ತು ಪಾರ್ವತಮ್ಮನವರ ತ್ಯಾಗ ಬಲಿದಾನ ಅವಿಸ್ಮರಣೀಯವಾದುದು.

ಸುಧಾಮೂರ್ತಿ ಅವರು ತಮ್ಮ ಅನುಭವವನ್ನು Forgetting Our Own History ಎನ್ನುವ ಒಂದು ಪ್ರಬಂಧದಲ್ಲಿ ಹಂಚಿಕೊಂಡಿದ್ದಾರೆ. ಓಜಸ್ವಿನಿ ಪ್ರಶಸ್ತಿಯಿಂದ ಸನ್ಮಾನಿತರಾದ ಅವರಿಗೆ ಝಾನ್ಸಿರಾಣಿ ಲಕ್ಷ್ಮೀಬಾಯಿಯ ಪ್ರತಿಮೆ ನೀಡಿ ಗೌರವಿಸಿರುತ್ತಾರೆ. ಅತ್ಯಂತ ಹೆಮ್ಮೆಯಿಂದ ಅದರೊಂದಿಗೆ ವಿಮಾನದಲ್ಲಿ ವಾಪಸ್ ಬೆಂಗಳೂರಿಗೆ ಬರುತ್ತಿರುತ್ತಾರೆ. ಸ್ನಾತಕೋತ್ತರ ಓದುತ್ತಿದ್ದ ಅವರ ಪಕ್ಕದ ಸೀಟಿನ ಇಬ್ಬರು ಯುವ ಸೋದರ ಸೋದರಿ ಕುದುರೆಯ ಮೇಲೆ ಕುಳಿತ ಝಾನ್ಸೀ ರಾಣಿಯ ಪ್ರತಿಮೆಯನ್ನು ನೋಡಿ, "ನಿಮಗೆ ರೇಸ್ ಎಂದರೆ ಇಷ್ಟವೇ? ಅದರಲ್ಲಿ ಈ ಮೆಮೆಂಟೋ ಪಡೆದಿರಾ?" ಎಂದು ಕೇಳುತ್ತಾರೆ. ಅವರ ಪ್ರಶ್ನೆಗೆ ಸಖೇದಾಶ್ಚರ್ಯ ವ್ಯಕ್ತಪಡಿಸುವ ಸುಧಾಮೂರ್ತಿ ಅವರು ಅವರಿಗೆ ತಿಳಿ ಹೇಳುತ್ತಾರೆ. ಮತ್ತು ಗಾಢ ವಿಷಾದ ವ್ಯಕ್ತಪಡಿಸುತ್ತಾರೆ. ಇಂದಿನ ಬಹುತೇಕ ಯುವಜನತೆಯ ಸ್ಥಿತಿ ಇದೇ ಆಗಿದೆ. ಇವರೆಲ್ಲರ ಮನೋಭಾವ ಬದಲಾಗಿ "ದೇಶ ನನ್ನದು, ಇದಕ್ಕಾಗಿ ಹೋರಾಡಿದವರು ಪ್ರಾತಃಸ್ಮರಣೀಯರು" ಎನ್ನುವ ಭಾವ ಯುವಜನತೆಯಲ್ಲಿ ಮಾತ್ರವಲ್ಲ, ಎಲ್ಲರಲ್ಲೂ ಮೂಡಿದಾಗ ಈ ಆಚರಣೆಯ ಸಂಭ್ರಮ ಇಮ್ಮಡಿಗೊಳ್ಳುತ್ತದೆ. ಭಾರತ ಮಾತೆಗೆ ಜೈ ಎಂಬ ಘೋಷಣೆಗೆ ಅರ್ಥವೂ ಬರುತ್ತದೆ.

ನಾಳೆ ವರಮಹಾಲಕ್ಷ್ಮಿ ವ್ರತ; ಖರೀದಿ ಸಂಭ್ರಮ



ಮೈಸೂರು, ಆ.14(ಎಂಕೆ)– ಶ್ರಾವಣ ಮಾಸದಲ್ಲಿ ಅತ್ಯಂತ ಸಡಗರ, ಸಂಭ್ರಮದಿಂದ ಐಶ್ವರ್ಯ, ಸಕಲ ಸಂಪತ್ತನ್ನು ತರಲೆಂದು ಪ್ರಾರ್ಥಿಸುವ ವರಮಹಾಲಕ್ಷ್ಮಿ ವ್ರತಾಚರಣೆಗೆ ಮೈಸೂರು ಸಜ್ಜಾಗಿದ್ದು, ಜನ ಜಾತ್ರೆಯಿಂದ ತುಂಬಿ ತುಳುಕುತ್ತಿರುವ ಮಾರುಕಟ್ಟೆಗಳಲ್ಲಿ ಪೂಜಾ ಸಾಮಗ್ರಿಗಳ ಭರ್ಜರಿ ವಹಿವಾಟು ನಡೆಯುತ್ತಿದೆ.

ನಗರದ ದೇವರಾಜ ಮಾರುಕಟ್ಟೆ, ಮಂಡಿ ಮೊಹಲ್ಲಾ ಮಾರುಕಟ್ಟೆ, ಅಗ್ರಹಾರದ ವಾಣಿ ವಿಲಾಸ ಮಾರುಕಟ್ಟೆ, ಎಂಜಿ ರಸ್ತೆ ಮಾರುಕಟ್ಟೆ ಸೇರಿದಂತೆ ರಸ್ತೆ ಬದಿಗಳಲ್ಲಿ ಹೂ, ಹಣ್ಣು ಇನ್ನಿತರೆ ಪೂಜಾ ಸಾಮಗ್ರಿಗಳನ್ನು ಖರೀದಿ ಬಾರೀ ಜೋರಾಗಿದ್ದು, ಎಲ್ಲಾ ಮಾರುಕಟ್ಟೆಗಳು ಜನ ಜಾತ್ರೆಯೇ ನೆರೆದಿದೆ.

ಪಾರಂಪರಿಕ ದೇವರಾಜ ಮಾರುಕಟ್ಟೆಯಲ್ಲಿ ತಿರುಗಾಡಲೂ ಸಾಧ್ಯವಿಲ್ಲವೆನ್ನುವಷ್ಟರ ಮಟ್ಟಿಗೆ ಜನ ಸಂದಣಿಯಾಗುತ್ತಿದ್ದು, ವಿವಿಧ ಬಗೆಯ ಹೂ, ಹಣ್ಣುಗಳು ತರಾವರಿ ಬೆಲೆಗೆ ಬಿಕರಿಯಾಗುತ್ತಿವೆ. ಅಲ್ಲದೆ ವರಮಹಾಲಕ್ಷ್ಮಿ ಮುಖವಾಡ ಸೇರಿದಂತೆ ಇನ್ನಿತರೆ ಪೂಜಾ ಸಾಮಗ್ರಿಗಳ ಬೇಡಿಕೆ ಹೆಚ್ಚಾಗಿದ್ದು, ನೂಕು–ನುಗ್ಗಲಿನ ನಡುವೆ ಭರ್ಜರಿ ವ್ಯಾಪಾರ ನಡೆಯುತ್ತಿದೆ.

ಸೇವಂತಿ ಹೂ ಮಾರ್‌ಗೆ 100–120 ರೂ., ವಿವಿಧ ಬಣ್ಣದ ಬಿಡಿ ರೋಜ್ ಹೂಗಳ 250 ಗ್ರಾಂಗೆ 50–80 ರೂ., ಮಲ್ಲಿಗೆ. ಕನಕಾಂಬರ ಬಿಡಿ ಹೂಗಳು 250 ಗ್ರಾಂಗೆ 150–200 ರೂ., ಕಮಲದ ಹೂ ಗಾತ್ರಕ್ಕೆ ಅನುಗುಣವಾಗಿ ಒಂದಕ್ಕೆ 20–50 ರೂ ಇದ್ದರೆ, ಹೂವಿನ ಹಾರಗಳಿಗೆ 200 ರಿಂದ ಸಾವಿರಕ್ಕೂ ಹೆಚ್ಚು ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ವಿಳ್ಯದೆಲೆ, ಅಡಿಕೆ, ಬೆಲ್ಲ, ಗೊಬ್ಬರಿ, ಅರಿಸಿನ–ಕುಂಕುಮ ಇನ್ನಿತರ ಪೂಜಾ ಸಾಮಗ್ರಿಗಳ ಮಾರಾಟ ಹೆಚ್ಚಿದೆ.

ಹಣ್ಣುಗಳ ಬೆಲೆಯಂತು ಗಗನಕ್ಕೇರಿದ್ದು, ಹೇಗೋ ಖರೀದಿಸಿ ಪೂಜೆ ಮಾಡಿ ಲಕ್ಷ್ಮಿಯನ್ನು ಹೊಲಿಸಿಕೊಂಡರೇ ಸಾಕು ಎಂಬಂತಿದೆ. ಸೇಬು ಕೆಜಿಗೆ 150–250 ರೂ., ದಾಳಿಂಬೆ ಕೆಜಿಗೆ 100–250 ರೂ., ಮರಸೇಬು ಕೆಜಿಗೆ 120–150 ರೂ., ಮೊಸಂಬಿ 80–100 ರೂ., ಕಿತ್ತಳೆ 80–100 ರೂ., ಅನಾನಸ್ ಗಾತ್ರಕ್ಕೆ ತಕ್ಕಂತೆ ಒಂದಕ್ಕೆ 20–50 ರೂ., ಏಲಕ್ಕಿ ಬಾಳೆ ಕೆಜಿಗೆ 100–150 ರೂ. ಸೇರಿದಂತೆ ಇನ್ನೂ ವಿವಿಧ ಬಗೆಯ ಹಣ್ಣುಗಳ ವ್ಯಾಪಾರ ಜೋರಾಗಿದೆ. ಹಾಗೆಯೇ ದಿನಸಿ ಪದಾರ್ಥಗಳು, ಎಣ್ಣೆ–ತುಪ್ಪ, ಡ್ರೈಫ್ರೂಟ್ ಮತ್ತಿತರ ಪದಾರ್ಥಗಳ ಖರೀದಿಯೂ ಉತ್ತಮವಾಗಿದ್ದು, ಶ್ರದ್ಧಾಭಕ್ತಿಯಿಂದ ಮಹಾಲಕ್ಷ್ಮಿಯನ್ನು ಸ್ವಾಗತಿಸಲು ಮೈಸೂರಿನ ನಾಗರಿಕರು ಅದರಲ್ಲೂ ಮಹಿಳೆಯಲು ಸಜ್ಜಾಗಿದ್ದಾರೆ.

ಹರ್‌ಘರ್ ತಿರಂಗ: ಗಾಳಿಪಟ ಉತ್ಸವ



ಮೈಸೂರು, ಆ.14(ಎಂಕೆ)– ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಹಮ್ಮಿಕೊಂಡಿರುವ ಹರ್‌ಘರ್ ತಿರಂಗ ಕಾರ್ಯಕ್ರಮದ ಅಂಗವಾಗಿ ಜಿಲ್ಲಾಡಳಿತ, ಜಿಪಂ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗಾಳಿಪಟ ಉತ್ಸವ ನಡೆಸಲಾಯಿತು.

ಗಾಳಿಪಟ ಉತ್ಸವಕ್ಕೆ ಚಾಲನೆ ನೀಡಿದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಭಾರತೀಯರೆಲ್ಲರ ಹೃದಯದಲ್ಲಿ ದೀಪ ಹಚ್ಚುವುದೇ ಸ್ವಾತಂತ್ರ್ಯ. ಇದು ನಮಗೆ ಸುಮ್ಮನೆ ದಕ್ಕಿದ್ದಲ್ಲ. ಇದಕ್ಕಾಗಿ ಲಕ್ಷಾಂತರ ಜನರು ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ. ಇದರ ಜವಾಬ್ದಾರಿ ಅರಿತು ದೇಶಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಬೇಕು ಎಂದು ಕರೆ ನೀಡಿದರು.

ಹರ್‌ಘರ್ ತಿರಂಗ ಎಂದರೆ ಎಲ್ಲರ ಮನೆಯಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವುದು. ಆ ನಿಟ್ಟಿನಲ್ಲಿ ಇಂದು ಗಾಳಿಪಟ ಉತ್ಸವವನ್ನು ಆಯೋಜಿಸಲಾಗಿದ್ದು, ನಾವು ದೇಶಕ್ಕಾಗಿ ಏನೆಲ್ಲಾ ಕೊಡುಗೆ ನೀಡಬೇಕು ಎಂಬುದನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು ಎಂಬುದರ ಸಂಕೇತವೇ ಗಾಳಿಪಟ. ಭೂಮಿಯ ಮೇಲಿದ್ದಂತಹ ಗಾಳಿಪಟವನ್ನು ಗಾಳಿಯಲ್ಲಿ ಹಾರಲು ಬಿಟ್ಟಾಗ ಅದು ಉತ್ತುಂಗಕ್ಕೆ ಹೋಗುತ್ತದೆ ಅದೇ ರೀತಿ ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ನಿರ್ದಿಷ್ಟ ಗುರಿಯನ್ನು ಹೊಂದಿ, ಅದರಲ್ಲಿ ಉತ್ತುಂಗಕ್ಕೆ ಹೋಗುವುದರ ಮೂಲಕ ದೇಶಕ್ಕೆ ಹೆಮ್ಮೆ ಹಾಗೂ ಗೌರವ ತರಬೇಕು ಎಂದು ಸಲಹೆ ನೀಡಿದರು.

ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಡಿ. ಅಶೋಕ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 15 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 121 | ಪುಟಗಳು: 12+IV

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಶುಭಾಶಯಗಳು



ನಾಡಿನ ಸಮಸ್ತರಿಗೂ
ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಬಿಡುವು

ಸ್ವಾತಂತ್ರ್ಯೋತ್ಸವ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 16–8–2024ರ ಶುಕ್ರವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ. –ಸಂ.

ಮುಡಾದಲ್ಲಿ ಸಾವಿರಾರು ನಿವೇಶನ ಅಕ್ರಮ ಮಂಜೂರಾತಿಗೆ ಮತ್ತೊಂದು ಪುರಾವೆ!?; ಫಲಾನುಭವಿಗಳಿಗೆ ನಿವೇಶನದ ಪ್ರಥಮ ದಾಖಲೆಯಾಗಿ ನೀಡುವ ಮಂಜೂರಾತಿ ಪತ್ರದ


ಸೆಕ್ಯೂರಿಟಿ ಬಾಂಡ್ ಪ್ರತಿಗಳು ಗೊತ್ತುಗುರಿ ಇಲ್ಲದೆ ಕಂಡ ಕಂಡವರಿಗೆ ಹಂಚಿಕೆ

ಮೈಸೂರು, ಆ. 14– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ರೆಕಾರ್ಡ್ ರೂಂನಿಂದ ಕಳೆದ ನಾಲ್ಕು ವರ್ಷದ ಅವಧಿಯಲ್ಲಿ ನಿವೇಶನ ಮಂಜೂರಾದರೆ ಫಲಾನುಭವಿಗೆ ನೀಡಲಾಗುವ ಮಂಜೂರಾತಿ ಪತ್ರಕ್ಕೆ ಬಳಸಲಾಗುವ ಭದ್ರತಾ ಬಾಂಡ್ ಪ್ರತಿಗಳು (ಸೆಕ್ಯೂರಿಟಿ ಬಾಂಡ್ ಶೀಟ್) ನಿಯಮಾವಳಿ ಧಿಕ್ಕರಿಸಿ, ಗೊತ್ತು–ಗುರಿ ಇಲ್ಲದೆ ಕಚೇರಿಯ ವಿವಿಧ ಅಧಿಕಾರಿಗಳಿಗೆ ವಿತರಣೆಯಾಗಿವೆ. ಹೀಗೆ 4839 ಬಾಂಡ್ ಪ್ರತಿಗಳು ಕಂಡ ಕಂಡವರಿಗೆ ಹಂಚಿಕೆಯಾಗಿದ್ದು, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹೇಳುವಂತೆ ಮುಡಾದಲ್ಲಿ ಬರೀ 1200 ನಿವೇಶನ ಮಾತ್ರ ಅಕ್ರಮವಾಗಿ ಹಂಚಿಕೆಯಾಗಿಲ್ಲ; ಅವುಗಳ ಸಂಖ್ಯೆ 3500ಕ್ಕೂ ಅಧಿಕ ಎಂಬ ಸಂಶಯ ಈಗ ಬಲವಾಗಿದೆ.

ಮುಡಾ ದಾಖಲೆಗಳ ಪ್ರಕಾರ 2021ರ ಏಪ್ರಿಲ್ 6ರಿಂದ 2024ರ ಜುಲೈ 3ರವರೆಗೆ ಒಟ್ಟು 4839 ಸುರಕ್ಷತಾ ಬಾಂಡ್ ಪ್ರತಿಗಳನ್ನು ಅನಧಿಕೃತವಾಗಿ ಹಲವು ಅಧಿಕಾರಿಗಳಿಗೆ ವಿತರಿಸಲಾಗಿದೆ. ಆದರೆ ಮುಡಾ ಹಗರಣ ಬಯಲಾದ ನಂತರ ಇತ್ತೀಚೆಗೆ ನಗರಾಭಿವೃದ್ಧಿ ಇಲಾಖೆ ಸಚಿವರು ಮುಡಾದಿಂದ ಈ ಅವಧಿಯಲ್ಲಿ 1219 ನಿವೇಶನಗಳನ್ನು ಮಾತ್ರವೇ ಮಂಜೂರು ಮಾಡಲಾಗಿದೆ ಎಂದು ಹೇಳಿದ್ದರು.

■ 6ನೇ ಪುಟಕ್ಕೆ




ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಮುಡಾ ಸೆಕ್ಯೂರಿಟಿ ಬಾಂಡ್ ಪ್ರತಿ

ಹಗರಣ ಬಯಲಾದ ನಂತರವೂ 500 ಬಾಂಡ್ ವಿತರಣೆ...

ಮುಡಾದಲ್ಲಿ ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂಬ ಸಂಗತಿ ಬಯಲಾಗಿ, ಈ ಹಗರಣ ರಾಜ್ಯಾದ್ಯಂತ ಸದ್ದು ಮಾಡುತ್ತಿತ್ತು. ಸ್ವತಃ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರೇ ವಿಶೇಷ ವಿಮಾನದಲ್ಲಿ ಬೆಂಗಳೂರಿನಿಂದ ಮೈಸೂರಿಗೆ ದೌಡಾಯಿಸಿದರು. ಮುಡಾ ಕಚೇರಿಯಲ್ಲಿ ತುರ್ತು ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ವೇಳೆ ಮುಡಾದಲ್ಲಿರುವ ಸಂಬಂಧಿಸಿದ ಅಧಿಕಾರಿಗಳನ್ನು ವರ್ಗಾವಣೆ ಮಾಡಿರುವುದಾಗಿ ಘೋಷಿಸಿದ್ದರು.

ಸಚಿವರಿಂದ ಈ ಘೋಷಣೆ ಹೊರಡಿಸಿದ್ದು ಇದೇ ಜುಲೈ 1ರಂದು. ವಿಚಿತ್ರವೆಂದರೆ ಇದಾದ ಎರಡನೇ ದಿನಕ್ಕೆ ಮುಡಾ ಆಯುಕ್ತರ ಆಪ್ತ ಸಹಾಯಕ ಪ್ರಶಾಂತ್ ಅವರಿಗೆ ರೆಕಾರ್ಡ್ ರೂಂನಿಂದ ಒಂದೇ ದಿನ ಬರೋಬ್ಬರಿ 500 ಭದ್ರತಾ ಬಾಂಡ್ ಪ್ರತಿಗಳನ್ನು ವಿತರಿಸಲಾಗಿದೆ (ಬಾಂಡ್ ಪ್ರತಿ ಸಂಖ್ಯೆ:

■ 6ನೇ ಪುಟಕ್ಕೆ



ಬಿಪಿಎಲ್ ಕಾರ್ಡ್‌ಗೆ ಸರ್ಜರಿ

● ಬಡವರಿಗಷ್ಟೇ 'ಗ್ಯಾರಂಟಿ' ನೀಡಲು ಬಿಪಿಎಲ್ ಕಾರ್ಡ್ ಭಾರಿ ಪ್ರಮಾಣದಲ್ಲಿ ಪರಿಷ್ಕರಣೆ ● ಆ.22ರಂದು ನಡೆಯುವ ಸಂಪುಟ ಸಭೆಯಲ್ಲಿ ಮಹತ್ವದ ನಿರ್ಧಾರ ● ಪ್ರಭಾವಿಗಳ ಬಳಿ ಇರುವ ಬಿಪಿಎಲ್ ಕಾರ್ಡ್ ಕಸಿದುಕೊಳ್ಳಲು ಕಠಿಣ ನಿಲುವು

ಬೆಂಗಳೂರು, ಆ.14 (ಕೆಎಂಶಿ)– ಬಡತನದ ರೇಖೆಗಿಂತ ಕೆಳಗಿನ ಕಡುಬಡವರಿಗಷ್ಟೇ ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸಲು ನಿರ್ಧರಿಸಿರುವ ರಾಜ್ಯ ಸರ್ಕಾರ, ಬಿಪಿಎಲ್ ಕಾರ್ಡ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ಪರಿಷ್ಕರಿಸಲು ನಿರ್ಧರಿಸಿದೆ.

ಬರುವ 22ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ಚರ್ಚಿಸಿ, ಗ್ಯಾರಂಟಿ ಯೋಜನೆಗಳನ್ನು ಉಳ್ಳವರಿಂದ ಕಸಿದುಕೊಂಡು ಬಡವರಿಗಷ್ಟೇ ಇದರ ಸವಲತ್ತು ಕಲ್ಪಿಸುವ ಉದ್ದೇಶದಿಂದ ರೂಪು–ರೇಷೆ ಸಿದ್ಧಪಡಿಸಲು ಸಮಿತಿ ರಚನೆಗೆ ಮುಂದಾಗಿದೆ.




ಉಳ್ಳವರೂ ಗ್ಯಾರಂಟಿ ಯೋಜನೆಯ ಫಲಾನುಭವಿಗಳಾಗಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು 60 ಸಾವಿರ ಕೋಟಿ ರೂ. ಹೊರೆ ಬೀಳುತ್ತದೆ. ಯೋಜನೆಯನ್ನು ಬಿಪಿಎಲ್ ಕಾರ್ಡ್ ಹೊಂದಿರುವ ಅದರಲ್ಲೂ ಕಡುಬಡವರಿಗಷ್ಟೇ ಸೀಮಿತಗೊಳಿಸಲು ಪಡಿತರ ಚೀಟಿ ಪರಿಷ್ಕರಿಸಲು ನಿರ್ಧರಿಸಿದೆ. ಕಳೆದ ಜೂನ್ 20, 2023ರ ಅಂತ್ಯಕ್ಕೆ ರಾಜ್ಯದಲ್ಲಿ 1.13 ಕೋಟಿ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿ ಹೊಂದಿವೆ. ಅಂದರೆ ರಾಜ್ಯದ ಶೇ.85.23 ಕುಟುಂಬಗಳಿಗೆ ಈ ಸವಲತ್ತು ದೊರೆಯುತ್ತಿದೆ. ಬಿಪಿಎಲ್ ಮಾನದಂಡದ ಆಧಾರದ ಮೇಲೆ ಶೇ.15ರಷ್ಟು ಕುಟುಂಬಗಳು ಮಾತ್ರ ಬಡತನ ರೇಖೆಗಿಂತ ಮೇಲಿನ ಕುಟುಂಬಗಳಾಗಿವೆ. ಬಲಾಢ್ಯರು ಮತ್ತು ಪ್ರಭಾವಿಗಳು, ಉಳ್ಳವರು ಬಿಪಿಎಲ್ ಚೀಟಿ ಪಡೆದು, ಎಲ್ಲಾ ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಇಂತಹವರಿಗೆ ಕಡಿವಾಣ ಹಾಕಲು ಸರ್ಕಾರ ನಿರ್ಧರಿಸಿದೆ. ರಾಷ್ಟ್ರೀಯ ಅಂಕಿ–ಅಂಶಗಳನ್ನು ಆಧಾರವಾಗಿಟ್ಟುಕೊಂಡು ಕಡುಬಡವರಿಗೆ ಮಾತ್ರ ಅಂದರೆ ಶೇ.60ರಷ್ಟು ಬಿಪಿಎಲ್ ಪಡಿತರ ಚೀಟಿಯನ್ನು ರದ್ದು ಮಾಡುವ

■ 11ನೇ ಪುಟಕ್ಕೆ

ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್‌ಗೆ ಅಮೆರಿಕ ವೀಸಾ ನಿರಾಕರಣೆ

ಅಕ್ಕ ಸಮ್ಮೇಳನ ಸೇರಿ ವಿವಿಧ ಕಾರ್ಯಕ್ರಮದಲ್ಲಿ ಭಾಗಿಯಾಗಲು ಉದ್ದೇಶಿಸಿದ್ದರು



ಮೈಸೂರು, ಆ.14 (ಪಿಎಂ)– ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪಿಸಲಾಗಿರುವ ಬಾಲರಾಮನ ಮೂರ್ತಿಯ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಅಮೆರಿಕ ವೀಸಾ ನಿರಾಕರಿಸಲಾಗಿದೆ. ದೆಹಲಿಯ ಇಂಡಿಯಾ ಗೇಟ್ ಬಳಿಯ ಅಮರ್ ಜವಾನ್ ಜ್ಯೋತಿಯ ಹಿಂದೆ ಸ್ಥಾಪಿಸಲಾಗಿರುವ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆ, ಕೇದಾರನಾಥದ ಆದಿ ಶಂಕರಾಚಾರ್ಯರ ಪ್ರತಿಮೆ ಸೇರಿದಂತೆ ಹಲವು ಪ್ರತಿಮೆ, ವಿಗ್ರಹ ಕೆತ್ತನೆಯ ಮೂಲಕ ಅರುಣ್ ಯೋಗಿರಾಜ್ ಖ್ಯಾತನಾಮರಾಗಿದ್ದಾರೆ.

ಅಮೆರಿಕದಲ್ಲಿ ಆಯೋಜಿಸಲಾಗಿರುವ ಅಕ್ಕ (ಅಮೆರಿಕ ಕನ್ನಡ ಕೂಟಗಳ ಆಗರ) ವಿಶ್ವ ಕನ್ನಡ ಸಮ್ಮೇಳನ ಸೇರಿದಂತೆ ಇನ್ನು ಕೆಲ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಅವರಿಗೆ ಆಹ್ವಾನ ಬಂದಿತ್ತು. ಈ ಹಿನ್ನೆಲೆಯಲ್ಲಿ ಅವರು ಕುಟುಂಬ ಸಮೇತ ಅಮೆರಿಕ ಪ್ರವಾಸ ಕೈಗೊಳ್ಳಲು ಸಿದ್ಧಗೊಂಡಿದ್ದರು. ಆದರೆ ಇದೀಗ ಅವರಿಗೆ ದೆಹಲಿಯಲ್ಲಿರುವ ಅಮೆರಿಕ ರಾಯಭಾರಿ ಕಚೇರಿ ವೀಸಾ ನಿರಾಕರಿಸಿದೆ. ಈ ಸಂಬಂಧ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿರುವ ಅರುಣ್ ಯೋಗಿರಾಜ್, ಅಮೆರಿಕದಲ್ಲಿ ನಡೆಯಲಿರುವ ಅಕ್ಕ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲು ಆಹ್ವಾನವಿದ್ದ ಹಿನ್ನೆಲೆಯಲ್ಲಿ ವೀಸಾಗೆ ಅರ್ಜಿ ಸಲ್ಲಿಸಿದ್ದೆ. ಇದಲ್ಲದೆ, ಇನ್ನು ಎರಡ್ಮೂರು ಸಂಘಟನೆಗಳು ಆಹ್ವಾನ ನೀಡಿದ್ದವು.

■ 11ನೇ ಪುಟಕ್ಕೆ



ಐದನೇ ಪುಟದಿಂದ

ಕಂಡ ಕಂಡವರಿಗೆ ಹಂಚಿಕೆ

ರೆಕಾರ್ಡ್ ರೂಂನಿಂದ ವಿತರಣೆಯಾಗಿರುವ ಭದ್ರತಾ ಬಾಂಡ್ ಪ್ರತಿಗಳು ಹಾಗೂ ಸಚಿವರ ಉತ್ತರವನ್ನು ತಾಳೆ ಹಾಕಿದಾಗ ಮೂರೂವರೆ ಸಾವಿರಕ್ಕೂ ಹೆಚ್ಚು ನಿವೇಶನಗಳು ಅಕ್ರಮವಾಗಿ ಮಂಜೂರಾಗಿರುವ ಸಾಧ್ಯತೆ ಇದ್ದು, ನಿಜ ಸಂಗತಿ ತನಿಖೆಯಿಂದ ಬಯಲಾಗಬೇಕಿದೆ.

ರೆಕಾರ್ಡ್ ರೂಂನಿಂದ ಕಂಡಕಂಡವರಿಗೆ ಬಾಂಡ್ ಪ್ರತಿ ವಿತರಣೆ: ಫಲಾನುಭವಿಗೆ ನಿವೇಶನ ಮಂಜೂರಾದ ವೇಳೆ ಮಂಜೂರಾತಿ ಪತ್ರ ನೀಡಲು ಅಗತ್ಯವಿರುವ ಭದ್ರತಾ ಬಾಂಡ್ ಪ್ರತಿಯನ್ನು ವಿಶೇಷ ತಹಶೀಲ್ದಾರ್ ಮೂಲಕ ನೀಡಲಾಗುತ್ತದೆ. ಒಂದು ನಿವೇಶನಕ್ಕೆ ಅತಿ ಪ್ರಮುಖ ಪ್ರಥಮ ದಾಖಲೆಗೆ ಅಗತ್ಯವಿರುವ ಈ ಬಾಂಡ್ ಪ್ರತಿಯನ್ನು ರೆಕಾರ್ಡ್ ರೂಂನಿಂದ ವಿಶೇಷ ತಹಸೀಲ್ದಾರ್‌ಗೆ ವಿತರಿಸುವುದು ಮೊದಲಿಂದಲೂ ಅನುಸರಿಸಿಕೊಂಡು ಬಂದಿರುವ ಕ್ರಮ. ಆದರೆ, ಮುಡಾದ ರೆಕಾರ್ಡ್ ರೂಂನಿಂದ ಕಂಡಕಂಡವರಿಗೆಲ್ಲಾ ಕಳ್ಳೆಪುರಿಯಂತೆ ಈ ಬಾಂಡ್ ಪ್ರತಿ ವಿತರಣೆ ಮಾಡಿರುವುದು ದಾಖಲೆಗಳಲ್ಲಿ ಕಂಡು ಬಂದಿದೆ. 2021ರ ಏಪ್ರಿಲ್ 6ರಿಂದ 2024ರ ಜುಲೈ 3ರವರೆಗೆ ಭದ್ರತಾ ಬಾಂಡ್ ಪ್ರತಿ ವಿತರಿಸುವ ಯಾವುದೇ ಅಧಿಕಾರ ಇಲ್ಲದಿರುವ ಮುಡಾ ಆಯುಕ್ತರ ಆಪ್ತ ಸಹಾಯಕ ಪ್ರಶಾಂತ್ ಎಂಬುವರಿಗೆ ಬರೋಬ್ಬರಿ 1960 ಬಾಂಡ್ ಪ್ರತಿಗಳನ್ನು ರೆಕಾರ್ಡ್ ರೂಂನಿಂದ ವಿತರಿಸಲಾಗಿದೆ.

ಇಷ್ಟೂ ಪ್ರತಿಗಳ ಮೂಲಕ ಯಾರ್‍ಯಾರಿಗೆ ಮುಡಾ ನಿವೇಶನವನ್ನು ನೀಡಲಾಗಿದೆ ಎಂಬುದು ವಿಚಾರಣೆ ನಂತರ ಸತ್ಯ ಬಯಲಾಗಬೇಕಿದೆ. ಯಾವ ಆಧಾರದ ಮೇಲೆ ಹಾಗೂ ಯಾವ ಅಧಿಕಾರದೊಂದಿಗೆ ಇವರು ಬಾಂಡ್ ಪ್ರತಿ ಮೂಲಕ ನಿವೇಶನಗಳ ಮಂಜೂರಾತಿ ಪತ್ರಗಳನ್ನು ನೀಡಿದ್ದಾರೆ ಎಂಬ ನ್ಯಾಯಯುತವಾದ ಪ್ರಶ್ನೆಗೆ ಉತ್ತರ ಸಿಗಬೇಕಿದೆ. ಏಕೆಂದರೆ ಈ ಅಧಿಕಾರಿ ಬಾಂಡ್ ಪ್ರತಿ ಪಡೆಯುವ ಅಧಿಕಾರವನ್ನೇ ಹೊಂದಿಲ್ಲ. ಇಂತಹ ಅಧಿಕಾರಿಗೆ ರೆಕಾರ್ಡ್ ರೂಂನಿಂದ 1960 ಭದ್ರತಾ ಬಾಂಡ್ ಪ್ರತಿಗಳನ್ನು ಕೊಡಲು ಇಂಡೆಂಟ್‌ಗೆ ಸಹಿ ಮಾಡಿದ ಹಿರಿಯ ಅಧಿಕಾರಿ ಯಾರು? ಎಂಬುದನ್ನು ಪತ್ತೆ ಮಾಡಬೇಕಾದ ಅವಶ್ಯಕತೆ ಇದೆ.

ಮುಡಾ ಆಯುಕ್ತರ ಆಪ್ತ ಸಹಾಯಕ ಮಾತ್ರವಲ್ಲದೇ ವಲಯ ವಿಶೇಷ ತಹಸೀಲ್ದಾರ್ ಕಚೇರಿಯ ಪ್ರಥಮ ದರ್ಜೆ ಸಹಾಯಕ, ದ್ವಿತೀಯ ದರ್ಜೆ ಸಹಾಯಕ, ಅಕೌಂಟ್ ಸೆಕ್ಷನ್, ಸ್ಟೈಟ್ ಸೆಕ್ಷನ್ ಎಂಬ ಹೆಸರಿನಲ್ಲೂ ರೆಕಾರ್ಡ್ ರೂಂನಿಂದ ಭದ್ರತಾ ಬಾಂಡ್ ಪ್ರತಿಗಳನ್ನು ಪಡೆದಿರುವ ಬಗ್ಗೆ ಮುಡಾ ದಾಖಲೆಗಳು ಸಾರಿ ಹೇಳುತ್ತಿವೆ.

ದುರಂತವೇ: 2021ರ ಏಪ್ರಿಲ್ ತಿಂಗಳಲ್ಲಿ ಮುಡಾದಲ್ಲಿ ಬರೋಬ್ಬರಿ 5 ಸಾವಿರ ಭದ್ರತಾ ಬಾಂಡ್ ಪ್ರತಿ ಮುದ್ರಿಸಿದ್ದರ ಹಿಂದೆ ದುರುದ್ದೇಶವಿದೆ ಎಂಬ ಅನುಮಾನ ವ್ಯಕ್ತವಾಗಿದೆ. ಏಕೆಂದರೆ ಆ ಸಂದರ್ಭದಲ್ಲಿ ಮುಡಾದಿಂದ ಯಾವುದೇ ಬಡಾವಣೆ ಅಭಿವೃದ್ಧಿ ಮಾಡಿಲ್ಲ. ಫಲಾನುಭವಿಗಳಿಗೆ ಸಾವಿರಾರು ನಿವೇಶನಗಳನ್ನು ಹಂಚಬೇಕಾದ ಸಂದರ್ಭವೂ ಒದಗಿ ಬಂದಿಲ್ಲ. ಹೀಗಿದ್ದರೂ 5 ಸಾವಿರ ಭದ್ರತಾ ಬಾಂಡ್ ಪ್ರತಿ ಮುದ್ರಿಸಿರುವುದು ಯಕ್ಷಪ್ರಶ್ನೆಯಾಗಿದೆ. ಅಕ್ರಮವಾಗಿ ನಿವೇಶನಗಳನ್ನು ಹಂಚುವ ಸಲುವಾಗಿ ನಿವೇಶನದ ಪ್ರಥಮ ಅಮೂಲ್ಯ ದಾಖಲೆಯಾದ ಮಂಜೂರಾತಿ ಪತ್ರದ ಬಾಂಡ್ ಪ್ರತಿಗಳನ್ನು ಅವಶ್ಯಕತೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಮುದ್ರಿಸಲಾಗಿದೆ ಎಂಬ ಆರೋಪವನ್ನು ಅಲ್ಲಗಳೆಯಲಾಗುತ್ತಿಲ್ಲ.

500 ಬಾಂಡ್ ವಿತರಣೆ...

14342ರಿಂದ 14842). ಇಲ್ಲಿ ಉದ್ಭವವಾಗಿರುವ ಪ್ರಮುಖ ಪ್ರಶ್ನೆ ಎಂದರೆ ಜುಲೈ 1ರಂದು ಸಚಿವರು ಘೋಷಣೆ ಮಾಡಿದಂತೆ ಮುಡಾ ಆಯುಕ್ತರ ಆಪ್ತ ಸಹಾಯಕ ಪ್ರಶಾಂತ್ ವರ್ಗಾವಣೆಯಾಗಿರಲಿಲ್ಲವೇ? ಒಂದು ವೇಳೆ ವರ್ಗಾವಣೆಯಾಗಿದ್ದರೆ ಅವರಿಗೆ ಬಾಂಡ್ ಪ್ರತಿಗಳನ್ನು ರೆಕಾರ್ಡ್ ರೂಂನಿಂದ ವಿತರಿಸಿದ್ದಾರೂ ಹೇಗೆ? ಮುಡಾ ಹಗರಣ ದೊಡ್ಡ ಮಟ್ಟದಲ್ಲಿ ಸದ್ದು ಮಾಡುತ್ತಿದ್ದಾಗಲೇ ಪ್ರಶಾಂತ್ ರೆಕಾರ್ಡ್ ರೂಂನಿಂದ ಪಡೆದಿದ್ದ 500 ಬಾಂಡ್ ಪ್ರತಿಗಳ ಮೂಲಕ ನಿವೇಶನಗಳನ್ನು ವಿತರಿಸಲಾಗಿದೆಯೇ? ಎಂಬ ಸಂಗತಿ ಕೂಡ ಸರಿಯಾದ ತನಿಖೆಯಿಂದ ಹೊರಬರಬೇಕಿದೆ.

ಭದ್ರತಾ ಬಾಂಡ್ ಪ್ರತಿ ಮಹತ್ವವೇನು?

ನಿವೇಶನ ಬಯಸಿ ಅರ್ಜಿ ಸಲ್ಲಿಸಿದ ಫಲಾನುಭವಿಗೆ ಮುಡಾದಿಂದ ನಿವೇಶನ ಮಂಜೂರಾದರೆ ಅಧಿಕೃತವಾಗಿ ಮುಡಾದಿಂದ ಅಂತಹ ಫಲಾನುಭವಿಗೆ ಮೊದಲು ನೀಡುವುದೇ ಮಂಜೂರಾತಿ ಪತ್ರ. ಯಾವುದೇ ನಿವೇಶನಕ್ಕೆ ಸಂಬಂಧಿಸಿದ ಪ್ರಮುಖ ಹಾಗೂ ಪ್ರಥಮ ದಾಖಲೆ ಅದು ಈ ಮಂಜೂರಾತಿ ಪತ್ರವೇ ಆಗಿರುತ್ತದೆ. ಒಂದು ವೇಳೆ ಫಲಾನುಭವಿ ಮಂಜೂರಾತಿ ಪತ್ರವನ್ನು ಕಳೆದುಕೊಂಡರೆ ಆತ ನಿವೇಶನ ತನ್ನದೇ ಎಂಬುದನ್ನು ರುಜುವಾತುಪಡಿಸಲು ಪ್ರಥಮ ದಾಖಲೆಯೇ ಇಲ್ಲದಂತಾಗುತ್ತದೆ. ಯಾವುದಾದರೂ ನಿವೇಶನಕ್ಕೆ ಮಂಜೂರಾತಿ ಪತ್ರವೇ ಇಲ್ಲದೇ ಬೇರೆ ಪತ್ರಗಳು ಇದ್ದದ್ದೇ ಆದರೆ ಅವುಗಳೆಲ್ಲಾ ನಕಲಿ ದಾಖಲೆಗಳೆಂದು ಮೇಲ್ನೋಟಕ್ಕೆ ಪರಿಗಣಿಸಲ್ಪಡುತ್ತದೆ. ಹಾಗಾಗಿ ಇಂತಹ ಪ್ರಮುಖ ದಾಖಲೆಯನ್ನು ಸೆಕ್ಯೂರಿಟಿ ಬಾಂಡ್ ಶೀಟ್‌ಗಳಲ್ಲಿ ಅರ್ಥಾತ್ ಭದ್ರತಾ ಬಾಂಡ್ ಪ್ರತಿಗಳಲ್ಲಿ ಮುದ್ರಿಸಿ ನೀಡಲಾಗುತ್ತದೆ.

ಭದ್ರತಾ ಬಾಂಡ್ ಪ್ರತಿ ವಿಶೇಷತೆ

ನಿವೇಶನಕ್ಕೆ ಸಂಬಂಧಿಸಿದ ಮಂಜೂರಾತಿ ಪತ್ರಗಳು ನಕಲಿ ಆಗಬಾರದು ಎಂಬ ಉದ್ದೇಶದಿಂದ ಇದಕ್ಕೆ ಬಳಸುವ ಸೆಕ್ಯೂರಿಟಿ ಬಾಂಡ್ ಪ್ರತಿಗಳನ್ನು ಸುರಕ್ಷತಾ ಮಾನದಂಡದಂತೆ ಮುದ್ರಿಸಲಾಗುತ್ತದೆ. ಈ ಪ್ರತಿಗಳಿಗೆ ಮುಡಾ ಚಿನ್ಹೆಯ ವಾಟರ್ ಮಾರ್ಕ್ ಹಾಗೂ ಬಾರ್‌ಕೋಡ್ ಇರುತ್ತದೆ. ಪ್ರತಿಯೊಂದು ಪತ್ರದಲ್ಲಿ ಇರುವ ಬಾರ್‌ಕೋಡ್‌ಗೆ ಪ್ರತ್ಯೇಕ ಸಂಖ್ಯೆಗಳೂ ಇರುತ್ತವೆ. ಮಂಜೂರಾತಿ ಪತ್ರ ವಿತರಣೆ ಸಮಯದಲ್ಲಿ ಭದ್ರತಾ ಬಾಂಡ್ ಪ್ರತಿಗೆ ಪ್ರತ್ಯೇಕವಾಗಿ ಬೇರೊಂದು ಸಂಖ್ಯೆಯನ್ನು ನಮೂದಿಸಲಾಗುತ್ತದೆ. ಈ ವೇಳೆ ಬಾರ್‌ಕೋಡ್‌ನಲ್ಲಿ ನಿವೇಶನಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಕಂಪ್ಯೂಟರ್ ಮೂಲಕ ನಮೂದಿಸಲಾಗುತ್ತದೆ ಈ ಬಾರ್‌ಕೋಡ್‌ನ್ನು ಸ್ಕ್ಯಾನ್ ಮಾಡಿದಾಗ ನಿವೇಶನಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳು ಪ್ರದರ್ಶಿತಗೊಳ್ಳುತ್ತವೆ. ಇದುವೇ ಮುಡಾ ಮಂಜೂರಾತಿ ಪತ್ರದ ವಿಶೇಷ. ಅಚ್ಚರಿ ಸಂಗತಿ ಎಂದರೆ 2007ರಲ್ಲಿ ಮಂಜೂರಾತಿ ಪತ್ರದ ನಕಲಿ ತಡೆಗೆ ಭದ್ರತಾ ಬಾಂಡ್ ಪ್ರತಿ ಪರಿಚಯಿಸಲಾಯಿತು. ಈಗ ಅದನ್ನೇ ದುರುಪಯೋಗಪಡಿಸಿಕೊಂಡಿರುವುದನ್ನು ನೋಡಿದರೆ ಮುಡಾದಲ್ಲಿ ಏನೆಲ್ಲಾ ಆಗಿರಲಿಕ್ಕಿಲ್ಲ ಎಂಬ ಆತಂಕ ಕಾಡದೇ ಇರದು.

ಮುದ್ರಣ, ಸಂಗ್ರಹ, ವಿತರಣೆ...

ಭದ್ರತಾ ಬಾಂಡ್ ಪ್ರತಿಗಳ ಮನಸ್ಸೋ ಇಚ್ಛೆ ಮುದ್ರಿಸುವುದಿಲ್ಲ. ಮುಡಾದಿಂದ ಒಂದು ವರ್ಷದಲ್ಲಿ ಎಷ್ಟು ನಿವೇಶನಗಳನ್ನು ಮಂಜೂರು ಮಾಡಬಹುದು ಎಂಬ ಅಂದಾಜಿನ ಮೇರೆಗೆ ಗರಿಷ್ಠ 500ರಿಂದ 750 ಪ್ರತಿಗಳನ್ನು ಮುದ್ರಿಸಲಾಗುತ್ತದೆ. ಮುಡಾದಿಂದ ಬಡಾವಣೆ ನಿರ್ಮಾಣವಾಗಿ ನಿವೇಶನಗಳ ಹಂಚಿಕೆ ಮಾಡುವಂತಹ ಸಂದರ್ಭದಲ್ಲಿ ಬಡಾವಣೆಯ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೋ ಅದಕ್ಕೆ ತಕ್ಕಂತೆ ಭದ್ರತಾ ಬಾಂಡ್ ಪ್ರತಿ ಮುದ್ರಿಸಲಾಗುತ್ತದೆ. ಈ ಪ್ರತಿಗಳನ್ನು ಅತ್ಯಂತ ಸುರಕ್ಷಿತವಾಗಿ ಮುದ್ರಿಸಲು ಟೆಂಡರ್ ಮೂಲಕ ಆರ್ಡರ್ ನೀಡಲಾಗುತ್ತದೆ. ಹಾಗೆ ಮುದ್ರಿತವಾಗಿ ಬಂದಂತಹ ಬಾಂಡ್ ಪ್ರತಿಗಳನ್ನು ಮುಡಾದ ರೆಕಾರ್ಡ್ ರೂಂನಲ್ಲಿ ಜವಾಬ್ದಾರಿಯುತ ಅಧಿಕಾರಿಯ ವಶಕ್ಕೆ ನೀಡುವ ಮೂಲಕ ಸುರಕ್ಷಿತವಾಗಿಡಲಾಗುತ್ತದೆ. ಸಾಮಾನ್ಯವಾಗಿ ಮುಡಾದ ವಲಯ ವಿಶೇಷ ತಹಸೀಲ್ದಾರ್ ಮಂಜೂರಾತಿ ಪತ್ರವನ್ನು ಫಲಾನುಭವಿಗೆ ನೀಡುವ ಅಧಿಕಾರವಿದೆ. ಹೀಗಾಗಿ ಬೇಡಿಕೆಯಂತೆ ಮುಡಾ ಆಯುಕ್ತರು ಹಾಗೂ ಕಾರ್ಯದರ್ಶಿಗಳು ವಲಯ ತಹಸೀಲ್ದಾರ್ ಕಚೇರಿಯ ಉಲ್ಲೇಖಿಸಿ, ರೆಕಾರ್ಡ್ ರೂಂನ ಸಂಬಂಧಿತ ಅಧಿಕಾರಿಗಳಿಗೆ ಇಂಡೆಂಟ್ ಕೊಡುತ್ತಾರೆ. ಅದರಂತೆ ಆ ಅಧಿಕಾರಿಯು ಭದ್ರತಾ ಬಾಂಡ್ ಪ್ರತಿ ವಿತರಿಸಿ ರೆಕಾರ್ಡ್ ಬುಕ್‌ನಲ್ಲಿ ವಿವರಗಳನ್ನು ನಮೂದಿಸುತ್ತಾರೆ. ಆ ನಂತರ ವಲಯ ವಿಶೇಷ ತಹಸೀಲ್ದಾರ್‌ರ ಮೂಲಕ ಪ್ರತಿಗಳ ವಿತರಣೆಯಾಗುತ್ತದೆ.

ಮುಡಾ ನಿವೇಶನಗಳ ಅಕ್ರಮ ಹಂಚಿಕೆಯ ಮಾಸ್ಟರ್ ಪ್ಲ್ಯಾನ್?

ಮುಡಾದಲ್ಲಿ 8000ಕ್ಕೂ ಹೆಚ್ಚು ಬಿಡಿ ನಿವೇಶನಗಳನ್ನು ಹಿಂದಿನ ಮುಡಾ ಆಯುಕ್ತ ಕಾಂತರಾಜು ಅವರು ಪತ್ತೆ ಹಚ್ಚಿ, ಸಂರಕ್ಷಿಸಿದ್ದರು. ಅವುಗಳನ್ನು ಮುಡಾ ದಾಖಲೆಗಳಲ್ಲಿ ನಮೂದಿಸಿದ್ದರು. ನಂತರ ಬಂದ ಆಯುಕ್ತರುಗಳು ಈ ನಿವೇಶನಗಳನ್ನು ಬೇಕು ಬೇಕಾದವರಿಗೆ ಮಂಜೂರು ಮಾಡಿದ್ದಾರೆ ಎಂಬ ಬಲವಾದ ಆರೋಪ ಮುಡಾವನ್ನು ಬಲ್ಲವರಿಂದ ಕೇಳಿಬರುತ್ತಿದೆ.

ಆ ಕಾರಣಕ್ಕಾಗಿಯೇ ಅವಶ್ಯಕತೆ ಇಲ್ಲದೇ ಇದ್ದರೂ 2021ರ ಏಪ್ರಿಲ್‌ನಲ್ಲಿ ಬರೋಬ್ಬರಿ 5 ಸಾವಿರ ಭದ್ರತಾ ಬಾಂಡ್‌ಗಳನ್ನು ಮುದ್ರಿಸಲಾಗಿದೆ ಎಂದು ಆಪಾದಿಸಲಾಗುತ್ತಿದೆ. ವಲಯ ವಿಶೇಷ ತಹಸೀಲ್ದಾರ್ ಅಲ್ಲದೇ ಆಯುಕ್ತರ ಆಪ್ತ ಸಹಾಯಕರಿಗೂ ಭದ್ರತಾ ಬಾಂಡ್‌ಗಳನ್ನು ರೆಕಾರ್ಡ್ ರೂಂನಿಂದ ವಿತರಿಸಿರುವುದು ತಮ್ಮ ಅಕ್ರಮ ವ್ಯವಹಾರವನ್ನು ರಹಸ್ಯವಾಗಿಡುವ ಕಾರಣದಿಂದಲೇ ಎಂಬ ಮಾತುಗಳು ಕೇಳಿಬಂದಿವೆ. ನಗರಾಭಿವೃದ್ಧಿ ಸಚಿವರು ವಿಧಾನಸಭೆಯಲ್ಲಿ 1219 ನಿವೇಶನಗಳನ್ನು ಮಾತ್ರ ಅಕ್ರಮವಾಗಿ ಮಂಜೂರು ಮಾಡಿರುವ ಆರೋಪವಿದೆ ಎಂದು ಅಧಿಕೃತವಾಗಿ ಹೇಳಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ, ರೆಕಾರ್ಡ್ ರೂಂನಿಂದ ವಿತರಣೆಯಾದ 4839 ಸೆಕ್ಯೂರಿಟಿ ಬಾಂಡ್‌ಗಳ ಪೈಕಿ 1219 ಅನ್ನು ಹೊರತುಪಡಿಸಿ, ಉಳಿದ ಎಲ್ಲಾ ಬಾಂಡ್‌ಗಳನ್ನು ಅಕ್ರಮಕ್ಕೆ ಬಳಸಿಕೊಂಡಿರುವ ಸಾಧ್ಯತೆಯೇ ಹೆಚ್ಚು ಈ ಬಾಂಡ್‌ಗಳಲ್ಲಿ ಹಿಂದಿನ ದಿನಾಂಕ ನಮೂದಿಸಿ ನಿವೇಶನಗಳನ್ನು ಅಕ್ರಮವಾಗಿ ವಿತರಿಸಿರಲೂಬಹುದು. ಹೀಗಾಗಿ ರೆಕಾರ್ಡ್ ರೂಂನಿಂದ ವಿತರಣೆಯಾದ ಬಾಂಡ್‌ಗಳನ್ನು ಬಳಸಿಕೊಂಡು ನೀಡಲಾಗಿರುವ ಮಂಜೂರಾತಿ ಪತ್ರಗಳ ಬಗ್ಗೆ ಸುದೀರ್ಘವಾದ ತನಿಖೆ ನಡೆಯಬೇಕಾದ ಅವಶ್ಯಕತೆ ಇದೆ. ಫಲಾನುಭವಿಗಳಿಗೆ ವಿತರಿಸಿರುವುದು 1219 ಮಂಜೂರಾತಿ ಪತ್ರ ಮಾತ್ರ ಎಂದಾದ ಮೇಲೆ ರೆಕಾರ್ಡ್ ರೂಂನಲ್ಲಿ ಸುರಕ್ಷಿತವಾಗಿರಬೇಕಾದ ಬಾಕಿ ಸೆಕ್ಯೂರಿಟಿ ಬಾಂಡ್‌ಗಳನ್ನು ಆಯುಕ್ತರ ಆಪ್ತ ಸಹಾಯಕ ಸೇರಿದಂತೆ ಇತರ ಅಧಿಕಾರಿಗಳಿಗೆ ಕೊಟ್ಟಿದ್ದಾದರೂ ಏಕೆ? ಆ ಬಾಂಡ್‌ಗಳ ಇಂಡೆಂಟ್‌ಗೆ ಸಹಿ ಹಾಕಿದ ಹಿರಿಯ ಅಧಿಕಾರಿಗಳನ್ನು ಅಮಾನತಿನಲ್ಲಿಟ್ಟು ವಿಚಾರಣೆ ನಡೆಸಬೇಕಾಗಿದೆ ಅಲ್ಲವೇ? ಅಸಲಿಗೆ ಕಳೆದ 4 ವರ್ಷದಲ್ಲಿ ರೆಕಾರ್ಡ್ ರೂಂನಿಂದ ಅಧಿಕಾರಿಗಳ ಕೈ ತಲುಪಿದ್ದ ಸೆಕ್ಯೂರಿಟಿ ಬಾಂಡ್‌ಗಳು ಮಂಜೂರಾತಿ ಪತ್ರಗಳಾಗಿ ಯಾರಿಗೂ ವಿತರಣೆ ಆಗದೆ ಸುರಕ್ಷಿತವಾಗಿ ಮುಡಾದಲ್ಲೇ ಉಳಿದಿದೆಯೇ ಎಂಬುದನ್ನು ಮೊದಲು ಪರಿಶೀಲಿಸಬೇಕಾಗಿದೆ!

ಮೈಸೂರು ಕಾಡಾ ಕಚೇರಿಯಲ್ಲಿ ಸಂಸದ ಯದುವೀರ್ ಕಚೇರಿ ಉದ್ಘಾಟನೆ

- ಪ್ರತಿದಿನ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಸಾರ್ವಜನಿಕರಿಗೆ ಲಭ್ಯ
- ಪ್ರವಾಸದ ಸಮಯದಲ್ಲಿ ಭೇಟಿಯಲ್ಲಿ ಕೆಲ ವ್ಯತ್ಯಾಸ

ಬಳ್ಳಾರಿ ಪಾದಯಾತ್ರೆ ಗೊತ್ತಿಲ್ಲ...

"ಬಿಜೆಪಿಯಿಂದ ಮೈಸೂರು ಚಲೋ ಪಾದಯಾತ್ರೆ ಬಳಿಕ ಮತ್ತೊಂದು ಬಣದಿಂದ ಬಳ್ಳಾರಿಗೆ ಪಾದಯಾತ್ರೆ ನಡೆಸುವ ವಿಚಾರ ನನಗೆ ಗೊತ್ತಿಲ್ಲ. ಪಾದಯಾತ್ರೆ ಸಂಬಂಧ ನಡೆದ ಸಭೆಯಲ್ಲಿ ಭಾಗಿಯಾದವರನ್ನೇ ಕೇಳಬೇಕು. ಕಾಂಗ್ರೆಸ್ ಸರ್ಕಾರದ ಹಗರಣಗಳ ವಿರುದ್ಧ ಮೈಸೂರು ಚಲೋ ಪಾದಯಾತ್ರೆ ನಡೆದಿದೆ. ಆದರೆ ಮತ್ತೊಂದು ಬಣದ ಪಾದಯಾತ್ರೆ ವಿಚಾರದ ಬಗ್ಗೆ ನಾನೇನು ಹೇಳುವುದಿಲ್ಲ.

\- ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ



ಮೈಸೂರಿನ ಕಾಡಾ ಕಚೇರಿಯಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದರೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಕಚೇರಿಯನ್ನು ಹಿರಿಯ ನಾಗರಿಕರೂ ಆದ ಮೈಸೂರು ವಿವಿ ಪ್ರಸಾರಂಗದ ನಿವೃತ್ತ ನಿರ್ದೇಶಕ ಕೆ.ಟಿ. ವೀರಪ್ಪ ಉದ್ಘಾಟಿಸಿದರು.

ಮೈಸೂರು, ಆ.14(ಎಂಕೆ)– ಮೈಸೂರಿನ ಕಾಡಾ ಕಚೇರಿ(ಸಾರ್ವಜನಿಕ ಕಚೇರಿಗಳ ಕಟ್ಟಡ)ಯಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದರೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಕಚೇರಿಯನ್ನು ಬುಧವಾರ ಉದ್ಘಾಟಿಸಲಾಯಿತು.

ವಿವಿಧ ಪೂಜಾ ಕೈಂಕರ್ಯದೊಂದಿಗೆ ಸ್ಥಳೀಯ ಜನಪ್ರತಿನಿಧಿಗಳು, ಬಿಜೆಪಿ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳ ಸಮ್ಮುಖದಲ್ಲಿ ನೂತನ ಕಚೇರಿ ತೆರೆದ ಸಂಸದರು, ಇದು ಕಾಡಾ ಕಚೇರಿಯಲ್ಲ, ಸಾರ್ವಜನಿಕರ ಕಚೇರಿ. ಈ ಹಿಂದೆಯೂ ಸಾರ್ವಜನಿಕರ ಕಚೇರಿಯೇ ಆಗಿತ್ತು. ಇಲ್ಲಿಯೇ ಕಾಡಾ ಕಚೇರಿ ಇದ್ದಿದ್ದರಿಂದ ಈ ಕಟ್ಟಡ ಕಾಡಾ ಕಚೇರಿ ಎಂದು ಆಗಿದೆ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ ಪರಂಪರೆಯನ್ನು ಉಳಿಸಿ, ಆಧುನಿಕತೆಗೆ ಅನುಗುಣವಾಗಿ ಸರ್ವಾಂಗೀಣ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಾಗುವುದು ಎಂದರು.

ಮೊದಲು ಕಾಡಾ ಕಚೇರಿಯಲ್ಲೇ ಅರಮನೆಯ ಕಚೇರಿಯು ಇತ್ತು. ನಾನು ಈಗ ಸಾರ್ವಜನಿಕ ಕಚೇರಿಯಲ್ಲೇ ಎಲ್ಲರಿಗೂ ಲಭ್ಯವಿರುತ್ತೇನೆ. ಪ್ರತಿದಿನ ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಕಚೇರಿಯಲ್ಲೇ ಸಿಗುತ್ತೇನೆ. ಜಿಲ್ಲಾ ಪ್ರವಾಸದ ವೇಳೆ ಸ್ವಲ್ಪ ಬದಲಾವಣೆ ಆಗಬಹುದು. ಕ್ಷೇತ್ರದ ಜನತೆ ತಮ್ಮ ಸಮಸ್ಯೆಗಳನ್ನು ತಿಳಿಸಿದರೆ ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ಬೆಟ್ಟ ಬೆಟ್ಟವಾಗಿಯೇ ಇರಬೇಕು: ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕುರಿತು ಪ್ರತಿಕ್ರಿಯಿಸಿ, ಚಾಮುಂಡಿಬೆಟ್ಟ ಈಗ ಹೇಗಿದೆಯೋ ಮುಂದೆಯೂ ಹಾಗೆಯೇ ಇರಲಿ. ಪ್ರಾಧಿಕಾರ ರಚನೆಗೆ ಕೋರ್ಟ್ ತಡೆಯಾಜ್ಞೆ ನೀಡಿದೆ. ಕೋರ್ಟ್‌ನಲ್ಲಿ ಕೇಸ್ ಇರುವಾಗ ಪ್ರಾಧಿಕಾರ ರಚನೆ ಮಾಡಲು ಸಾಧ್ಯವಿಲ್ಲ. ಚಾಮುಂಡಿಬೆಟ್ಟದ ಬಗ್ಗೆ ನಮ್ಮ ತಾಯಿಯವರು ಈಗಾಗಲೇ ಮಾತನಾಡಿದ್ದಾರೆ. ಕಾನೂನಾತ್ಮಕವಾಗಿ ಹೋರಾಟ ಮಾಡುತ್ತೇವೆ ಎಂದರು.

ಗ್ಯಾರಂಟಿ ಯೋಜನೆಗಳು ನಿಲ್ಲಬಾರದು: ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಪರಿಷ್ಕರಣೆ ಮಾಡಲಿದೆ ಎಂಬ ವಿಚಾರಕ್ಕೆ, ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳು ನಿಲ್ಲಬಾರದು. ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಗೆದ್ದಿರುವ ಕಾಂಗ್ರೆಸ್ ಪಕ್ಷ ಯೋಜನೆಗಳನ್ನು ಮುಂದುವರೆಸಬೇಕು. ಜನರು ಗ್ಯಾರಂಟಿ ಯೋಜನೆಗಳಿಗಾಗಿ ಕಾಂಗ್ರೆಸ್‌ಗೆ ಅಧಿಕಾರ ನೀಡಿರುವಾಗ ಯೋಜನೆಗಳು ನಿಲ್ಲಬಾರದು ಎಂದು ಒತ್ತಾಯಿಸಿದರು.

ಕೆಆರ್‌ಎಸ್ ಡ್ಯಾಮ್‌ಗೆ ಭೇಟಿ: ತುಂಗಭದ್ರ ಡ್ಯಾಮ್‌ನಲ್ಲಿ ಗೇಟ್ ತುಂಡಾದ ಬಗ್ಗೆ ಮಾತನಾಡಿದ ಯದುವೀರ್, ರಾಜ್ಯದಲ್ಲಿ ಕಾಲ ಕಾಲಕ್ಕೆ ಡ್ಯಾಮ್‌ಗಳ ಪರಿಶೀಲನೆಯಾಗಬೇಕು. ಆಗಾಗ ದುರಸ್ತಿ ಕಾರ್ಯ ಮಾಡುವುದು ಸರ್ಕಾರಗಳ ಜವಾಬ್ದಾರಿ. ನೂರಾರು ವರ್ಷಗಳ ಹಳೆಯ ಡ್ಯಾಮ್‌ಗಳನ್ನು ಪರಿಶೀಲಿಸಿ ಅಗತ್ಯ ವ್ಯವಸ್ಥೆ ಕಲ್ಪಿಸಬೇಕು. ಹಾಗೆಯೇ ಕೆಆರ್‌ಎಸ್ ಡ್ಯಾಮ್ ಅನ್ನು ಕೂಡ ಪರಿಶೀಲಿಸಬೇಕು. ನಾಳೆ ಕೆಆರ್‌ಎಸ್ ಡ್ಯಾಮ್ ಪರಿಶೀಲಿಸಲು ತೆರಳುತ್ತಿದ್ದೇನೆ ಎಂದು ತಿಳಿಸಿದರು.

ಕೇಂದ್ರ ಸಚಿವರೊಂದಿಗೆ ಮಾತನಾಡುತ್ತೇನೆ...

ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ದೇಶದ ಆಸ್ತಿ. ಅಮೆರಿಕ ವೀಸಾ ರಿಜೆಕ್ಟ್ ಆಗಿರುವ ಕುರಿತು ಮಾಹಿತಿ ಪಡೆದು ಕೇಂದ್ರ ಸಚಿವರೊಂದಿಗೆ ಮಾತನಾಡುತ್ತೇನೆ ಎಂದು ಸಂಸದರೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು. ತಮ್ಮ ಕಚೇರಿ ಉದ್ಘಾಟನೆ ವೇಳೆ ಶಿಲ್ಪಿ ಅರುಣ್ ಯೋಗಿರಾಜ್‌ಗೆ ಅಮೆರಿಕ ವೀಸಾ ನಿರಾಕರಣೆ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಈಗಾಗಲೇ ಅರುಣ್ ಜೊತೆ ಮಾತನಾಡಿದ್ದೇನೆ. ಯಾವ ಕಾರಣಕ್ಕೆ ವೀಸಾ ನಿರಾಕರಿಸಲಾಗಿದೆ ಎಂಬುದು ಗೊತ್ತಿಲ್ಲ. ಅರುಣ್ ಯೋಗಿರಾಜ್ ನಮ್ಮ ದೇಶದ ಆಸ್ತಿ. ಶಂಕರಾಚಾರ್ಯ, ಅಯೋಧ್ಯೆ ರಾಮಲಲ್ಲಾ ಮೂರ್ತಿ ಕೆತ್ತನೆ ಮಾಡಿ ಇಡೀ ದೇಶಕ್ಕೆ ಕೀರ್ತಿ ತಂದಿದ್ದಾರೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಕೇಂದ್ರ ಸಚಿವರ ಜೊತೆ ಮಾತನಾಡುತ್ತೇನೆ ಎಂದರು.

ಅತ್ಯುತ್ತಮ ಸೇವೆ: ರಾಜ್ಯದ 19 ಪೊಲೀಸರಿಗೆ ರಾಷ್ಟ್ರಪತಿ ಪದಕ

ವಿಶಿಷ್ಟ ಸೇವಾ ಪದಕ ಪುರಸ್ಕೃತರು



ಎಂ.ಚಂದ್ರಶೇಖರ್, ಎಡಿಜಿಪಿ, ಆಂತರಿಕಾ ಭದ್ರತಾ ವಿಭಾಗ (ಐಎಸ್‌ಡಿ), ಬೆಂಗಳೂರು

ಬೆಂಗಳೂರು, ಆ.14– ಪೊಲೀಸ್ ಇಲಾಖೆಯಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿದ ರಾಜ್ಯದ ಒಬ್ಬರು ಎಡಿಜಿಪಿ ಸೇರಿದಂತೆ 19 ಪೊಲೀಸರಿಗೆ 2024ನೇ ಸಾಲಿನ ರಾಷ್ಟ್ರಪತಿ ಪದಕ ಲಭಿಸಿದೆ. ಸ್ವಾತಂತ್ರ್ಯೋತ್ಸವ ದಿನಾಚರಣೆ ಸಂದರ್ಭದಲ್ಲಿ ರಾಷ್ಟ್ರಪತಿಯವರ ವಿಶಿಷ್ಟ ಸೇವಾ ಪದಕ ಹಾಗೂ ಶ್ಲಾಘನೀಯ ಸೇವಾ ಪದಕ ಪುರಸ್ಕೃತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಸರು ಪ್ರಕಟಿಸಲಾಗಿದೆ.



ಶ್ಲಾಘನೀಯ ಸೇವಾ ಪದಕ ಪುರಸ್ಕೃತರು

- ಜೋಶಿ ಶ್ರೀನಾಥ್ ಮಹಾದೇವ, ಎಸ್‌ಪಿ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
- ಸಿ.ಕೆ.ಬಾಬಾ, ಎಸ್‌ಪಿ, ಬೆಂಗಳೂರು ಗ್ರಾಮಾಂತರ
- ರಾಮಗೊಂಡ ಬಿ. ಬಸರಗಿ, ಹೆಚ್ಚುವರಿ ಎಸ್‌ಪಿ, ಬಳ್ಳಾರಿ
- ಎಂ.ಡಿ.ಶರತ್, ಎಸ್‌ಪಿ, ಸಿಐಡಿ, ಬೆಂಗಳೂರು
- ವಿ.ಸಿ.ಗೋಪಾಲರೆಡ್ಡಿ, ಡಿಸಿಪಿ, ಸಿಎಆರ್ ಪಶ್ಚಿಮ, ಬೆಂಗಳೂರು ನಗರ
- ಪಿ.ಮುರಳೀಧರ, ಡಿವೈಎಸ್‌ಪಿ, ಚಿಂತಾಮಣಿ ಉಪ ವಿಭಾಗ, ಚಿಕ್ಕಬಳ್ಳಾಪುರ
- ಕೆ.ಸಿ.ಗಿರಿ, ಡಿವೈಎಸ್‌ಪಿ, ಚನ್ನಪಟ್ಟಣ ಉಪ ವಿಭಾಗ, ರಾಮನಗರ
- ಬಸವೇಶ್ವರ, ಸಹಾಯಕ ನಿರ್ದೇಶಕ, ರಾಜ್ಯ ಗುಪ್ತವಾರ್ತೆ, ಕಲಬುರಗಿ
- ಕೆ.ಬಸವರಾಜ, ಡಿವೈಎಸ್‌ಪಿ, ಐಎಸ್‌ಡಿ, ಕಲಬುರಗಿ
- ಎನ್.ಮಹೇಶ್, ಸಹಾಯಕ ನಿರ್ದೇಶಕ, ರಾಜ್ಯ ಗುಪ್ತವಾರ್ತೆ, ಬೆಂಗಳೂರು
- ರವೀಶ್ ಎಸ್. ನಾಯಕ್, ಎಸಿಪಿ, ಸಿಸಿಆರ್‌ಬಿ, ಮಂಗಳೂರು ನಗರ
- ಜಿ.ಪ್ರಭಾಕರ್, ಎಸಿಪಿ, ಸಂಚಾರ ಯೋಜನೆ, ಬೆಂಗಳೂರು
- ಎಚ್.ಆರ್.ಹರೀಶ್, ಸಹಾಯಕ ಕಮಾಂಡೆಂಟ್, 11ನೇ ಪಡೆ, ಕೆಎಸ್‌ಆರ್‌ಪಿ, ಹಾಸನ
- ಎಸ್.ಮಂಜುನಾಥ್, ಆರ್‌ಪಿಐ, 3ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು
- ಮಂಜುನಾಥ ಎಸ್. ಕಲ್ಲೇದೇವರ್, ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಎಫ್‌ಪಿಬಿ, ದಾವಣಗೆರೆ
- ಗೌರಮ್ಮ, ಎಎಸ್‌ಐ, ಸಿಐಡಿ, ಬೆಂಗಳೂರು
- ಮಹಬೂಬ್‌ಸಾಹೇಬ ಎನ್. ಮುಜಾವರ್, ಸಿಎಚ್‌ಸಿ, ಮನಗುಳಿ ಪೊಲೀಸ್ ಠಾಣೆ, ವಿಜಯಪುರ
- ವಿಜಯಕುಮಾರ್, ಸಿಎಚ್‌ಸಿ, ಡಿಸಿಆರ್‌ಬಿ, ಉಡುಪಿ

ಯದುವೀರ್‌ಗೆ ಅಭಿನಂದನೆ...



ಕಾಡಾ ಕಚೇರಿಯಲ್ಲಿ ನೂತನ ಕಚೇರಿ ಆರಂಭಿಸಿದ ಸಂಸದ ಯದುವೀರ್ ಅವರನ್ನು ಬಿಜೆಪಿ ಮುಖಂಡರಾದ ಲಕ್ಷ್ಮಣ್, ವಿಜಯ್ ಕುಮಾರ್, ಶ್ರೀಮತಿ ವೇದಾವತಿ, ಶ್ರೀನಿವಾಸ್, ಕಿರಣ್, ರಮೇಶ್, ವೆಂಕಟೇಶ್ ದಾಸ್,ನಾಗೇಂದ್ರ, ಜಗದೀಶ್ ಇನ್ನಿತರರು ಭಾರಿ ಸೇಬಿನ ಹಾರ ಹಾಕಿ ಅಭಿನಂದಿಸಿದರು.

ಒಲಿಂಪಿಕ್ಸ್ 2024: ವಿನೇಶ್ ಪೋಗಟ್ ಅರ್ಜಿ ವಜಾ ಮಾಡಿದ CAS

ಪ್ಯಾರಿಸ್: ಪ್ಯಾರಿಸ್ ಒಲಿಂಪಿಕ್ಸ್‌ನ 50 ಕೆಜಿ ಮಹಿಳಾ ಕುಸ್ತಿ ವಿಭಾಗದ ಫೈನಲ್‌ನಿಂದ ಭಾರತದ ಕುಸ್ತಿಪಟು ವಿನೇಶ್ ಫೋಗಟ್ ಅವರನ್ನು ಅನರ್ಹಗೊಳಿಸಿದ್ದರ ವಿರುದ್ಧ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ್ದ ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯವು ಇದೀಗ ಅರ್ಜಿಯನ್ನು ವಜಾ ಮಾಡಿದೆ.



ಪ್ಯಾರಿಸ್ ಒಲಿಂಪಿಕ್ಸ್‌ನ 50 ಕೆಜಿ ಮಹಿಳಾ ಕುಸ್ತಿ ವಿಭಾಗದ ಫೈನಲ್‌ನಿಂದ ಭಾರತದ ಕುಸ್ತಿಪಟು ವಿನೇಶ್ ಫೋಗಟ್ ಅವರನ್ನು ಅನರ್ಹಗೊಳಿಸಿದ ಪ್ರಕರಣವನ್ನು ಆಲಿಸಿದ ಸಿಎಎಸ್ ತನ್ನ ನಿರ್ಧಾರವನ್ನು ಆಗಸ್ಟ್ 16ಕ್ಕೆ ಮುಂದೂಡಿತ್ತು. ಆದರೆ ಇಂದು ದಿಢೀರ್ ನಿರ್ಧಾರ ಪ್ರಕಟಿಸಿದ CAS ಅರ್ಜಿಯನ್ನು ವಜಾಗೊಳಿಸಿರುವುದಾಗಿ ಹೇಳಿದೆ.

ಫೈನಲ್ ಪಂದ್ಯಕ್ಕೂ ಮುನ್ನ 100 ಗ್ರಾಂ ಅಧಿಕ ತೂಕ ಹೆಚ್ಚಾಗಿತ್ತು. ಈ ಹಿನ್ನೆಲೆಯಲ್ಲಿ ವಿನೇಶ್ ಫೋಗಟ್‌ರನ್ನು ಅನರ್ಹಗೊಳಿಸಲಾಗಿತ್ತು. ಹೀಗಾಗಿ ತನಗೆ ಬೆಳ್ಳಿ ಪದಕವನ್ನು ನೀಡಬೇಕೆಂದು ವಿನೇಶ್ ಒತ್ತಾಯಿಸಿ, ಮೇಲ್ಮನವಿ ಸಲ್ಲಿಸಿದ್ದರು.

ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಮಾಲ್ ಆಫ್ ಮೈಸೂರು ಅತ್ಯಾಕರ್ಷಕ ಮಾರಾಟ

- ಟಾಪ್ ಬ್ರ್ಯಾಂಡ್‌ಗಳ ಖರೀದಿಯಲ್ಲಿ ಶೇ.50ರಷ್ಟು ಫ್ಲಾಟ್ ರಿಯಾಯಿತಿ
- ಖರೀದಿಗೆ ಆಕರ್ಷಕ ಬಹುಮಾನ

ಮೈಸೂರು,ಆ.14(ಪಿಎಂ)– ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಮಾಲ್ ಆಫ್ ಮೈಸೂರು ಆ.15ರಿಂದ 18ರವರೆಗೆ ವಿಶೇಷ ಹಾಗೂ ಅತ್ಯಾಕರ್ಷಕ ಮಾರಾಟಕ್ಕೆ ಸಜ್ಜಾಗಿದೆ. ಈ ಬೃಹತ್ ಶಾಪಿಂಗ್ ಅವಧಿಯಲ್ಲಿ ವ್ಯಾಪಕ ಶ್ರೇಣಿಯ ಉನ್ನತ ಬ್ರ್ಯಾಂಡ್‌ಗಳಲ್ಲಿ ಶೇ.50ರಷ್ಟು ಫ್ಲಾಟ್ ಡಿಸ್ಕೌಂಟ್ ಜೊತೆಗೆ ಅತ್ಯುತ್ತಮ ಶಾಪಿಂಗ್ ಅನುಭವ ದೊರೆಯಲಿದೆ.

mall of mysore
DMSI Group Venture

ನಂಬಲಸಾಧ್ಯವಾದ ಉಳಿತಾಯದ ಜೊತೆಗೆ 5 ಸಾವಿರ ರೂ. ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದಲ್ಲಿ ಉನ್ನತ ಬ್ರ್ಯಾಂಡ್‌ಗಳ ಖರೀದಿಗೆ ಖಚಿತ ಬಹುಮಾನ ದೊರೆಯಲಿದೆ. ಜೊತೆಗೆ ಇಂತಹ ಖರೀದಿದಾರರಿಗೆ ಮತ್ತಷ್ಟು ಪ್ರಯೋಜನಗಳೂ ಲಭ್ಯವಾಗಲಿವೆ. ವಾರ್ಡ್‌ರೋಬ್ ವಿನ್ಯಾಸ ಮನೆ ಮರು ವಿನ್ಯಾಸವೇ ಇರಲಿ ಅಥವಾ ಯಾವುದೇ ಚಿಲ್ಲರೆಯ ಖರೀದಿಯೇ ಆಗಿರಲಿ, ಈ ಮಾರಾಟ ಅವಧಿಯು ಎಲ್ಲರಿಗೂ ಏನನ್ನಾದರೂ ನೀಡಲಿದೆ.

ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆ ಸುಸಂದರ್ಭದಲ್ಲಿ ಈ ಅದ್ಭುತ ಮಾರಾಟದಲ್ಲಿ ಪಾಲ್ಗೊಳ್ಳಲು ಮಾಲ್ ಆಫ್ ಮೈಸೂರು ಗ್ರಾಹಕರನ್ನು ಆಹ್ವಾನಿಸುತ್ತಿದೆ. ಅಸಾಧಾರಣ ವ್ಯವಹಾರ ಮತ್ತು ಸಂತೋಷಕರ ಪ್ರತಿಫಲಗಳು ಇಲ್ಲಿ ಲಭ್ಯವಾಗಲಿವೆ. ಗ್ರಾಹಕರೇ ನಿಮ್ಮ ಮೆಚ್ಚಿನ ಬ್ರ್ಯಾಂಡ್‌ಗಳನ್ನು ಶಾಪಿಂಗ್ ಮಾಡುವ ಮತ್ತು ಅತ್ಯಾಕರ್ಷಕ ಬಹುಮಾನಗಳೊಂದಿಗೆ ಮನೆಗೆ ಮರಳುವ ಅವಕಾಶ ಕಳೆದುಕೊಳ್ಳಬೇಡಿ. ಹೆಚ್ಚಿನ ವಿವರಗಳಿಗಾಗಿ ಮೊ.ಸಂ. +917019140840 ಅನ್ನು ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಅಂಚೆ ಚೀಟಿಗಳ ಪ್ರದರ್ಶನ

ಮೈಸೂರು, ಆ. 14– ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್ ಅಂಚೆ ಚೀಟಿಗಳ ಪ್ರದರ್ಶನ ಏರ್ಪಡಿಸಿತ್ತು. ಅಂಚೆ ಚೀಟಿಗಳ ಸಂಗ್ರಹಣೆಯ ಕಲೆ ಮತ್ತು ಇತಿಹಾಸವನ್ನು ಕೊಂಡಾಡುವ ನಾಲ್ಕು ದಿನಗಳ ಆಕರ್ಷಕ ಕಾರ್ಯಕ್ರಮವಾಗಿದೆ. ಪ್ರದರ್ಶನವು ಆ. 15 ರಿಂದ 18 ರವರೆಗೆ ಸ್ಟಾಂಪ್ ಉತ್ಸಾಹಿಗಳು ಮತ್ತು ಕುತೂಹಲಕಾರಿ ಮನಸ್ಸುಗಳನ್ನು ಆಹ್ವಾನಿಸಲಾಗುತ್ತದೆ. ಈ ಪ್ರದರ್ಶನವು ಅಂಚೆ ಚೀಟಿಗಳ ಸಂಗ್ರಹಕ್ಕಾಗಿ ಆಳವಾದ ಮೆಚ್ಚುಗೆಯನ್ನು ಬೆಳೆಸುವ ಗುರಿಯನ್ನು ಹೊಂದಿದೆ.



ಆಗಸ್ಟ್ 17 ಮತ್ತು 18 ರಂದು ನಡೆಯುವ ಪತ್ರ ಬರೆಯುವ ಸ್ಪರ್ಧೆಯಲ್ಲಿ ಭಾಗವಹಿಸುವವರು ತಮ್ಮ ಸೃಜನಶೀಲತೆ ಮತ್ತು ಬರವಣಿಗೆಯ ಸಾಮರ್ಥ್ಯವನ್ನು ಪ್ರದರ್ಶಿಸಬಹುದು. ಅತ್ಯಂತ ಆಕರ್ಷಕ ಮತ್ತು ಸುಂದರವಾಗಿ ರಚಿಸಲಾದ ಪತ್ರಗಳಿಗೆ ಬಹುಮಾನಗಳನ್ನು ನೀಡಲಾಗುವುದು.

ಅಂಚೆ ಚೀಟಿ ಸಂಗ್ರಹ ಕಾರ್ಯಾಗಾರಗಳು: ಆಗಸ್ಟ್ 17 ಮತ್ತು 18 ರಂದು, ಸ್ಟಾಂಪ್ ಸಂಗ್ರಹಣೆಯ ಜಟಿಲತೆಗಳ ಮೂಲಕ ಆರಂಭಿಕ ಮತ್ತು ಅನುಭವಿ ಸಂಗ್ರಾಹಕರಿಗೆ ಮಾರ್ಗದರ್ಶನ ನೀಡಲು ವಿನ್ಯಾಸಗೊಳಿಸಲಾದ ತಜ್ಞರ ನೇತೃತ್ವದಲ್ಲಿ ಕಾರ್ಯಾಗಾರ ಏರ್ಪಡಿಸಲಾಗಿದೆ. ಅಂಚೆ ಚೀಟಿಗಳನ್ನು ಸಂರಕ್ಷಿಸಲು ಮತ್ತು ಮೌಲ್ಯೀಕರಿಸಲು ಉತ್ತಮ ಅಭ್ಯಾಸಗಳ ಒಳನೋಟಗಳನ್ನು ಹೇಗೆ ಪಡೆಯುವುದು ಎಂಬುದರ ಕುರಿತು ಸಲಹೆಗಳನ್ನು ಪಡೆಯಬಹುದು.

ವಾಲ್ಮೀಕಿ ಹಗರಣದಲ್ಲಿ ಸರಿಯಾದ ಹೋರಾಟ ನಡೆದರೆ ಮುಖ್ಯಮಂತ್ರಿ ಕುರ್ಚಿ ಅಲ್ಲಾಡುತ್ತದೆ

ಮಾಜಿ ಸಂಸದ ಪ್ರತಾಪ್ ಸಿಂಹ



ಮೈಸೂರು, ಆ.14– ವಾಲ್ಮೀಕಿ ಹಗರಣದ ವಿರುದ್ಧ ಸರಿಯಾದ ಹೋರಾಟ ನಡೆದರೆ ಸಿಎಂ ಕುರ್ಚಿ ಅಲ್ಲಾಡುತ್ತದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.

ವಾಲ್ಮೀಕಿ ಹಗರಣದ ಕುರಿತು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಸೆ.17ಕ್ಕೆ ವಾಲ್ಮೀಕಿ ಹಗರಣ ವಿಚಾರದಲ್ಲಿ ಪಾದಯಾತ್ರೆ ಮಾಡಲು ನಿರ್ಧಾರವಾಗಿದೆ. ಬೆಳಗಾವಿಯಲ್ಲಿ ನಡೆದದ್ದು ಬಿಜೆಪಿ ಅತೃಪ್ತರ, ಬಂಡಾಯಗಾರರ ಸಭೆಯಲ್ಲ. ಬಿಜೆಪಿಯ ಜನಪ್ರಿಯ ನೇತಾರ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದಲ್ಲಿ ನಡೆದ ಸಭೆ ಎಂದರು.

ಈ ಪಾದಯಾತ್ರೆ ಯಾರ ಮೇಲಾಟದ ಕಾರ್ಯಕ್ರಮವೂ ಅಲ್ಲ. ಯಾರ ನಾಯಕತ್ವ ಪ್ರದರ್ಶನವೂ ಅಲ್ಲ. ಪಾದಯಾತ್ರೆಗೆ ಹೈಕಮಾಂಡ್ ಅನುಮತಿ ಕೊಡುತ್ತದೆ. ಅನುಮತಿಯೊಂದಿಗೆ ಪಾದಯಾತ್ರೆ ಮಾಡುತ್ತೇವೆ. ಬಿಜೆಪಿ ರಾಜ್ಯಾಧ್ಯಕ್ಷರು ಹಾದಿಯಾಗಿ ಎಲ್ಲರನ್ನು ಪಾದಯಾತ್ರೆಗೆ ಕರೆಯುತ್ತಾರೆ ಎಂಬ ವಿಶ್ವಾಸವಿದೆ ಎಂದು ಹೇಳಿಕೆ ನೀಡಿದ್ದಾರೆ.

ಗೌರಿ ಲಂಕೇಶ್ ಆರೋಪಿಯ ಭೇಟಿಯಾದ ವಿಚಾರದ ಕುರಿತು ದಿನೇಶ್ ಗುಂಡೂರಾವ್ ಟ್ವೀಟ್‌ಗೆ ಪ್ರತಾಪ್ ಸಿಂಹ ತಿರುಗೇಟು ನೀಡಿದ್ದಾರೆ. ರಾಜಕಾರಣಿಗಳ ಮಕ್ಕಳಿಗೆ ಅಪ್ಪಂದಿರ ಪ್ರತಿಭೆ ವರ್ಗಾವಣೆ ಆಗುವುದಿಲ್ಲ. ದಿನೇಶ್ ಗುಂಡೂರಾವ್ ವಿಚಾರದಲ್ಲೂ ಅದೇ ಆಗಿದೆ. ಪ್ರಕರಣದ ಆರೋಪಿಯನ್ನು ಮಾತಾಡಿಸುವುದೇ ತಪ್ಪಾ? ಎಂದು ಪ್ರಶ್ನಿಸಿದರು. ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಹಗರಣದ ವಿಚಾರದಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಇಬ್ಬರೂ ಆರೋಪಿಗಳು. ಕಾಂಗ್ರೆಸ್ ನಾಯಕರು ಯಾಕೆ ಹೋಗಿ ಅವರ ಕಾಲಿಗೆ ಬೀಳುತ್ತಾರೆ. ಅಧಿನಾಯಕ, ಅಧಿನಾಯಕಿ ಎಂದು ಕರೆಯುವ ಸೋನಿಯಾ, ರಾಹುಲ್ ಆರೋಪಿ ಸ್ಥಾನದಲ್ಲಿ ಇಲ್ಲವೇ. ದಿನೇಶ್ ಗುಂಡೂರಾವ್ ತಿಳಿಗೇಡಿ ತನದಿಂದ ಹೇಳಿಕೆ ಕೊಡುವುದನ್ನು ನಿಲ್ಲಿಸಲಿ ಎಂದು ಕಿಡಿಕಾರಿದರು.

ಎಸ್‌ಬಿಐ, ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗಳಿಂದ ಸರ್ಕಾರಕ್ಕೇ ವಂಚನೆ

ಈ ಬ್ಯಾಂಕ್‌ಗಳೊಂದಿಗಿನ ವ್ಯವಹಾರ ಬಂದ್‌ಗೆ ರಾಜ್ಯ ಸರ್ಕಾರ ಮಹತ್ವದ ತೀರ್ಮಾನ

ಬೆಂಗಳೂರು, ಆ.14– ರಾಜ್ಯ ಸರಕಾರಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆ, ಸಂಸ್ಥೆಗಳು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗಳಲ್ಲಿ (ಪಿಎನ್‌ಬಿ) ಸದ್ಯ ಹೊಂದಿರುವ ಎಲ್ಲ ಖಾತೆಗಳನ್ನು ತಕ್ಷಣವೇ ಬರಖಾಸ್ತುಗೊಳಿಸಬೇಕು. ಜತೆಗೆ ಇನ್ನು ಮುಂದೆ ಉಭಯ ಬ್ಯಾಂಕ್‌ಗಳಲ್ಲಿ ಯಾವುದೇ ರೀತಿಯ ಠೇವಣಿ, ಹೂಡಿಕೆ ಸೇರಿದಂತೆ ವ್ಯವಹಾರ ಮಾಡಬಾರದು ಎಂದು ಸರಕಾರ ಸುತ್ತೋಲೆ ಹೊರಡಿಸಿದೆ.

ಠೇವಣಿ, ಮರುಪಾವತಿ ಪ್ರಕ್ರಿಯೆಯಲ್ಲಿನ ವಂಚನೆ, ಅಕ್ರಮ ಪ್ರಕರಣಗಳ ಹಿನ್ನೆಲೆಯಲ್ಲಿ ಸರಕಾರ ಈ ಕ್ರಮ ಕೈಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅನುಮೋದನೆಯೊಂದಿಗೆ ಆರ್ಥಿಕ ಇಲಾಖೆ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ) ಪಿಸಿ ಜಾಫರ್ ಈ ಸಂಬಂಧ ಸುತ್ತೋಲೆ ಹೊರಡಿಸಿದ್ದಾರೆ.

ವಿವರ: ಕೆಐಎಡಿಬಿಯು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ರಾಜಾಜಿನಗರ ಶಾಖೆಯಲ್ಲಿ ಒಂದು ವರ್ಷ ಅವಧಿಯ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಲು 2011ರ ಸೆ.14ರಂದು ಚೆಕ್ ಮೂಲಕ 25 ಕೋಟಿ ರೂ. ಪಾವತಿಸಿತ್ತು. ಅದಕ್ಕೆ ಪ್ರತಿಯಾಗಿ ಅದೇ ಬ್ಯಾಂಕ್‌ನ ಸೇಲಂನ ಶಂಕ್ರೀ ಬ್ಯಾಂಕ್‌ನಿಂದ 12 ಕೋಟಿ ರೂ.ಗಳ ಒಂದು ನಿಶ್ಚಿತ ಠೇವಣಿಯ ರಸೀದಿ ಹಾಗೂ 13 ಕೋಟಿ ರೂ.ಗಳ ಮತ್ತೊಂದು ನಿಶ್ಚಿತ ಠೇವಣಿ ರಸೀದಿ ನೀಡಿತ್ತು.

ಅವಧಿ ಮುಕ್ತಾಯದ ನಂತರ 13 ಕೋಟಿ ರೂ.ಗಳ ಠೇವಣಿಯ ಮೊತ್ತ ನಗದೀಕರಣವಾಗಿತ್ತು. ಆದರೆ ಎರಡನೇ ಖಾತೆಯ 12 ಕೋಟಿ ರೂ. ಠೇವಣಿ ಸಂಬಂಧ ಬ್ಯಾಂಕ್ ಅಧಿಕಾರಿಗಳಿಂದ ನಡೆದಿದೆ ಎನ್ನಲಾದ ವಂಚನೆ ಪ್ರಕರಣದಿಂದಾಗಿ ಆ ಮೊತ್ತವನ್ನು ಬ್ಯಾಂಕ್ ಈವರೆಗೆ ಕೆಐಎಡಿಬಿಗೆ ಮರುಪಾವತಿಸಿಲ್ಲ. ಈ ಸಂಬಂಧ ಬ್ಯಾಂಕ್ ಅಧಿಕಾರಿಗಳೊಂದಿಗೆ ಪತ್ರ ವ್ಯವಹಾರ, ಸಭೆ ನಡೆಸಿದರೂ ಪ್ರಯೋಜನವಾಗಿಲ್ಲ. ಪ್ರಕರಣವು 10 ವರ್ಷಗಳಿಂದ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ.


ಇನ್ನೊಂದು ಪ್ರಕರಣದಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಹಿಂದಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅವೆನ್ಯೂ ರಸ್ತೆ ಕಚೇರಿಯಲ್ಲಿ 2013ರ ಆಗಸ್ಟ್‌ನಲ್ಲಿ 10 ಕೋಟಿ ರೂ.ಗಳನ್ನು ನಿಶ್ಚಿತ ಠೇವಣಿ ಮಾಡಿತ್ತು. ಅವಧಿ ಮುಕ್ತಾಯಕ್ಕೂ ಮೊದಲೇ ಬ್ಯಾಂಕ್ ಅಧಿಕಾರಿಗಳಿಂದ ಈ ಠೇವಣಿಗೆ ಸಂಬಂಧಪಟ್ಟ ಹಣವನ್ನು ನಕಲಿ ದಾಖಲೆಗಳ ಆಧಾರದ ಮೇಲೆ ಒಂದು ಖಾಸಗಿ ಕಂಪನಿಯ ಸಾಲಕ್ಕೆ ಹೊಂದಾಣಿಕೆ ಮಾಡಲಾಯಿತು. ಬ್ಯಾಂಕ್ ಜತೆಗೆ ಪತ್ರ ವ್ಯವಹಾರ, ಸಭೆ ನಡೆಸಿದರೂ ಹಣ ಮರುಪಾವತಿಗೆ ಬ್ಯಾಂಕ್ ಒಪ್ಪಿಲ್ಲ. ಈ ಪ್ರಕರಣವೂ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ.

ಈ ಎರಡೂ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮಹಾಲೇಖಪಾಲರ ವರದಿಯಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಜತೆಗೆ ಸಂಬಂಧಪಟ್ಟ ಲೆಕ್ಕ ಪರಿಶೋಧನಾ ಕಂಡಿಕೆಗಳನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಚರ್ಚಿಸಿ ಎರಡೂ ಬ್ಯಾಂಕ್‌ಗಳ ಎಲ್ಲ ಶಾಖೆಗಳಲ್ಲೂ ಸರಕಾರದ ಎಲ್ಲ ಸಂಸ್ಥೆಗಳ ಠೇವಣಿ, ಹೂಡಿಕೆ ಹಿಂಪಡೆಯಬೇಕು ಹಾಗೂ ಇನ್ನು ಮುಂದೆ ಯಾವುದೇ ಠೇವಣಿ, ಹೂಡಿಕೆ ಮಾಡದಂತೆ ನಿರ್ಬಂಧಿಸಬೇಕೆಂದು ನಡಾವಳಿಯಲ್ಲಿ ದಾಖಲಿಸಿತ್ತು.

ಈ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆ ಸುತ್ತೋಲೆ ಹೊರಡಿಸಿದೆ. ಜತೆಗೆ ಉಭಯ ಬ್ಯಾಂಕ್‌ಗಳಲ್ಲಿನ ಎಲ್ಲ ಖಾತೆಗಳನ್ನು ಮುಕ್ತಾಯಗೊಳಿಸಿರುವ ಬಗ್ಗೆ ದೃಢೀಕರಣ ಹಾಗೂ ಠೇವಣಿ, ಖಾತೆಗಳ ವಿವರವನ್ನು ಗೊತ್ತುಪಡಿಸಿದ ನಮೂನೆಯಡಿ ಸೆಪ್ಟೆಂಬರ್ 20ರೊಳಗೆ ಇಲಾಖೆಯ ಆಯವ್ಯಯ ಮತ್ತು ಸಂಪನ್ಮೂಲ ಶಾಖೆಯ ಉಪ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಶ್ರೀಮತಿ ನಿರ್ಮಲ ನಿಧನ

ಮೈಸೂರು, ಆ.14–ಶ್ರೀರಂಗಪಟ್ಟಣ ತಾಲೂಕು ನಗುವನಹಳ್ಳಿ ನಿವಾಸಿ ಎನ್.ವಿ.ನಾರಾಯಣ್ ಅವರ ಧರ್ಮಪತ್ನಿ ಶ್ರೀಮತಿ ನಿರ್ಮಲ (60) ಅವರು ಇಂದು ನಿಧನರಾದರು. ಮೃತರು ಪತಿ, ಪುತ್ರ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಗುರುವಾರ) ನಗುವನಹಳ್ಳಿಯ ಅವರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸ್ವಾತಂತ್ರ್ಯ ದಿನಾಚರಣೆ ಮುನ್ನಾ ದಿನ ದೇಶ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ

ವಿಭಜಕ ಪ್ರವೃತ್ತಿಗಳ ತಿರಸ್ಕರಿಸಲು ಕರೆ



ರಾಷ್ಟ್ರಪತಿ ದ್ರೌಪದಿ ಮುರ್ಮು

ನವದೆಹಲಿ, ಆ.14– ಸಾಮಾಜಿಕ ಶ್ರೇಣಿಗಳ ಆಧಾರದ ಅಪಶ್ರುತಿಯನ್ನು ಹುಟ್ಟುಹಾಕುವ ಮತ್ತು ಸಾಮಾಜಿಕ ಶ್ರೇಣಿಗಳಲ್ಲಿ ಬೇರೂರಿರುವ ವಿಭಜಕ ಪ್ರವೃತ್ತಿಗಳನ್ನು ತಿರಸ್ಕರಿಸಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಬುಧವಾರ ಒತ್ತಿ ಹೇಳಿದ್ದಾರೆ.

78ನೇ ಸ್ವಾತಂತ್ರ್ಯ ದಿನದ ಮುನ್ನಾದಿನದಂದು ದೇಶವನ್ನುದ್ದೇಶಿಸಿ ಭಾಷಣ ಮಾಡಿದ ರಾಷ್ಟ್ರಪತಿಗಳು, ಭಾರತದಲ್ಲಿ ರಾಜಕೀಯ ಪ್ರಜಾಪ್ರಭುತ್ವದ ಸ್ಥಿರ ಪ್ರಗತಿಯನ್ನು ಎತ್ತಿ ತೋರಿಸಿದರು. ಇದು ಸಾಮಾಜಿಕ ಪ್ರಜಾಪ್ರಭುತ್ವದತ್ತ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಪ್ರತಿಪಾದಿಸಿದರು. ದೇಶವು ಅದರ ವೈವಿಧ್ಯತೆ ಮತ್ತು ಬಹುತ್ವದ ಮೇಲೆ ಅಭಿವೃದ್ಧಿ ಹೊಂದುತ್ತದೆ. ಒಂದು ಸುಸಂಘಟಿತ ಘಟಕವಾಗಿ ಮುಂದುವರಿಯುತ್ತದೆ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಅಂಚಿನಲ್ಲಿರುವ ಸಮುದಾಯಗಳ ಕಲ್ಯಾಣಕ್ಕಾಗಿ ಅಭೂತಪೂರ್ವ ಕ್ರಮಗಳನ್ನು ಆರಂಭಿಸಿದ ನರೇಂದ್ರ ಮೋದಿ ಸರ್ಕಾರಕ್ಕೆ ಸಾಮಾಜಿಕ ನ್ಯಾಯವು ಪ್ರಮುಖ ಆದ್ಯತೆಯಾಗಿದೆ ಎಂದು ಹೇಳಿದರು.

ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್ ಮಾತನ್ನು ಉಲ್ಲೇಖಿಸಿದ ರಾಷ್ಟ್ರಪತಿಗಳು, ರಾಜಕೀಯ ಪ್ರಜಾಪ್ರಭುತ್ವವು ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿಯಲ್ಲಿ ಇರದ ಹೊರತು ಅದು ಉಳಿಯುವುದಿಲ್ಲ. ರಾಜಕೀಯ ಪ್ರಜಾಪ್ರಭುತ್ವದ ಸ್ಥಿರವಾದ ಪ್ರಗತಿಯು ಸಾಮಾಜಿಕ ಪ್ರಜಾಪ್ರಭುತ್ವದ ಬಲವರ್ಧನೆಯತ್ತ ಸಾಧಿಸಿದ ಪ್ರಗತಿಗೆ ಸಾಕ್ಷಿಯಾಗಿದೆ ಎಂದು ಹೇಳಿದರು. ಇಂದು, ಆಗಸ್ಟ್ 14, ನಮ್ಮ ದೇಶವು ವಿಭಜನೆಯ ಭಯಾನಕ ಸ್ಮರಣೆಯ ದಿನವನ್ನು ಆಚರಿಸುತ್ತಿದೆ. ವಿಭಜನೆಯ ಭೀಕರತೆಯನ್ನು ನೆನಪಿಸಿಕೊಳ್ಳುವ ದಿನವಿದು. ನಮ್ಮ ಮಹಾನ್ ರಾಷ್ಟ್ರವು ವಿಭಜನೆಯಾದಾಗ, ಲಕ್ಷಾಂತರ ಜನರು ಪಲಾಯನ ಮಾಡಲು ಒತ್ತಾಯಿಸಲ್ಪಟ್ಟರು ಮತ್ತು ಲೆಕ್ಕವಿಲ್ಲದಷ್ಟು ಜನರು ಜೀವಗಳನ್ನು ಕಳೆದುಕೊಂಡರು. ಸ್ವಾತಂತ್ರ್ಯ ದಿನಾಚರಣೆಯ ಮುನ್ನಾ ದಿನದಂದು, ನಾವು ಈ ಅಭೂತಪೂರ್ವ ಮಾನವೀಯ ದುರಂತವನ್ನು ನೆನಪಿಸಿಕೊಳ್ಳುತ್ತೇವೆ ಮತ್ತು ಛಿದ್ರಗೊಂಡ ಕುಟುಂಬಗಳೊಂದಿಗೆ ಬೆಂಬಲವಾಗಿ ನಿಂತಿದ್ದೇವೆ. ಸಾಮಾಜಿಕ ಶ್ರೇಣಿಗಳ ಆಧಾರದ ಮೇಲೆ ಅಪಶ್ರುತಿಯನ್ನು ಹುಟ್ಟುಹಾಕುವ ಪ್ರವೃತ್ತಿಗಳನ್ನು ತಿರಸ್ಕರಿಸಬೇಕು ಎಂದು ನಾನು ದೃಢವಾಗಿ ನಂಬುತ್ತೇನೆ ಎಂದು ರಾಷ್ಟ್ರಪತಿಗಳು ಹೇಳಿದ್ದಾರೆ.

ಭಾರತವು 2021 ಮತ್ತು 2024ರ ನಡುವೆ ಸರಾಸರಿ ಶೇ.8 ರಷ್ಟು ವಾರ್ಷಿಕ ಬೆಳವಣಿಗೆಯೊಂದಿಗೆ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಒಂದಾಗಿದೆ. ಇದು ಜನರ ಕೈಗೆ ಹೆಚ್ಚಿನ ಹಣವನ್ನು ನೀಡಿದ್ದು ಮಾತ್ರವಲ್ಲ, ಬಡತನ ರೇಖೆಗಿಂತ ಕೆಳಗಿರುವ ಜನರ ಸಂಖ್ಯೆಯಲ್ಲಿಯೂ ಭಾರಿ ಇಳಿಕೆಯಾಗಿದೆ ಎಂದರು. ಇದೇ ವೇಳೆ ಮೂರು ಹೊಸ ಕ್ರಿಮಿನಲ್ ಕಾನೂನುಗಳನ್ನು ಶ್ಲಾಘಿಸಿದ ಮುರ್ಮು, ಹೊಸ ಕ್ರಿಮಿನಲ್ ಕಾನೂನುಗಳು ಸ್ವಾತಂತ್ರ್ಯ ಹೋರಾಟಗಾರರಿಗೆ ಸಂದ ಗೌರವ ಎಂದು ಕರೆದಿದ್ದಾರೆ.

ಬಡವರಿಗಷ್ಟೇ 'ಗ್ಯಾರಂಟಿ' ಉತ್ತಮ

ಉಳ್ಳವರಿಗೆ ಈ ಯೋಜನೆ ಅನವಶ್ಯಕ



ಬೆಂಗಳೂರು, ಆ.14(ಕೆಎಂಶಿ)– ಗ್ಯಾರಂಟಿ ಯೋಜನೆ ಪರಿಷ್ಕರಿಸಿ, ಬಡವರಿಗಷ್ಟೇ ಸೀಮಿತಗೊಳಿಸಬೇಕೆಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಇಂದಿಲ್ಲಿ ಅಭಿಪ್ರಾಯಿಸಿದ್ದಾರೆ.

ಉಳ್ಳವರಿಗೂ ಈ ಯೋಜನೆ ನೀಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಅದರ ಬದಲು ಕಡುಬಡವರಿಗೆ ಸವಲತ್ತುಗಳನ್ನು ನೀಡಿ, ಅವರ ಆರ್ಥಿಕ ಮಟ್ಟವನ್ನು ಹೆಚ್ಚಿಸೋಣ.

ಇದು ನನ್ನ ಸ್ವಂತ ಅಭಿಪ್ರಾಯವಲ್ಲ. ರಾಜ್ಯದ ಬಹುಜನರ ಅಭಿಪ್ರಾಯವಾಗಿದೆ. ಸಾರ್ವಜನಿಕರ ಅಭಿಪ್ರಾಯದಂತೆ ಯೋಜನೆ ಪರಿಷ್ಕರಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪಕ್ಷದ ವರಿಷ್ಠರ ಗಮನಕ್ಕೆ ತಂದಿದ್ದೇವೆ ಎಂದರು.

ದೆಹಲಿಯಿಂದ ಹಿಂತಿರುಗಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಮತ್ತು ಪಕ್ಷ ಯಾವ ತೀರ್ಮಾನ ತೆಗೆದುಕೊಳ್ಳುತ್ತದೋ ಅದಕ್ಕೆ ನಾವು ಬದ್ಧರಾಗಿರುತ್ತೇವೆ. ಆದರೆ ಸಾರ್ವಜನಿಕರ ಅಭಿಪ್ರಾಯದಂತೆ ಬಡವರಿಗಷ್ಟೇ ಸವಲತ್ತು ಮೀಸಲಿರಬೇಕು. ಗ್ಯಾರಂಟಿ ಯೋಜನೆಗಳಲ್ಲಿ ಕೆಲವು ನನಗೂ ದೊರೆಯುತ್ತಿದೆ. ಅಷ್ಟೇ ಅಲ್ಲ ಸರ್ಕಾರಿ ನೌಕರರಿಗೂ ಇದರ ಸೌಲಭ್ಯ ದೊರೆಯುತ್ತಿದೆ. ಇತಿಮಿತಿಯಲ್ಲಿ ವಿದ್ಯುತ್ ಬಳಕೆ ಮಾಡುವುದರಿಂದ ನನ್ನ ಮನೆಯ ವಿದ್ಯುತ್ ಬಿಲ್ ಶೂನ್ಯ ಬರುತ್ತದೆ. ನನಗೆ ಯೋಜನೆ ಕೊಡಿ ಎಂದು ನಾವೇನು ಅರ್ಜಿ ಹಾಕಿಲ್ಲ. ಅದು ಸ್ವಯಂ ಪ್ರೇರಿತವಾಗಿ ಬಂದಿದೆ. ಇನ್ನು ಶಕ್ತಿ ಯೋಜನೆಯಡಿ ನಮ್ಮ ಕುಟುಂಬದವರು ಸಾರಿಗೆ ಸಂಸ್ಥೆ ಬಸ್‌ನಲ್ಲಿ ಪ್ರಯಾಣಿಸಿದರೆ, ಅವರಿಗೂ ಸವಲತ್ತು ದೊರೆಯುತ್ತಿದೆ. ಹೀಗಾಗಿ ಯೋಜನೆಯನ್ನು ಪರಿಷ್ಕರಿಸಿ, ಕಡುಬಡವರಿಗಷ್ಟೇ ಮೀಸಲಿರಿಸಲು ನನ್ನ ಮನವಿ. ರಾಜ್ಯಾದ್ಯಂತ ಕಾರ್ಯಕರ್ತರು, ಸಾರ್ವಜನಿಕರು, ಸರ್ಕಾರಿ ನೌಕರರು ಇದೇ ಅಭಿಪ್ರಾಯ ಹೊಂದಿದ್ದಾರೆ.

ನನ್ನ ಇಲಾಖೆಯ ಹಿರಿಯ ಅಧಿಕಾರಿಯ ಮನೆಯಲ್ಲಿ ಏಳು ಮಂದಿ ಸರ್ಕಾರಿ ನೌಕರರಿದ್ದಾರೆ. ಅವರೆಲ್ಲ ಕುಟುಂಬದವರು ಗೃಹಜ್ಯೋತಿ ಸವಲತ್ತು ದೊರೆಯುತ್ತಿದೆ. ನಮಗೆ ಇದರ ಅವಶ್ಯಕತೆ ಇಲ್ಲ ಎಂದು ಅವರೇ ನನ್ನ ಬಳಿ ಹೇಳಿಕೊಂಡಿದ್ದಾರೆ. ವಿದ್ಯುತ್ ಬಿಲ್ ಭರಿಸುವ ಶಕ್ತಿ ನಮಗಿದೆ. ನಮ್ಮಂಥವರಿಗೆ ನೀಡುವ ಬದಲು ಬಡವರಿಗೆ ನೀಡಿ ಎಂದು ಮನವಿ ಮಾಡಿಕೊಂಡಿದ್ದಾರೆ. ಇನ್ನು ನನ್ನ ಕುಟುಂಬದಲ್ಲೇ ಐವರು ಜನಪ್ರತಿನಿಧಿಗಳಿದ್ದಾರೆ. ಅವರೆಲ್ಲರಿಗೂ ಈ ಸೌಲಭ್ಯ ದೊರೆಯುತ್ತಿದೆ. ನಮಗೆ ಇದರ ಅವಶ್ಯಕತೆ ಇಲ್ಲ ಎಂದರು. ಉಳ್ಳವರಿಗೆ ಈ ಸವಲತ್ತಿನ ಅಗತ್ಯವಿಲ್ಲ ಎಂದು ವರಿಷ್ಠರ ಗಮನಕ್ಕೆ ತಂದಿದ್ದೇವೆ. ಅಲ್ಲದೆ, ರಾಜ್ಯದಲ್ಲಿ ಗ್ಯಾರಂಟಿ ಯೋಜನೆಯ ಬಗ್ಗೆ ಸಾರ್ವಜನಿಕರ ಅಭಿಪ್ರಾಯಗಳನ್ನು ತಿಳಿ ಹೇಳಿದ್ದೇವೆ. ವರಿಷ್ಠರು ಯಾವ ನಿರ್ಧಾರ ಕೈಗೊಳ್ಳುತ್ತಾರೂ, ಅದಕ್ಕೆ ನಾವು ಬದ್ಧರಾಗಿರುತ್ತೇವೆ ಎಂದು ತಿಳಿಸಿದರು.

ತಮಿಳುನಾಡಿಗೆ ಜಾನುವಾರು ಸಾಗಿಸುತ್ತಿದ್ದ ಇಬ್ಬರ ಬಂಧನ

ಚಾಮರಾಜನಗರ, ಆ.14– ಮಲೆ ಮಹದೇಶ್ವರಬೆಟ್ಟದ ಪೊಲೀಸ್ ಠಾಣೆ ವ್ಯಾಪ್ತಿಯ ಪಾಲಾರ್–ಮಹದೇಶ್ವರಬೆಟ್ಟ ಮುಖ್ಯರಸ್ತೆಯ ಪಾಲಾರ್ ಗೇಟ್ ಹತ್ತಿರ ತಮಿಳುನಾಡಿಗೆ ಜಾನುವಾರು ಸಾಗಿಸುತ್ತಿದ್ದ ಇಬ್ಬರನ್ನು ಬಂಧಿಸಲಾಗಿದೆ.

ಪುದೂರು ಗ್ರಾಮದ ವೆಂಕಟೇಶ್ ಹಾಗೂ ಕಾಡೋಲ ಗ್ರಾಮದ ಕೆಂಪರಾಜು ಬಂಧಿತರು. ಮಹದೇಶ್ವರಬೆಟ್ಟದ ಆರಕ್ಷಕ ನಿರೀಕ್ಷಕ ಜಗದೀಶ್, ಆರಕ್ಷಕ ಉಪನಿರೀಕ್ಷಕ ಎಸ್.ಯು. ಬಸವರಾಜ್ ಹಾಗೂ ಸಿಬ್ಬಂದಿ ಪಾಲಾರ್ ಗೇಟ್ ಹತ್ತಿರ ದಾಳಿ ನಡೆಸಿ ಜಾನುವಾರನ್ನು ರಕ್ಷಿಸಿ, ಇಬ್ಬರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ನಂಜನಗೂಡು ತಾಲ್ಲೂಕು ಪದವೀಧರರ ಸಹಕಾರ ಸಂಘ (ರಿ)

ಗೋಮತಿ ಕಾಂಪ್ಲೆಕ್ಸ್, 16ನೇ ಕ್ರಾಸ್, ಆರ್.ಪಿ. ರಸ್ತೆ, ನಂಜನಗೂಡು

ಸಹಕಾರಿ ಬಂಧುಗಳೇ:

ನಮ್ಮ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ದಿನಾಂಕ 18.08.2024ನೇ ಭಾನುವಾರ ಬೆಳಿಗ್ಗೆ 11.00 ಘಂಟೆಗೆ ಭಾರತ್ ವಿಕಾಸ್ ಶಾಲೆ, ಸಿದ್ದೇಗೌಡ ಲೇಔಟ್, ಕೆ.ಎಚ್.ಬಿ ಕಾಲೋನಿ ನಂಜನಗೂಡು ಇಲ್ಲಿ ಏರ್ಪಡಿಸಲಾಗಿದೆ. ಈಗಾಗಲೇ ನಮ್ಮ ಸೊಸೈಟಿಯ ಎಲ್ಲಾ ಸದಸ್ಯರುಗಳಿಗೆ ಅಂಚೆಯ ಮೂಲಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದೆ. ಆದರೂ ಅನೇಕ ಕಾರಣದಿಂದಾಗಿ ಯಾರಿಗಾದರೂ ಅಂಚೆಯ ಮೂಲಕ ಆಹ್ವಾನ ಪತ್ರಿಕೆಯು ತಲುಪದಿದ್ದಲ್ಲಿ, ಇದನ್ನೇ "ಆಹ್ವಾನ ಪತ್ರಿಕೆ" ಎಂದು ತಿಳಿದು ಮೇಲೆ ತಿಳಿಸಿರುವ ದಿನಾಂಕದಂದು ಮಹಾಸಭೆಗೆ ಹಾಜರಾಗಬೇಕಾಗಿ ವಿನಂತಿ. ನಮ್ಮ ಸೊಸೈಟಿಯ ಸದಸ್ಯರ ಮಕ್ಕಳು ಯಾರಾದರೂ SSLC, PUC ಮತ್ತು ಡಿಗ್ರಿ ಪಾಸಾಗಿದ್ದಲ್ಲಿ, ಈ ಕೆಳಗಿನ ದೂರವಾಣಿ ಸಂಖ್ಯೆಗೆ ತಕ್ಷಣ ತಿಳಿಸುವುದು.

ಇಂತಿ ಆಡಳಿತ ಮಂಡಳಿ ಪರವಾಗಿ
ಸಹಿ/– ಕಾರ್ಯದರ್ಶಿ
ಫೋನ್: 7259835966

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು, ಹಾಲಿ ಮಾಲೀಕರಾದ ಮೈಸೂರು, ಸಿದ್ದಾರ್ಥನಗರ, ರಮ್ಯ ಕೈವಲ್ಯ ಮಾರ್ಗ, ನಂಬರ್ 822 ರಲ್ಲಿ ವಾಸವಾಗಿರುವ ಲೇಟ್. ಹೆಚ್. ರಾಮಕೃಷ್ಣ ಭಟ್ ರವರ ಮಗ, ಸುಮಾರು 65 ವರ್ಷ ವಯಸ್ಸುಳ್ಳ ಶ್ರೀ. ರಾಮಕೃಷ್ಣ ವಾಸುದೇವ ಭಟ್ ರವರಿಂದ ಶುದ್ಧಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿ/ ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್, ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾದ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ 7 (ಏಳು) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ:

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಶ್ಯಾದನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂಬರ್. 5/1 (ಹಳೇ ನಂ. 5), ಒಟ್ಟು ವಿಸ್ತೀರ್ಣ 01 ಎಕರೆ 20 ಗುಂಟೆ ಜಮೀನು ಮತ್ತು ಈ ಜಮೀನಿಗೆ ಚಕ್ಕುಬಂದಿ–ಪೂರ್ವಕ್ಕೆ: ಸರ್ವೆ ನಂ. 5/6, ಪಶ್ಚಿಮಕ್ಕೆ: ಹಳ್ಳ, ಉತ್ತರಕ್ಕೆ: ಹಳ್ಳ, ದಕ್ಷಿಣಕ್ಕೆ: ಸರ್ವೆ ನಂ. 5/8.

Sd/- Nagendra Prasad D.G.
India Law Practice, Advocates and Attorneys, No. 663, 1st Floor, 17th Main, Near Poornima Hospital, Saraswathipuram, Mysuru City - 570009. Ph: 0821-4241296/ 4262520. e-mail: nagendra@ilplaw.co.in, swathi@ilplaw.co.in

ದಿನಾಂಕ: 14.08.2024, ಸ್ಥಳ: ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದಿಸಿರುವ ಸ್ವತ್ತನ್ನು, ಅದರ ಮಾಲೀಕರಾದ ದಕ್ಷಿಣ ಕನ್ನಡ–575 008, ಮಂಗಳೂರು ತಾಲ್ಲೂಕು, ಬೊಂದೇಲ್ ಚರ್ಚ್ ಎದುರು ಇಲ್ಲಿ ವಾಸವಾಗಿರುವ ದಿ॥ ಲಾರೆನ್ಸ್ ಫೆರ್ನಾಂಡಿಸ್ ರವರ ಮಗ ಸುಮಾರು 61 ವರ್ಷ ವಯಸ್ಸಿನ ಎಡ್ವಿನ್ ಎಲಾಯಸ್ ಫೆರ್ನಾಂಡಿಸ್‌ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತು, ಅವರಿಗೆ ದಿನಾಂಕ 04.01.2008 ರಂದು ಬರೆದ ನೋಂದಾಯಿತ ಕ್ರಯಾ ಪತ್ರದ ಮೂಲಕ ಬಂದಂತಹ ಸ್ವತ್ತಾಗಿರುತ್ತದೆ. ಆದ್ದರಿಂದ ಸದರಿ ಷೆಡ್ಯೂಲ್ ನಿವೇಶನಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾದರು ಅಥವಾ ಯಾವುದೇ ಬ್ಯಾಂಕ್‌ಗಾಗಲಿ ಅಥವಾ ಯಾವುದೇ ಹಣಕಾಸು ಸಂಸ್ಥೆಗಾದರು ಅಥವಾ ಇನ್ನಿತರೆ ಯಾರಿಗಾದರು, ಯಾವುದೇ ರೀತಿಯ ಹಕ್ಕು, ತಂಟೆ, ತಕರಾರು, ಕ್ಲೇಮು, ಇತ್ಯಾದಿಗಳು ಇದ್ದಲ್ಲಿ, ಈ ಕೆಳಗೆ ನಮೂದಿಸಿರುವ ವಕೀಲರನ್ನು ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ಸಂಪರ್ಕಿಸತಕ್ಕದ್ದು. ಈ ಅವಧಿಯೊಳಗೆ ಯಾವುದೇ ರೀತಿಯ ಹಕ್ಕು, ತಂಟೆ, ತಕರಾರು ಇತ್ಯಾದಿಗಳು ಬಾರದಿದ್ದಲ್ಲಿ, ಯಾವುದೇ ಆಕ್ಷೇಪಣೆ ಇಲ್ಲವೆಂದು ತೀರ್ಮಾನಿಸಲಾಗುವುದು.

ಷೆಡ್ಯೂಲ್

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಭೋಗಾದಿ ಬಡಾವಣೆ, 1ನೇ ಹಂತದಲ್ಲಿರುವ ನಿವೇಶನ ಸಂಖ್ಯೆ 158/2ಇ ನೇ ನಂಬರ್ ಸ್ವತ್ತಿಗೆ ಚೆಕ್ಕುಬಂದಿ – ಪೂರ್ವಕ್ಕೆ : ನಿವೇಶನ ಸಂಖ್ಯೆ 440, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಿವೇಶನ ಸಂಖ್ಯೆ 428, ದಕ್ಷಿಣಕ್ಕೆ : ರಸ್ತೆ ಮತ್ತು ಕೆ.ಜಿ. ಸಿದ್ದಯ್ಯ ರವರ ಸ್ವತ್ತು ಈ ಮಧ್ಯದಲ್ಲಿರುವ ಪೂರ್ವ ಪಶ್ಚಿಮ 72.00 ಅಡಿಗಳು, ದಕ್ಷಿಣೋತ್ತರ 39.00 ಅಡಿಗಳುಳ್ಳ ಪೂರ್ತಾ ನಿವೇಶನ ಈ ಕ್ರಯದ ಕರಾರಿಗೆ ಒಳಪಟ್ಟ ಸ್ವತ್ತಾಗಿರುತ್ತದೆ.

ಸಹಿ/– ಬಿ.ಎಸ್.ಸಾವಂತ್, ವಕೀಲರು #1079/ಎ, 1ನೇ ಮಹಡಿ, ರೇಲ್ವೇ ಸ್ಟೇಷನ್ ರಸ್ತೆ, ಚಾಮರಾಜಪುರಂ, ಮೈಸೂರು–570005. ಮೊ.ನಂ.:9740097497
Email: bssavanthassociates@gmail.com

ದಿನಾಂಕ : 14.08.2024

BEFORE THE HON'BLE ADDL. SENIOR CIVIL JUDGE (SR DVN) AT SRIRANGAPATNA

MIS No.20/2019

Between: Chetan P. Tayal S/o Late Nand kishore Tayal, M Aged about 63 years, Available at residing at No.50, 'GOLD TOWERS', Residency Road, Bangalore-560025 .....**Petitioner**

And:

Rathnamma & Others .....**Respondents**

Respondent No.7: Shobha, W/o Chaluvaraju, D/o Late Ningamma, Aged about 20 years, Respondent No.7 is, R/at Hosahundi Village, Belagola Hobli, Srirangapatna Tq, Mandya Dist.

SUMMONS TO DEFENDANT THROUGH PAPER PUBLICATION

Whereas the above named Petitioner instituted the above top noted suit against defendant for restoration of mis-petition No.1/2017 on the file of the Additional Civil Judge, Senior Division, Srirangapatna, since the respondent No.7 is avoiding to take the notice of the above mis-petition proceedings, the notice to respondent No.7 is published in this newspaper, accordingly, the respondent No.7 is hereby summoned to appear before this court in person or through pleader on the 30-09-2024, at 11 AM to answer the same failing which you will be placed ex- parte, given under my hand and seal of the court, this 13-08-2024.

Sd/-Shirasthedar,
Principal Sr. Civil Judge & JMFC, Srirangapatna

Advocate for Petitioner
M. Sampath Kumar, Advocate, Building No.11, House No.123, Kengeri Satellite Town, Bangalore - 560060 **Mob: 9845147741**

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

REQUIRED
Sales Executives: 3 Posts
Qualification: Any Degree
Kindly send your resume to: Mail id:
info@sbbooks.ind.in

LEARN ASTROLOGY
BHARATHIYA VIDYA BHAVAN
THE ADMISSION ARE OPEN TO
Courses: Jyothisha Pravesha, (2) Jyothisha Pragnya, (3) Jyothisha Acharya. Short term courses: 1) Vastu, (2) Palmistry, (3) Numerology
Every Sunday: 10 am to 2 pm
Venue: Vijayanagar 1st Stage. Contact:
Sri R. Nanjundaiah, 9845174994
Sri Sunil, 9986616264
website: www.bjs-india.org

ಬೇಕಾಗಿದ್ದಾರೆ
ಸ್ಟಾರ್ ಬಜಾಜ್ Star Bajaj (Authorised Main Dealer for Bajaj Two Wheeler-Mysore) ಮಾರ್ಕೆಟಿಂಗ್ ಅಂಡ್ ಸೇಲ್ಸ್ ಎಕ್ಸಿಕ್ಯೂಟಿವ್ Qualification - Any Degree Fresher or Experienced. Place of Work.
1. N R Mohalla Near Yuvraj Home Appliances
9739549252

ತೋಟ ಮಾರಾಟಕ್ಕಿದೆ
2 ಎಕರೆ 10 ಕುಂಟೆ ತೋಟ ಮಾರಾಟಕ್ಕಿದೆ ಮಾವಿನ ಮರ, ಬಾಳೆ ತೆಂಗು ಅಡಿಕೆ, ಸೀಬೆ ದಾಳಿಂಬೆ ಬಟರ್ ಫ್ರೂಟ್ ನಿಂಬೆ ಹಿರಳಿ ಬೆಟ್ಟದ ಬೀಡು
9844624629
9980500026

ಟೈಲರ್ ಬೇಕಾಗಿದ್ದಾರೆ
ಟೀಚರ್ಸ್ ಲೇಔಟ್ ಮೈಸೂರು
9972487277

FLAT FOR RENT
One BHK fully furnished Flat with 24/7 electricity, water, parking and security facility available for Rent near Ballal Circle Single Student/ Working Female gets the priority.
Contact: 98451 26661
Brokers Excuse

30x40 ಸೈಟ್ ಬೇಕಾಗಿದೆ
ಮಾರುವವರು ಸಂಪರ್ಕಿಸಿ
ವಿಜಯನಗರ ಅಥವಾ ಸುತ್ತಮುತ್ತ
(Brokers Excuse)
9448239110

ಹೊಸ ಮನೆ ಮಾರಾಟಕ್ಕಿದೆ
ಮೈಸೂರು ನಗರದಲ್ಲಿನ ಅಶೋಕಪುರಂ 4ನೇ ಕ್ರಾಸ್ ಬಡಾವಣೆಯಲ್ಲಿ 18x55 ಅಡಿಗಳಲ್ಲಿ ಕಟ್ಟಿರುವ 2BHK ಹೊಂದಿರುವ 2 ಇಂಡಿಪೆಂಡೆಂಟ್ ಆಗಿ ಸಪರೇಟ್ ಆಗಿರುವ ಉತ್ತರ ಹಾಗೂ ಪೂರ್ವ ದಿಕ್ಕಿನ ಬಾಗಿಲು ಹೊಂದಿರುವಂತ ಹಾಗೂ ಕಾರ್ಪೋರೇಷನ್ ಖಾತೆ ಹಾಗೂ ಎಲ್ಲಾರೀತಿಯ ದಾಖಲೆಗಳನ್ನು ಹೊಂದಿರುವ ಮನೆ ಮಾರಾಟಕ್ಕಿದೆ ಬೆಲೆ ರೂ. 46,00,000/-
9019484156
9739780095

SITE FOR SALE
30X40
Sites for Sale
20x25 Lakhs
HD Kote Road and Near RT Nagar
9980616171

ಬಾದಾಮಿ, ಗೋಡಂಬಿ, ಪಿಸ್ತಾ, ಒಣದ್ರಾಕ್ಷಿ, ಖರ್ಜೂರ, ಅಂಜೂರ ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. 5 ಕಿ.ಮೀ ವರೆಗೂ ಉಚಿತ ಡೆಲಿವರಿ ಸಂಪರ್ಕಿಸಿ:
ರಾಜ್ ಗುರು ಡ್ರೈಫ್ರೂಟ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342
9845460211

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು/ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 15,000/–
8892258814

MUDA Approved
40x40 Site @ Rs.42 Lac South East Corner
Bank Loan available
Next to LBS Nagar
Behind Chamundi Hill
9538583377

ಸೈಟುಗಳು ಮಾರಾಟಕ್ಕಿದೆ
30x40 ಸೈಟ್ ಕೇವಲ 2ಲಕ್ಷ ಡೌನ್ ಪೇಮೆಂಟ್ ಸುಲಭ 36 ಕಂತುಗಳಲ್ಲಿ ಬಡ್ಡಿ ರಹಿತದಲ್ಲಿ ಪಾವತಿಸಿ. ಪ್ರತಿ ತಿಂಗಳು 10 ಸಾವಿರದಂತೆ ಮೈಸೂರು ನಂಜನಗೂಡು ಟಿವಿಎಸ್ ಫ್ಯಾಕ್ಟರಿ ಹತ್ತಿರ ಮೈಸೂರ್
6360955865
7406041847

SITE FOR SALE
Site No.554, 30x40 South Face Vijayanagara 4th Stage, 3rd Phase, Mysore
DIRECT OWNER
9900717058

SITE FOR SALE
At K.H.B Hootagalli, Mysore
Near J.C. Hostel
60x40 HIG-Group III NS
Owner
7975014259

ಮನೆ ಬಾಡಿಗೆಗೆ ಇದೆ
ಶ್ರೀರಾಂಪುರ ರಿಂಗ್ ರಸ್ತೆ ಹತ್ತಿರ ಯುನಿವರ್ಸಿಟಿ ಬಡಾವಣೆ ಎದುರು ಗಾಯಿತ್ರಿ ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ 2BHK ಮತ್ತು 1BHK ಮನೆ ಬಾಡಿಗೆಗೆ ಇದೆ
9108946647

HOUSE FOR RENT
New independent semi furnished house Beside - St. Joseph school, Hunsur road, Yelawala, Mysore Landmark - Near Brahmakumari Ashram
Ground floor - 2 BHK
Firsr floor - 2BHK
7259117278

ಸೈಟು ಮಾರಾಟಕ್ಕಿದೆ
30x40 - S/F - N/F
40x60 - W/F
58x60 N/E Corner
50x80 E/F
ರಿಂಗ್ ರೋಡ್ ಹತ್ತಿರ, ಯೂನಿವರ್ಸಿಟಿ ಲೇಔಟ್ ಎದುರು
40x60 E/F ಹಳೇ ಮನೆ, ದಟ್ಟಗಳ್ಳಿ
Mob: 9900372792

ಸೈಟು ಮಾರಾಟಕ್ಕಿದೆ
30x32, ಪೂರ್ವ ದಿಕ್ಕು, ಹೊನ್ನಸಿರಿ ಗಾರ್ಡನ್, ವರಕೋಡು ಗೇಟ್, ಟಿ.ನರಸೀಪುರ ಮುಖ್ಯ ರಸ್ತೆ.
Mob: 9480084847

ಸೈಟು ಮಾರಾಟಕ್ಕಿದೆ
30x40 ದಕ್ಷಿಣ ದಿಕ್ಕು, ಶ್ರೀ ಸಾಯಿ ಚಾಮುಂಡೇಶ್ವರಿ ಬಡಾವಣೆ, ರಾಘವೇಂದ್ರ ಸ್ವಾಮಿ ದೇವಸ್ಥಾನ ರಸ್ತೆ, ಚಿಕ್ಕಳ್ಳಿ, ಟಿ.ನರಸೀಪುರ ಮುಖ್ಯ ರಸ್ತೆ.
Mob: 9845035818

Godown for Rent
At Hootagally Industrial Area, Mysore.
2500 Sq.ft.
9964450220, 9060573900

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕೊರಿಯರ್ ಕಂಪನಿಯಲ್ಲಿ ಲೋಡ್ ಅನ್ ಲೋಡ್ ಕೆಲಸ ನಿರ್ವಹಿಸಲು ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9986411191

ಬೇಕಾಗಿದ್ದಾರೆ
ರೈಸನ್ಸ್ ನ್ಯೂಟ್ರಿಷಿಯನ್ ಕೋಳಿಫಾರಂನಲ್ಲಿ
1. ಹ್ಯಾಚರಿ ಕೆಲಸಕ್ಕಾಗಿ – 1 ಹುದ್ದೆ
2. ಸೆಕ್ಯೂರಿಟಿ ಕೆಲಸಕ್ಕಾಗಿ – 1 ಹುದ್ದೆ
ಸಂಪರ್ಕಿಸಿ: ರೈಸನ್ಸ್ ನ್ಯೂಟ್ರಿಷಿಯನ್ಸ್ ಬೆಣಗಾಲು, ಪಿರಿಯಾಪಟ್ಟಣ ತಾ॥
ವಸತಿ ಉಚಿತ, ESI, PF ಸೌಲಭ್ಯವಿರುತ್ತದೆ.
9480055297
9480055298

ಬೇಕಾಗಿದ್ದಾರೆ
ನೇಪಾಳ ಅಯೋಧ್ಯ ಮುಕ್ತಿನಾಥ ಪಶುಪತಿನಾಥ ಪ್ರವಾಸ 9 ದಿನಗಳು, ಕಾಶಿ ಗಯಾ ಬಾಬಾ ವೈದ್ಯನಾಥ್ ಪ್ರವಾಸ 7 ದಿನಗಳು, ಭೂತಾನ್ ಪ್ರವಾಸ 7 ದಿನಗಳು ಸುವರ್ಣ ಯಾತ್ರ, ಸಂಪರ್ಕಿಸಿ:
8660233673
6360146483

ಸೈಟು ಮಾರಾಟಕ್ಕಿದೆ
30x40 West Facing 72 ಲಕ್ಷ ಐಶ್ವರ್ಯ ಲೇಔಟ್, ಕ್ರೈಸ್ಟ್ ಸ್ಕೂಲ್ ಹತ್ತಿರ, ಬೋಗಾದಿ
ಮನೆ ಮಾರಾಟಕ್ಕಿದೆ
19x20 West facing, 18 ಲಕ್ಷ. ಪಟ್ಟಣ ಪಂಚಾಯ್ತಿ, ಬೋಗಾದಿ, ಮೈಸೂರು
Mob: 9986856999

Document Lost
Shaheda Khanum, #7, 2nd Cross, M.g. Road, 2nd Stage, Udayagiri, have lost original home documents of the above property.
Finders please contact:
Mob: 9844576043

WANTED
Office Boy, 10th Pass, 2 wheeler mandatory. Age: Below 25 years. Bring resume while coming, passport size photo and aadhar card copy. Office Address: Bhajan Road, Near Old Court, Oppostie to Tennis Club, Chamarajapuram, Mysore. Contact:
9742803033, 9611162888

ಕೆಲಸಕ್ಕೆ ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ಅಗ್ರಹಾರ.
ವಯಸ್ಸು: 18 ರಿಂದ 40.
(ವಿದ್ಯಾರ್ಹತೆ ಅವಶ್ಯಕತೆ ಇಲ್ಲ)
Mob: 8722123435

ಹೊಸ ಮನೆ ಮಾರಾಟಕ್ಕಿದೆ
30x40 NF Duplex 5BHK ಆರಾಧ್ಯ ಲೇಔಟ್ 1.15 Cr MUDA
20x30 ಗುರೂರು 4ನೇ ಹಂತ ಮೈಸೂರು. 39ಲಕ್ಷ
9379056972

FOR RENT
Newly Constructed Commercial building @ 73, Sahukar Chenniah Road, TK Layout, Saraswathipuram, Mysore
9844110212

ಮನೆ ಬಾಡಿಗೆಗೆ ಇದೆ
ರಾಜಶೇಖರ ಆಸ್ಪತ್ರೆ ಹಿಂಭಾಗ ಮನೆ ನಂ. 172, ರಾಗಿಮಿಲ್ 2ನೇ ಅಡ್ಡ ರಸ್ತೆ, ಮೊದಲನೇ ಮಹಡಿ, 3 ಬೆಡ್ ರೂಂ ಹಾಲ್ ಅಡುಗೆ ಮನೆ, ಊಟದ ಹಾಲ್, ದೇವರ ಮನೆ, ಸ್ನಾನದ ಮನೆ, ಸೋಲಾರ್, ಗೀಸರ್, ನೀರಿನ ಸೌಕರ್ಯ ಉತ್ತರ ಬಾಗಿಲು
7975023201
7815812948

ಅನುಬಂಧ ಮ್ಯಾರೇಜಸ್
ಸುಂದರ ಶ್ರೀಮಂತ ವಿದ್ಯಾವಂತ ವಧು ವರರಿಗೆ ನೇರ ಸಂಪರ್ಕಿಸಿ
6361740552
ನಮ್ಮ ಸಂಸ್ಥೆಗೆ ಕೆಲಸ ಮಾಡಲು ಸಮಾಜ ಸೇವಾ ಮನೋಭಾವದ ವಿದ್ಯಾವಂತ ಯುವತಿಯರ ಬೇಕು ಆಕರ್ಷಕ ಸಂಬಳ

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

FOR SALE
1. Properties at Kuvempu Nagar Starting @ 45L
2. 30x40 & 30x50 Near Varuna Lake
3. 30x50 Sites at Brahmins Layout
4. 30x30 New House at Vijaya Nagar
5. Properties For Sale at Vidyaranyapuram
6. 20x30 Site Near SBM Lyt, Bogadhi
7. 30x40 Site at Kandhaya Lyt, Srirampura
8. 100x100 Farm House @ KRS Back Water Attach 20L
PRAKRUTHI PROPERTIES
95386 90359, 90359 90359

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ಊಟ, ವಸತಿಯಿರುತ್ತದೆ ಸಂಬಳ – 15200 – 86,100
7411565140, 7892046990

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SK CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೇ ಬೇಡ ನಿಮ್ಮ ಕೈಗೆಟಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

ಬೇಕಾಗಿದ್ದಾರೆ
ಮೈಸೂರಿನಲ್ಲಿ ರಾತ್ರಿ 10 ರಿಂದ 2 ಗಂಟೆಯ ತನಕ ಮಿನಿ ಲಾರಿಗಳಿಗೆ ಪಾರ್ಸೆಲ್ ಲೋಡ್ ಮಾಡುವ ಕೆಲಸಕ್ಕೆ ಯುವಕರು ಬೇಕಾಗಿದ್ದಾರೆ.
ಮಾಸಿಕ ವೇತನ 10,000
ಸಂಪರ್ಕಿಸಿ:
9740408488
08272221912

ಓಂ ಶ್ರೀ ಮಲೆಮಾದೇಶ್ವರ ಸ್ವಾಮಿ ಜ್ಯೋತಿಷ್ಯ ಕೇಂದ್ರ
ಕೇರಳ ಮತ್ತು ಕೊಳ್ಳೇಗಾಲದ ನಂಬರ್ ಒನ್ ಗುರೂಜಿ ಶ್ರೀ ಡಿ.ಎಸ್.ರಾವ್ ನಿಮ್ಮ ಸಮಸ್ಯೆ ಪ್ರೀತಿಯಲ್ಲಿ ನಂಬಿ ಮೋಸ, ಅತ್ತೆ ಸೊಸೆ ನಾದಿನಿ ಅಣ್ಣ ತಮ್ಮಂದಿರಲ್ಲಿ ಕಲಹ, ವ್ಯಾಪಾರದಲ್ಲಿ ಲಾಭ ನಷ್ಟ, ಇನ್ನು ನಿಮ್ಮ ಜೀವನದ ಯಾವುದೇ ಸಮಸ್ಯೆಗಳಿದ್ದರೂ ಕೆಲವೇ ದಿನಗಳಲ್ಲಿ ಪರಿಹಾರ ಶತಃಸಿದ್ಧ ವಿಶೇಷ ಸೂಚನೆ ನಾವು ಮಾಡಿಕೊಟ್ಟಂತೆ ಪರಿಹಾರ ನಮಗಿಂತ ಮೊದಲು ಬೇರೆ ಯಾರೇ ಮಾಡಿಕೊಟ್ಟಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡಲಾಗುವುದು ದೂರದ ಊರಿನವರಿಗೆ ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ. ಬರುವ ಮುನ್ನ ಕರೆ ಮಾಡಿ ಬನ್ನಿ ವಿಳಾಸ ಬಸವನಗುಡಿ ಸರ್ಕಲ್ ಹೆಬ್ಬಾಳ್ ಮೇನ್ ರೋಡ್, ಮೈಸೂರು
9945182823

Sites for Sale
'Balaji Siri'
30X40, 30X50 Premium plots at T. Narasipura Main Road, attached to National Highway
Ready for Registration
Call: 9113687489

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ & SSLC / PUC pass or fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Benaka ITI College, Near Cauvery Circle, Dr. Rajkumar Road, Raghavendra Nagar, Mysore.
9342123467, 9141756695

ಬೋಳು ತಲೆಯ ಸಮಸ್ಯೆಯೇ?

ಕಿಮೊಥೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

HOUSE FOR SALE & SITE
30x40 Residential House, Ground Floor -2 BHK, 1st Floor - 1 Attach Room, 1500 Sqft Construction area, 9 and 11A Property, & 40x30 Site Also Sale, Bank loan available, Near Yelawala City Bus stand, Yelawala, Mysore.
Further details contact
95354 80519

ಮನೆ ಬಾಡಿಗೆಗೆ ಇದೆ
20x30, 2BHK
1ನೇ ಮಹಡಿ (ನಾರ್ತ್ ಫೇಸ್)
ಅರವಿಂದನಗರ
ಮನೆ ನಂ. 355, 17ನೇ ಕ್ರಾಸ್‌ನಲ್ಲಿ ಬಾಡಿಗೆಗೆ ಲಭ್ಯವಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9448247580

SITE FOR SALE
30X50 E/F
SILVER SPRINGS
BOGADI ROAD
8050821108
8792207164



Solar Water Heater
SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಮೈಸೂರಿನ ಇನ್ಫೋಸಿಸ್‌ಗೆ ಪುರುಷರು ಅಭ್ಯರ್ಥಿಗಳು
ಸೆಕ್ಯೂರಿಟಿ ಗಾರ್ಡ್ಸ್
ಆಕರ್ಷಕ ಸಂಬಳ : 21,000/–
ವಿದ್ಯಾರ್ಹತೆ: 10ನೇ ತರಗತಿ & ಪಿಯುಸಿ ತೇರ್ಗಡೆ
ವಯಸ್ಸು : 22 ರಿಂದ 40 ವರ್ಷ
78296 48007

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ.
ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1. ಕರ್ನಾಟಕ ಬ್ಯಾಂಕ ಹತ್ತಿರ, ನಜರ್‌ಬಾದ್, ಮೈಸೂರು
2. ಶಿಷ್ಕರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

SBT TRAVELS
Group Departures with Best Deals-2024
VARANASI
5N6D | 36,0000/-
Sep 11th, 23rd | OCT 4th, 21st
DUBAI
4N5D | 76,999/- | 98,999/-
Sep 06th, 16th, | Oct 11th, 14th
9743524127,9902524127
(Saraswathipuram, Mysuru)

WANTED
OFFICE WORK
(ONLY FOR LADIES)
REQUIRED COMPUTER KNOWLEDGE
QUALIFICATION : PUC/ABOVE
WORKING PLACE : MYSORE
7975368452

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ.
ವಯಸ್ಸು: 18 ರಿಂದ 35 ವರ್ಷ
ವಿದ್ಯಾರ್ಹತೆ : 7 ರಿಂದ PUC ಮತ್ತು ITI
ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
9480404036

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ Full time/Part time Data Entry, SMS Sending, Writing ಹೆಸರಾಂತ MNC ಕಂಪನಿ, ಆಫೀಸ್ ಕೆಲಸಕ್ಕೆ (Receptionist, Data Entry Account) ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT (Food and Room Free (18800/-68000/-
9964499846
9035022214

HOUSE FOR RENT
Two Bed Rooms House for Rent (Ground Floor) near Nirmala Convent Mysore 55, 6th Cross, Gokulam Ist Stage, Mysore -570002
9986589770
9986724216

ಬೇಕಾಗಿದ್ದಾರೆ
PG ಯಲ್ಲಿ ಉಳಿದುಕೊಂಡು ಅಡುಗೆ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
9845367333

SITE FOR SALE
26x60 North West Corner Bogadi Pattana Panchayath Khata
Good Location
Contact:
Sanuee Associates
6361697576

ಮನೆ ಮಾರಾಟಕ್ಕಿದೆ
ಶ್ರೀರಾಂಪುರ ರಿಂಗ್ ರಸ್ತೆ ಯುನಿವರ್ಸಿಟಿ ಬಡಾವಣೆ ಎದುರು ಗಾಯಿತ್ರಿ ಬಡಾವಣೆಯಲ್ಲಿ ನಾರ್ತ್ ಈಸ್ಟ್ ಕಾರ್ನರ್ 40x68, G+2 ಮನೆ/ಶಾಪ್ ಮಾರಾಟಕ್ಕೆ ಇದೆ.
9448092818

ಮುಡಾ ಅಪ್ರೂಡ್ ನಿವೇಶನ
30x50 ಅಳತೆಯ ಪೂರ್ವದಿಕ್ಕು ನಿವೇಶನ ಮಾರಾಟಕ್ಕಿದೆ
ವಿಜಯನಗರ 4ನೇ ಹಂತದ ಹತ್ತಿರ ಚದರಡಿ 4 ಸಾವಿರ ರೂಪಾಯಿಗಳು
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ಕರೆ ಸಮಯ ಮಧ್ಯಾಹ್ನ 3 ಗಂಟೆ ನಂತರ
9632902447

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಮತ್ತು ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಸರಸ್ವತಿಪುರಂ ಮೈಸೂರು
9ನೇ ಮೇನ್,
ಊಟ ವಸತಿ ಉಚಿತ
7795267413
7338018856

ಚಾಮರಾಜನಗರದಲ್ಲಿ ಕಾರ್ನರ್ ಸೈಟ್ ಮಾರಾಟಕ್ಕಿದೆ
ಚಾಮರಾಜನಗರದಲ್ಲಿ ಜಿಲ್ಲಾ ಕ್ರೀಡಾಂಗಣದ ಎದುರಿನ ಪ್ರತಿಷ್ಠಿತ ಕೆ.ಹೆಚ್.ಬಿ ಲೇಔಟ್‌ನಲ್ಲಿ 2000 ಚ.ಅಡಿ (ಉತ್ತರ–60 ಅಡಿ, ಪಶ್ಚಿಮ–33) ವಿಸ್ತೀರ್ಣವುಳ್ಳ HIG 220, ಕಾರ್ನರ್ ಸೈಟ್ ಮಾರಾಟಕ್ಕಿದೆ.
* ಲೇಔಟ್‌ನಲ್ಲಿ 5 ಪಾರ್ಕ್‌ಗಳಿಗೆ
* ಖಾಸಗಿ ಬಸ್ ನಿಲ್ದಾಣ ರೈಲು ನಿಲ್ದಾಣಕ್ಕೆ ಹತ್ತಿರ.
9449009229
9740661568

ಕಳೆದಿದೆ
ಲೇಟ್ ಎಸ್.ಸಿದ್ದಪ್ಪ, ನಂ.1, 2ನೇ ಮೇನ್ ರೋಡ್, ಯಾದವಗಿರಿ, ಮೈಸೂರು–20 ಮೇಲೆ ತಿಳಿಸಿರುವ ವಿಳಾಸಕ್ಕೆ ಸಂಬಂಧಪಟ್ಟ ದಾಖಲಾತಿಗಳು ಕ್ರಯಪತ್ರ ಸ್ವಾಧೀನ ಪತ್ರ ಖಾತಾ ಎಂಡಾರ್ಸ್‌ಮೆಂಟ್ ಚಲನ್ ಹಾಗೂ ಇನ್ನಿತರ ದಾಖಲಾತಿಗಳು ಕಳೆದು ಹೋಗಿರುತ್ತದೆ. ಸಿಕ್ಕವರು ಸಂಪರ್ಕಿಸಿ
ಎಸ್.ರಾಮಲಿಂಗ
8197945400

ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ
ಕಂಪನಿ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (ಸಂಬಳ: 18000rs ಇಂದ 30000rs + ಇನ್ಸೆಂಟಿವ್ಸ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
9632831680,7411273440

ಬೇಕಾಗಿದ್ದಾರೆ
ಮೈಸೂರಿನ ವಿಶ್ವೇಶ್ವರನಗರ ಮಹರ್ಷಿ ಶಾಲೆಯ ಬಳಿ ಇರುವ ಕಾರ್ಖಾನೆಗೆ ಬೆಳಿಗ್ಗೆ 7 ಗಂಟೆಯಿಂದ ಸಂಜೆ 5 ಗಂಟೆವರೆಗೆ ಹೌಸ್ ಕೀಪಿಂಗ್ ಕೆಲಸ ಮಾಡಲು (ಕಸ ಗುಡಿಸಲು) ಪುರುಷ (ಹುಡುಗರು) ಬೇಕಾಗಿದ್ದಾರೆ. ವೇತನ ತಿಂಗಳಿಗೆ 12000/– ಸಾವಿರ ರೂ.ಗಳು ಬೆಳಿಗ್ಗೆ ತಿಂಡಿ ಮಧ್ಯಾಹ್ನ ಊಟ ವಾರದ ರಜೆ ESI & PF ಸೌಲಭ್ಯವಿರುತ್ತದೆ.
9731976148

FLAT FOR SALE
2BHK Fully Furnished East Facing, Vijayanagara 3rd Stage.
9035649726

ಬೇಕಾಗಿದ್ದಾರೆ
Telecaller (Female)
Hitech Solar Fence
R-155, 7th Main, Hebbal Industrial Estate, Mysore-570016
9448247741
9448186377

ಸೈಟ್ ಫಾರ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್ 28x40 ಮುಡಾ ಖಾತೆ ಜ್ಞಾನಭಾರತಿ ಲೇಔಟ್ ದಡದಹಳ್ಳಿ, ಏರ್ ಪೋರ್ಟ್ ಹಿಂಭಾಗದ ಹೈವೆ
ಬೆಲೆ : 36 ಲಕ್ಷ
9342123373

ಟೇಸ್ಟಿ ಟ್ರೆಂಡ್ ಐಸ್ ಕ್ರೀಂಸ್
ಮದುವೆ ಹಾಗೂ ಸಮಾರಂಭಗಳಿಗೆ ಐಸ್ ಕ್ರೀಂ ಸರಬರಾಜು ಮಾಡುತ್ತೇವೆ. ಹಾಗೂ ಡಿಸ್ಟ್ರಿಬ್ಯೂಟರ್‌ಗಳು ಬೇಕಾಗಿದ್ದಾರೆ.
ಶಾಂತು: 9964180027
ಅನಂತು: 9886343896

WANTED
For Part Time Job
No Target,
No Investment
Male / Female
As Customer Consultant
No Age Limit
8197945400

SITE FOR SALE
13X110
North Facing Site Near JSS Vidyapeeta Gunhouse Devaramani Agrahara, Mysore
7090804999

ಬೇಕಾಗಿದ್ದಾರೆ
ನಂಜನಗೂಡು ಸನ್‌ಡೈರೆಕ್ಟ್ ಆಫೀಸ್‌ನಲ್ಲಿ ಟೆಕ್ನಿಷಿಯನ್ ಆಗಿ ಕೆಲಸಮಾಡಲು ದ್ವಿಚಕ್ರವಿರುವ ಹುಡುಗರು ಮತ್ತು ಆಫೀಸ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
9141150150

ಬೇಕಾಗಿದ್ದಾರೆ
ಮೈಸೂರಿನ ಲಕ್ಷ್ಮೀಪುರಂನಲ್ಲಿ ಬೆಳಿಗ್ಗೆ 8 ರಿಂದ ರಾತ್ರಿ 8 ರವರೆಗೆ 1 ವರ್ಷದ ಮಗುವನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ.
9632866616

FANTASTIC OPPORTUNITY
For Retired Officials (State Govt/ Central Govt / Banking Sector/Public and Private Sector). House wives, Businessmen to be a part of India's leading insurance company with zero investment and flexible working hours (Work from home) An Opportunity to earn attractive and unlimited commission and incetives.
Intrerested persons may
G.N. DATTATRI 9845458130
G.N. DATTARI 886191856

ತಕ್ಷಣ ಬೇಕಾಗಿದ್ದಾರೆ
ನಂಜಗೂಡಿನ ಚಿಕ್ಕಯ್ಯನಛತ್ರದಲ್ಲಿನ ಹೆಸರಾಂತ ಕಂಪನಿಗೆ ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಕೆಲಸದ ಸಮಯದ 8 ಗಂಟೆ/26 ದಿನಗಳು. ಸೌಲಭ್ಯಗಳು ವಾರದ ರಜೆ ಇ.ಎಸ್.ಐ. ಪಿಎಫ್ ಹಾಗೂ ಕ್ಯಾಂಟೀನ್ ಸೌಲಭ್ಯವಿರುತ್ತದೆ.
9108990972
9900066478

ನಿವೇಶನ ಮಾರಾಟಕ್ಕಿದೆ
48, (ದಕ್ಷಿಣ) 30x50 (9Mx15M) ಅಮೃತ ವರ್ಷಿನಿ ಎನ್‌ಕ್ಲೈವ್ಸ್, ವಿಷ್ಣುವರ್ಧನ ಸ್ಮಾರಕದ ಪಕ್ಕ (ಉದ್ಬೂರ್ ಗೇಟ್ ಹತ್ತಿರ) ಹೆಚ್.ಡಿ.ಕೋಟೆ ರಸ್ತೆ, ಮೈಸೂರು–08 ಒಂದು ಚದರ ಅಡಿಗೆ ರೂ.3500/–
9964482234

HOUSE FOR RENT
2BHK 2nd Floor
188, CFTRI Layout
Bogadi 2nd Stage
Mysore-26
9448640910
9611418250

ಜಮೀನುಗಳು ಬೇಕಾಗಿದೆ
ಮೈಸೂರು ತಾ. ಜಯಪುರ ಇಲವಾಲ ವರುಣಾ ಹೋಬಳಿಗಳ ಸುತ್ತಮುತ್ತ ನಿವೇಶನ ಬಡಾವಣೆಯ ಉದ್ದೇಶಕ್ಕಾಗಿ SC & ST ಜನಾಂಗದ ಪಿತ್ರಾರ್ಜಿತ ಸ್ವಯಾರ್ಜಿತ ಚಕ್ರ ಇನಾಂ ಮತ್ತು ಭೂಸುದಾರಣೆ ಕಾಯ್ದೆ ಜಮೀನುಗಳು ಬೇಕಾಗಿದೆ.
9980710905
8310076853

WANTED
1) Godown Helper - 1 Post
Qualification: PUC (Male)
2) House Keping (Female): 1 Post
3) Driver: 1 Post
Salary 13,000 + DA
9535584111, 9448263927

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಐದನೇ ಪುಟದಿಂದ

ಅಮೆರಿಕ ವೀಸಾ ನಿರಾಕರಣೆ

ಆ.10ರಂದು ಸಂಬಂಧಿಸಿದ ದಾಖಲಾತಿಗಳನ್ನು ಅಮೆರಿಕ ರಾಯಭಾರಿ ಕಚೇರಿಯಲ್ಲಿ ಹಾಜರುಪಡಿಸಿದ್ದೆ. ಅಲ್ಲದೆ, ಅವರು ಕೇಳಿದ ಮೂರ್‍ನಾಲ್ಕು ಪ್ರಶ್ನೆಗಳಿಗೆ ಉತ್ತರವನ್ನೂ ನೀಡಲಾಯಿತು. ಆದರೆ ಆ ಸಂದರ್ಭದಲ್ಲೇ ವೀಸಾ ನಿರಾಕರಣೆಯಾಗಿದೆಯೆಂದು ಮಾಹಿತಿ ನೀಡಿದರು ಎಂದು ತಿಳಿಸಿದರು.

ಯಾವುದಾದರೂ ನಿರ್ದಿಷ್ಟ ಕಾರಣ ನೀಡಲಾಯಿತೇ? ಎಂಬುದಕ್ಕೆ ಪ್ರತಿಕ್ರಿಯಿಸಿದ ಅರುಣ್, ಇಲ್ಲ ಕೊಡಲಿಲ್ಲ. ಅವರ ಆಂತರಿಕ ನಿಯಮ ಮತ್ತು ನಿಬಂಧನೆಗಳು ನಮಗೆ ಅಷ್ಟಾಗಿ ಗೊತ್ತಿಲ್ಲ. ಆದರೆ ಅವರು ಕೇಳಿದ್ದ ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ಹೋಗಿದ್ದೆವು. ಆದಾಯ ತೆರಿಗೆ ಪಾವತಿ, ಆಸ್ತಿ ವಿವರಗಳನ್ನು ಅವರ ಮುಂದಿಡಲಾಯಿತು. ಅಲ್ಲದೆ, ಅವರ ಕೇಳಿದ ಹಿನ್ನೆಲೆಯಲ್ಲಿ ತಿಂಗಳ ಆದಾಯದ ಬಗ್ಗೆಯೂ ಮಾಹಿತಿ ಕೊಡಲಾಯಿತು ಎಂದರು.

ಯಾರ‍್ಯಾರು ಅಮೆರಿಕ ಪ್ರವಾಸಕ್ಕೆ ಹೋಗಲು ಸಿದ್ಧತೆ ಮಾಡಿಕೊಂಡಿದ್ದೀರಿ ಎಂಬುದಕ್ಕೆ ಉತ್ತರಿಸಿದ ಅವರು, ನಾನು 20 ದಿನ ಪ್ರವಾಸಕ್ಕೆ ಹೋಗಬೇಕಿತ್ತು. ಕೆಲಸದ ಒತ್ತಡದ ಹಿನ್ನೆಲೆಯಲ್ಲಿ ಕುಟುಂಬದೊಂದಿಗೆ ಪ್ರವಾಸ ಕೈಗೊಂಡು ಎಷ್ಟೋ ದಿನಗಳಾಗಿರುವ ಕಾರಣ ನನ್ನ ಪತ್ನಿ ಮತ್ತು ಮಕ್ಕಳನ್ನು ಕರೆದುಕೊಂಡು ಹೋಗಲು ಮುಂದಾಗಿದ್ದೆ ಎಂದು ಹೇಳಿದರು.

ಮುಂದಿನ ತಿಂಗಳು ಯುಕೆ ಪ್ರವಾಸ: ಬಲರಾಮನ ಕೆತ್ತನೆ ನಂತರ ವಿದೇಶಕ್ಕೆ ಇದು ಮೊದಲ ಪ್ರಯಾಣವೇ ಎಂಬುದಕ್ಕೆ ಉತ್ತರಿಸಿದ ಅವರು, ಹೌದು, ಅಮೆರಿಕ ಪ್ರವಾಸ ಕೈತಪ್ಪಿದೆ. ಮುಂದಿನ ತಿಂಗಳು ಯುಕೆಗೆ ಪ್ರವಾಸದ ಯೋಜನೆ ಇದ್ದು, ಅಲ್ಲಿಗೆ ಹೋಗಲು ಅವಕಾಶ ದೊರೆಯುವ ವಿಶ್ವಾಸವಿದೆ. ಆ.30ರಂದು ಅಮೆರಿಕದಲ್ಲಿ ಅಕ್ಕ ಸಮ್ಮೇಳನ ಆಯೋಜನೆಯಾಗಿದೆ. ಸಹ್ಯಾದ್ರಿ ಕನ್ನಡಿಗ ಸಂಘಟನೆಯಿಂದ ಶ್ರೇಷ್ಠ ಕನ್ನಡಿಗ ಬಿರುದು ನೀಡುವ ಕಾರ್ಯಕ್ರಮವೂ ಇದೆ. ಮಾತ್ರವಲ್ಲದೆ, ಭಾರತೀಯ ಸಂಘಟನೆಗಳ ಕಾರ್ಯಕ್ರಮದಲ್ಲಿಯೂ ಪಾಲ್ಗೊಳ್ಳಬೇಕಿತ್ತು ಎಂದು ವಿವರಿಸಿದರು.

ನಮ್ಮ ಕಡೆಯಿಂದ ಎಲ್ಲವೂ ಪರಿಪೂರ್ಣವಾಗಿತ್ತು. ಆದರೆ ಇದರ ನಡುವೆಯೂ ಅವರ ಅಪೇಕ್ಷಿತ ದಾಖಲೆಗಳು ಯಾವುವೋ ಗೊತ್ತಿಲ್ಲ. 100ರಲ್ಲಿ ಸುಮಾರು 75ರಷ್ಟು ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ ಎಂಬ ಮಾಹಿತಿ ಲಭ್ಯವಾಯಿತು. ಆದರೆ ನನಗೇನು ಬೇಸರವಾಗಲಿಲ್ಲ. ನನಗೆ ಇಂಡಿಯಾದಲ್ಲಿ ಇರುವುದೇ ಖುಷಿ. ನಮ್ಮ ವಿದೇಶಾಂಗ ವ್ಯವಹಾರಗಳ ಸಚಿವಾಲಯದಿಂದ ಎಲ್ಲಾ ರೀತಿಯ ಸಹಕಾರ ದೊರೆತ್ತಿತ್ತು ಎಂದರು.

ಮತ್ತೆ ವೀಸಾಗೆ ಅರ್ಜಿ ಸಲ್ಲಿಸಿಲ್ಲ: ಅಮೆರಿಕ ವೀಸಾಗೆ ಮತ್ತೆ ಅರ್ಜಿ ಸಲ್ಲಿಸುತ್ತೀರಾ? ಎಂಬುದಕ್ಕೆ ಪ್ರತಿಕ್ರಿಯಿಸಿದ ಅವರು, ಮತ್ತೆ ಅರ್ಜಿ ಸಲ್ಲಿಸುವ ಮನಸ್ಸು ಸದ್ಯಕ್ಕೆ ಇಲ್ಲ. ಇದು ತುಂಬ ದೀರ್ಘ ಪ್ರಕ್ರಿಯೆ. ಹಾಗಾಗಿ ಬೇಡ ಎನ್ನಿಸುತ್ತದೆ. ಸುಮ್ಮನೆ ಸಮಯ ವ್ಯರ್ಥವಾಗಲಿದೆ. ಅಮೆರಿಕದ ಗ್ಯಾಲರಿ, ಮ್ಯೂಸಿಯಂಗಳಿಗೆ ಭೇಟಿ ಮಾಡುವ ಉದ್ದೇಶವಿತ್ತು. ಜೊತೆಗೆ ಕೆಲ ಸ್ನೇಹಿತರೂ ಇದ್ದು, ಅವರನ್ನು ಭೇಟಿ ಮಾಡುವ ಆಲೋಚನೆಯಲ್ಲಿದ್ದೆ. ಮುಂದಿನ ವರ್ಷ ಅವಕಾಶ ಸಿಕ್ಕರೆ ಹೋಗುತ್ತೇನೆ ಎಂದರಲ್ಲದೆ, ಅಮೆರಿಕದ ಸಾಕಷ್ಟು ಕನ್ನಡಿಗರು ಹಾಗೂ ಭಾರತೀಯರು ತಮ್ಮನ್ನು ಅಲ್ಲಿಗೆ ಕರೆಸಿಕೊಳ್ಳುವ ಅಪೇಕ್ಷೆ ಹೊಂದಿದ್ದರು. ಅವರಿಗೆ ಏನು ಹೇಳ ಬಯಸುತ್ತೀರಿ ಎಂಬುದುಕ್ಕೆ ಪ್ರತಿಕ್ರಿಯಿಸಿ, ಈ ಬಾರಿ ಬರಲು ಸಾಧ್ಯವಾಗುತ್ತಿಲ್ಲ. ಮುಂದೊಮ್ಮೆ ನಿಮ್ಮ ಭೇಟಿ ಮಾಡುವ ವಿಶ್ವಾಸವಿದೆ. ಹಾಗಾಗಿ ತಮ್ಮ ಪ್ರೀತಿ-ವಿಶ್ವಾಸ ಹೀಗೆಯೇ ಇರಲೆಂದು ಕೋರುವುದಾಗಿ ಹೇಳಿದರು.

ಬಿಪಿಎಲ್ ಕಾರ್ಡ್‌ಗೆ ಸರ್ಜರಿ

ತೀರ್ಮಾನಕ್ಕೆ ಬಂದಿದೆ. ಗೃಹ ಜ್ಯೋತಿ, ಶಕ್ತಿ, ಯುವನಿಧಿ, ಅನ್ನಭಾಗ್ಯ, ಹಾಗೂ ಗೃಹಲಕ್ಷ್ಮಿ ಯೋಜನೆಗಳು ಕಡುಬಡವರಿಗಲ್ಲದೆ, ಉಳ್ಳ ವರಿಗೂ ದೊರೆಯುತ್ತಿವೆ. ಅದರಲ್ಲೂ ಗೃಹ ಜ್ಯೋತಿ, ಶಕ್ತಿ ಹಾಗೂ ಯುವ ನಿಧಿ ಸರ್ಕಾರಿ ನೌಕರರೂ ಸೇರಿ ದಂತೆ ಎಲ್ಲಾ ವರ್ಗದವರು ಈ ಸವಲತ್ತು ಪಡೆಯುತ್ತಿದ್ದಾರೆ. ಉಳ್ಳವರಿಗೆ ಸವಲತ್ತು ಕಲ್ಪಿಸುವ ಬದಲು ಅರ್ಹ ಕಡುಬಡ ವರಿಗಷ್ಟೇ ಗ್ಯಾರಂಟಿ ಯೋಜನೆಗಳನ್ನು ಮುಂದು ವರೆಸುವಂತೆ ಸಚಿವರು ಮತ್ತು ಆಡಳಿತ ಪಕ್ಷದ ಶಾಸಕರೇ ಮುಖ್ಯಮಂತ್ರಿ ಗಳ ಮೇಲೆ ಒತ್ತಡ ಹೇರಿದ್ದಾರೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಅಭಿವೃದ್ಧಿ ಕಾರ್ಯ ಕುಂಠಿತಗೊಂಡಿದೆ. ಯೋಜನೆ ಪರಿಷ್ಕೃತಗೊಂಡರೆ ಸುಮಾರು ವಾರ್ಷಿಕ 35 ಸಾವಿರ ಕೋಟಿ ರೂ. ಉಳಿತಾಯವಾಗಲಿದೆ. ಈ ಬಾಬ್ತನ್ನು ಅನ್ಯ ಯೋಜನೆ ಗಳಿಗೆ ಬಳಸಿಕೊಳ್ಳಬಹುದು ಎಂದು ಸಚಿವರು ಮುಖ್ಯಮಂತ್ರಿಯವರಿಗೆ ತಿಳಿ ಹೇಳಿದ್ದಾರೆ. ಯೋಜನೆಗಳನ್ನು ಕಡಿತಗೊಳಿ ಸಲು ಕಾಂಗ್ರೆಸ್ ವರಿಷ್ಠರು ಅನುಮತಿ ನೀಡುತ್ತಿಲ್ಲ. ಇದರ ಹಿನ್ನೆಲೆಯಲ್ಲಿ ನಿನ್ನೆ ಮುಖ್ಯಮಂತ್ರಿಯವರ ಆಪ್ತ ಬಳಗದ ಸಚಿವರುಗಳು ಕಳೆದ ಮಂಗಳವಾರ ದೆಹಲಿಯಲ್ಲಿ ವರಿಷ್ಠರನ್ನು ಭೇಟಿ ಮಾಡಿ, ಉಳ್ಳವರಿಗ್ಯಾತಕ್ಕೆ ಗ್ಯಾರಂಟಿಗಳನ್ನು ನೀಡಬೇಕು. ಅದರ ಬದಲು ಕಡುಬಡವರಿಗೆ ನೀಡಿ, ಉಳಿದ ಹಣವನ್ನು ಅಭಿವೃದ್ಧಿಗೆ ಬಳಸಿಕೊಳ್ಳೋಣ ಎಂದು ಅಂಕಿ-ಅಂಶಗಳ ಸಮೇತ ಮಾಹಿತಿ ನೀಡಿರುವುದಲ್ಲದೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ಈ ಯೋಜನೆ ನಮಗೆ ಸಂಪೂರ್ಣವಾಗಿ ಕೈಹಿಡಿದಿಲ್ಲ ಎಂಬ ಮಾಹಿತಿಯನ್ನು ವರಿಷ್ಠರ ಗಮನಕ್ಕೆ ತಂದಿದ್ದಾರೆ. ಸಚಿವರ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿಯವರು ಮುಂದಿನ ಸಂಪುಟ ಸಭೆಯಲ್ಲಿ ಈ ಸಂಬಂಧ ತೀರ್ಮಾನ ಕೈಗೊಂಡು ಒಂದು ಮಾರ್ಗ ಸೂಚಿ ರಚನೆಗೆ ಸಮಿತಿ ರಚಿಸುವ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.











ಶ್ರೀ ಸಂದೇಶ್ ನಾಗರಾಜ್‌ರವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು


JOS ALUKKAS
A TRADITION OF FINE JEWELLERY
60 ವರ್ಷಗಳ ಸಂತಸವನ್ನು ಒಂದಾಗಿ ಸಂಭ್ರಮಿಸೋಣ... ಬನ್ನಿ.
60 ANNIVERSARY
6 ಕೋಟಿ ಮೌಲ್ಯದ ಉಡುಗೊರೆಗಳು
ಇದು ಜೋಸ್ ಆಲುಕ್ಕಾಸ್‌ನ ವೈಭವಯುತ 60 ವರ್ಷಗಳ ಸಂಭ್ರಮ.
6 ವಾರಗಳ ಅವಧಿಯ ಅದ್ದೂರಿ ಹಬ್ಬಗಳ ಶ್ರೇಣಿಗೆ ತಮಗೆಲ್ಲರಿಗೂ ಸುಸ್ವಾಗತ. ಈ ಒಂದು ವಿಶೇಷ ಸಂದರ್ಭದಲ್ಲಿ, ಆತ್ಯಾಕರ್ಷಕ ಕೊಡುಗೆಗಳ ಜೊತೆಗೆ, ಹೊಚ್ಚ-ಹೊಸ, ಉತ್ಕೃಷ್ಟ ಚಿನ್ನ ಮತ್ತು ವಜ್ರಾಭರಣಗಳ ಸಂಗ್ರಹಗಳು ನಿಮಗಾಗಿ ಕಾಯುತ್ತಿವೆ. ಆತ್ಮೀಯ ಗ್ರಾಹಕರೇ, ನಿಮ್ಮ ಪ್ರೀತಿ ಮತ್ತು ವಿಶ್ವಾಸಗಳ ಹೊರತಾಗಿ ನಾವಿಂದು ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ತಮ್ಮೆಲ್ಲರಿಗೂ ತುಂಬು ಹೃದಯದ ಕೃತಜ್ಞತೆಗಳು.
ಈ ವರಲಕ್ಷ್ಮಿ ವ್ರತಕ್ಕೆ ಜೋಸ್ ಆಲುಕ್ಕಾಸ್‌ನಲ್ಲಿ ಚಿನ್ನದ ಆಭರಣಗಳನ್ನು ಖರೀದಿಸಿ ಮತ್ತು ನಿಮ್ಮ ಮನೆಗೆ ಸಕಲ ಐಶ್ವರ್ಯಗಳನ್ನು ಬರಮಾಡಿಕೊಳ್ಳಿ.
ಮೆಗಾ ಬಂಪರ್ ಬಹುಮಾನ*
6 ಕಾರುಗಳು
ಪ್ರತಿವಾರದ ಉಡುಗೊರೆ*
ಗೃಹೋಪಯೋಗಿ ವಸ್ತುಗಳು & ಚಿನ್ನದ ನಾಣ್ಯಗಳು
ಲಕ್ಕೀ ಡ್ರಾ ಮುಖಾಂತರ
ಉಚಿತ ಉಡುಗೊರೆಗಳು ಎಲ್ಲಾ ಖರೀದಿಗಳಿಗೆ
*T&C apply
Push360
ವಜ್ರಗಳ ಮೇಲೆ 20% ರಿಯಾಯಿತಿ*
ಪ್ಲಾಟಿನಂ ಮೇಲೆ 7% ರಿಯಾಯಿತಿ*
ನಿಮ್ಮ ವಜ್ರಗಳಿಗೆ 100%* ಮೌಲ್ಯವನ್ನು ಪಡೆಯಿರಿ ಹೊಸ ವಜ್ರದ ಆಭರಣಗಳಿಗೆ ಎಕ್ಸ್‌ಚೇಂಜ್ ಮಾಡುವಾಗ!
MYSURU: Opp. Woodlands Theatre, B.N. Road. Ph: 0821-2441012.
Shop online at www.josalukkasonline.com
ಜೋಸ್ ಆಲುಕ್ಕಾಸ್
KARNATAKA | ANDHRA PRADESH | TELANGANA | TAMIL NADU | PUDUCHERRY | KERALA


Vastra Vaibhav
Celebrate
Independence
offer
upto50%off
BED SHEETS
for comfort sleep
Bombay Dyeing
Shiv Market, shivarampet Beside Rajkamal Theatre, Mysuru
0821-4288614


ಹಸಿರು ನಮ್ಮ ಉಸಿರು


ಜೈ ಜವಾನ್
ಕರ್ನಾಟಕ ಪ್ರಜಾ ಪಾರ್ಟಿ
(ರೈತ ಪರ್ವ)
ಜೈ ಕಿಸಾನ್
ನಾಡಿನ ಸಮಸ್ತ ಜನತೆಗೆ 78ನೇ ವರ್ಷದ
ಸ್ವಾತಂತ್ರ್ಯೋತ್ಸವದ ಶುಭಾಶಯಗಳು
ಮಾನ್ಯರೇ,
ಮುಂಬರುವ ಮೈಸೂರು ಮಹಾನಗರ ಪಾಲಿಕೆ ಚುನಾವಣೆ ಮತ್ತು ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಸ್ಪರ್ಧಿಸುವ ಆಕಾಂಕ್ಷಿ ಅಭ್ಯರ್ಥಿಗಳಿಂದ ಪಕ್ಷದ ಅಧಿಕೃತ ಕಚೇರಿಗೆ ಅರ್ಜಿ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.
ಸಂಪರ್ಕಿಸಿ: ಸಹಾಯಕ ಕಾರ್ಯದರ್ಶಿ ಮಹೇಶ್ ಕುಮಾರ್.ಎಂ
ಮೊಬೈಲ್ ಸಂಖ್ಯೆ : 9739859576 .
ಡಾ.ಬಿ.ಶಿವಣ್ಣ
ಸಂಸ್ಥಾಪಕ ರಾಜ್ಯಾಧ್ಯಕ್ಷರು, ಕೆ.ಪಿ.ಪಿ.

ಏಕ್ಸಾಟ್ರಾ ಇನ್ನಿಂಗ್ಸ್

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಆಗಸ್ಟ್ 15
ಗುರುವಾರ 2024

ಪುಟಗಳು: 4



ನಾಡಿನ ಸಮಸ್ತರಿಗೂ
ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಒಕ್ಕಲಿಗರು ನೇಗಿಲು ಹಿಡಿಯುವ ಜೊತೆಗೆ ಉದ್ಯಮಿಗಳಾಗಿ ಬೆಳೆಯಬೇಕು

ಆದಿಚುಂಚನಗಿರಿ ಮಠದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ

ಮೈಸೂರು, ಆ.14(ಬಿಎಲ್‌ಯು)– ಒಕ್ಕಲಿಗ ಸಮುದಾಯ ನೇಗಿಲು ಹಿಡಿಯುವುದರ ಜೊತೆಗೆ ಉದ್ಯಮಿಗಳಾಗಿ ಕೂಡ ಬೆಳೆಯಬೇಕು ಎಂದು ಆದಿ ಚುಂಚನಗಿರಿ ಮಠದ ಡಾ.ಶ್ರೀ ನಿರ್ಮಲಾ ನಂದನಾಥ ಸ್ವಾಮೀಜಿ ಸಲಹೆ ನೀಡಿದರು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ವಾರ್ಷಿಕ ಪ್ರತಿನಿಧಿಗಳ ಮತ್ತು ಹೂಡಿಕೆದಾರರ ಸಮಾವೇಶ–2024 ಉದ್ಘಾಟಿಸಿ ಮಾತನಾಡಿದ ಅವರು, ಒಕ್ಕಲಿಗ ಸಮುದಾಯ ಕೂಡ ಆಧುನಿಕತೆಗೆ ತಕ್ಕಂತೆ ಬದಲಾವಣೆಗೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಹೇಳಿದರು.

ಜಗತ್ತು ಬದಲಾವಣೆ ಆದಂತೆ ನಾವು ಕೂಡ ಬದಲಾವಣೆ ಹೊಂದಬೇಕು. ಇಲ್ಲದಿದ್ದರೆ ಕಳೆದು ಹೋಗುತ್ತೇವೆ ಎಂದು ಎಚ್ಚರಿಸಿದ ಸ್ವಾಮೀಜಿ, ಒಕ್ಕಲಿಗರಾದ ನಾವು ಖಡ್ಗ ಹಿಡಿದು ರಾಜ್ಯವನ್ನಾಳಿದೆವು. ನೇಗಿಲು ಹೊತ್ತು ಕೃಷಿ ಮಾಡಿದೆವು. ಆದರೆ ಈಗ ಕಾಲ ಬದಲಾಗಿದೆ. ಈ ನಿಟ್ಟಿನಲ್ಲಿ ಆಧುನಿಕತೆಗೆ ತಕ್ಕಂತೆ ನಾವು ಕೂಡ ಬದಲಾಗಬೇಕು. ಈ ಮೂಲಕ ಉದ್ಯಮಿಗಳಾಗಿ ರೂಪುಗೊಂಡು ಆರ್ಥಿಕವಾಗಿ ಶಕ್ತಿಯುತರಾಗಬೇಕು ಎಂದು ಒತ್ತಿ ಹೇಳಿದರು. ನಾವು ಆರ್ಥಿಕರಾಗಿ ಬೆಳವಣಿಗೆ ಹೊಂದುವ ಮೂಲಕ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕು. ದೇಶದ ಅಭಿವೃದ್ಧಿಯಲ್ಲಿ ಒಕ್ಕಲಿಗರು ಪ್ರಮುಖ ಪಾತ್ರ ವಹಿಸಬೇಕು ಎಂದು ಕಿವಿಮಾತು ಹೇಳಿದರು.

33 ಕೋಟಿ ಜನಸಂಖ್ಯೆ ಹೊಂದಿರುವ ಅಮೇರಿಕಾದ ಬಜೆಟ್ 26 ಟ್ರಿಲಿಯನ್ ಡಾಲರ್, 140 ಕೋಟಿ ಜನಸಂಖ್ಯೆ ಇರುವ ಚೈನಾ ಬಜೆಟ್ 20 ಟ್ರಿಲಿಯನ್ ಡಾಲರ್ ಇದೆ. ಆದರೆ ಜಗತ್ತಿನಲ್ಲೇ ಅತೀ ಹೆಚ್ಚು ಜನಸಂಖ್ಯೆ ಇರುವ ಭಾರತದ ಬಜೆಟ್ 4 ಟ್ರಿಲಿಯನ್ ದಾಟಲು ಪ್ರಯಾಸ ಪಡುತ್ತಿದ್ದೇವೆ. ಈ ಹಿನ್ನೆಲೆ ಒಕ್ಕಲಿಗರು ಕೂಡ ಉದ್ಯಮಿಗಳಾಗಿ ಬೆಳವಣಿಗೆ ಸಾಧಿಸುವ ಮೂಲಕ ಭಾರತವನ್ನು ಕೂಡ ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕು ಎಂದು ಸ್ವಾಮೀಜಿ ಹೇಳಿದರು. ಶೈಕ್ಷಣಿಕ, ವೈದ್ಯಕೀಯ, ಜ್ಞಾನ, ತಂತ್ರಜ್ಞಾನ, ಕೃಷಿ, ಉದ್ಯಮ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಒಕ್ಕಲಿಗ ಸಮುದಾಯ ಆರ್ಥಿಕ ಸ್ವಾವಂಭಿಗಳಾಗಬೇಕು. ಇದರ ಜೊತೆಗೆ ಪ್ರಮುಖವಾಗಿ ಸ್ವಾವಲಂಬಿಗಳಾಗಿ ಕೂಡ ಬದುಕಬೇಕು ಎಂದು ಸ್ವಾಮೀಜಿ ತಿಳಿಸಿದರು.



ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಬುಧವಾರ ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ವಾರ್ಷಿಕ ಪ್ರತಿನಿಧಿಗಳ ಮತ್ತು ಹೂಡಿಕೆದಾರರ ಸಮಾವೇಶ–2024 ಅನ್ನು ಆದಿಚುಂಚನಗಿರಿ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ಒಕ್ಕಲಿಗರು ನೌಕರಿಯನ್ನು ಸೃಷ್ಟಿಸುವ ಉದ್ಯಮಿಗಳಾಗಬೇಕು

ಒಕ್ಕಲಿಗ ಸಮುದಾಯ ನೌಕರಿಗೆ ಮಾತ್ರ ಸೀಮಿತವಾಗದೆ ನೌಕರಿಯನ್ನು ಸೃಷ್ಟಿಸುವ ಉದ್ಯಮಿಗಳಾಗಿ ಬೆಳವಣಿಗೆ ಸಾಧಿಸಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಸಲಹೆ ನೀಡಿದರು.

ಮೈಸೂರಿನ ಕೆ.ಜಿ.ಕೊಪ್ಪಲು, ಪಡುವಾರಹಳ್ಳಿ, ಕುಂಬಾರ ಕೊಪ್ಪಲು ಸೇರಿದಂತೆ ಇತರೆಡೆ ಒಕ್ಕಲಿಗ ಸಮುದಾಯದವರು ಹೆಚ್ಚಾಗಿದ್ದಾರೆ. ಜಮೀನ್ದಾರರಾಗಿ ಮೈಸೂರಿನ 40 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಅಪಾರ ಭೂ ಸಂಪತ್ತು ಹೊಂದಿದ್ದರು. ಆದರೆ ಈಗ ಕೆಲವರಿಗೆ ಒಂದು ಗುಂಟೆ ಜಮೀನು ಇಲ್ಲದ ಪರಿಸ್ಥಿತಿ ಎದುರಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇನ್ನು ಗ್ರಾಮೀಣ ಪ್ರದೇಶದಲ್ಲಿರುವ ಒಕ್ಕಲಿಗ ಸಮುದಾಯ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ನಷ್ಟ ಅನುಭವಿಸುತ್ತಿದ್ದಾರೆ. ಕೃಷಿಯ ಜೊತೆಗೆ ಉದ್ಯಮಿಗಳಾಗಿ ಬೆಳೆಯದಿದ್ದರೆ ಪ್ರಾಯಶಃ ಇವತ್ತು ಈ ಪರಿಸ್ಥಿತಿ ಇರುತ್ತಿರಲಿಲ್ಲ ಎಂದು ಹೇಳಿದರು.

ಬಹಳಷ್ಟು ಜನರು ನೌಕರಿಗೆ ಮಾತ್ರ ಸೀಮಿತರಾಗುತ್ತಿದ್ದಾರೆ. ಅದರ ಬದಲು ಸಾಲಕ್ಕೆ ಹೆದರದೆ ಸವಾಲನ್ನು ದಿಟ್ಟವಾಗಿ ಎದುರಿಸಿ ಉದ್ಯಮಿಗಳಾಗಿ ಬೆಳೆಯಬೇಕು. ಈ ಮೂಲಕ ಉದ್ಯಮಿಯಾಗಿ ನೂರಾರು ಜನರಿಗೆ ಉದ್ಯೋಗ ನೀಡಬೇಕು ಎಂದು ಸಲಹೆ ನೀಡಿದರು. ರಾಜಸ್ಥಾನ, ಗುಜರಾತ್ ಸೇರಿದಂತೆ ಇತರೆ ರಾಜ್ಯದಿಂದ ಬಂದವರು ಮೈಸೂರಿನಲ್ಲಿ ನೆಲೆಯೂರಿ ಆರ್ಥಿಕ ಸ್ವಾವಲಂಬಿಗಳಾಗಿದ್ದಾರೆ. ಮೈಸೂರಿನಲ್ಲಿ ಬೆಳವಣಿಗೆ ಹೊಂದುತ್ತಿರುವ ಪ್ರದೇಶದಲ್ಲಿ ಹತ್ತಾರು ಮನೆಗಳು ನಿರ್ಮಾಣವಾದರೆ ಅಲ್ಲಿ ಅಂಗಡಿ ತೆರೆದು ವ್ಯಾಪಾರವನ್ನು ಗಟ್ಟಿಗೊಳಿಸುತ್ತಿದ್ದಾರೆ. ಆದರೆ ಇಲ್ಲೇ ಹುಟ್ಟಿ, ಬೆಳೆದ ಮೈಸೂರಿಗರಿಗೆ ಇದು ಏಕೆ ಸಾಧ್ಯವಾಗುತ್ತಿಲ್ಲ ಎಂದು ಜಿ.ಟಿ.ದೇವೇಗೌಡರು ಪ್ರಶ್ನಿಸಿದರು. ಆದಿಚುಂಚನಗಿರಿ ಮಠದ ಮೈಸೂರು ಶಾಖೆಯ ಮುಖ್ಯಸ್ಥರಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶಾಸಕ ಕೆ.ಹರೀಶ್‌ಗೌಡ, ಫಸ್ಟ್ ಸರ್ಕಲ್ ಮುಖ್ಯಸ್ಥ ಜಯರಾಮ್ ರಾಯಪುರ, ಕಾಸಿಯಾ ಅಧ್ಯಕ್ಷ ರಾಜಗೋಪಾಲ್, ಐಪಿಎಸ್ ಅಧಿಕಾರಿ ಪ್ರಕಾಶ್‌ಗೌಡ, ಕೆಪಿಸಿಸಿ ರಾಜ್ಯ ವಕ್ತಾರ ಎಂ.ಲಕ್ಷ್ಮಣ, ಮಾಜಿ ಮೇಯರ್ ಮೋದಾಮಣಿ, ಮಾಜಿ ಮುಡಾ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಾಜ್ಯದ ಸ್ಥಳೀಯ ಸಂಸ್ಥೆ ಚುನಾವಣೆ ಹಿನ್ನೆಲೆ

ಮೈಸೂರು, ಚಾಮರಾಜನಗರ, ಹಾಸನಕ್ಕೆ ಡಾ.ಅಶ್ವಥ್‌ನಾರಾಯಣ್ ಬಿಜೆಪಿ ಉಸ್ತುವಾರಿ




ಮೈಸೂರು, ಆ.14(ಬಿಎಲ್‌ಯು)– ಮೈಸೂರು ಸೇರಿದಂತೆ ರಾಜ್ಯದ ಸ್ಥಳಿಯ ಸಂಸ್ಥೆಗಳಿಗೆ ಚುನಾವಣೆ ಘೋಷಣೆ ಆಗುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಲವು ಜಿಲ್ಲೆಗಳಿಗೆ ಉಸ್ತುವಾರಿಗಳನ್ನು ನೇಮಕ ಮಾಡಿದ್ದಾರೆ. ಮೈಸೂರು, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗೆ ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ್ ಅವರನ್ನು ಉಸ್ತುವಾರಿಯಾಗಿ ನಿಯೋಜನೆ ಮಾಡಲಾಗಿದೆ. ಕೊಡಗು, ದಕ್ಷಿಣ ಕನ್ನಡ ಹಾಗೂ ಉಡುಪಿಗೆ ಮಾಜಿ ಶಾಸಕ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರನ್ನು, ಹಾವೇರಿ, ಹುಬ್ಬಳ್ಳಿ–ಧಾರವಾಡ, ಗದಗ, ರಾಮನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಅವರನ್ನು ನೇಮಕ ಮಾಡಿದ್ದಾರೆ.

ಬೀದರ್, ಕಲ್ಬುರ್ಗಿ, ಯಾದಗಿರಿಗೆ ರಾಜ್ಯ ಬಿಜೆಪಿ ಕಾರ್ಯದರ್ಶಿ ಡಾ.ಶೈಲೇಂದ್ರ ಬೆಲ್ದಾಳೆ ಅವರನ್ನು, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ದಾವಣಗೆರೆ, ಚಿತ್ರದುರ್ಗ, ತುಮಕೂರು ಹಾಗೂ ಮಧುಗಿರಿಗೆ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಅವರನ್ನು ನಿಯುಕ್ತಿಗೊಳಿಸಲಾಗಿದೆ.

ಬೆಳಗಾವಿ, ಚಿಕ್ಕೋಡಿ, ಬಾಗಲಕೋಟೆ ಹಾಗೂ ಬಿಜಾಪುರಕ್ಕೆ ಶಾಸಕ ಮಹೇಶ್ ಟೆಂಗಿನಕಾಯಿ ಅವರನ್ನು ಮತ್ತು ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಶಾಸಕ ಚನ್ನಬಸಪ್ಪ ಅವರನ್ನು ನಿಯೋಜಿಸಲಾಗಿದೆ ಎಂದು ವಿಜಯೇಂದ್ರ ತಿಳಿಸಿದ್ದಾರೆ.

ಪೋಡಿ, ದುರಸ್ತಿ ಆನ್‌ಲೈನ್ ನಿರ್ವಹಣೆಗೆ ಹೊಸ ತಂತ್ರಾಂಶ

ಮೈಸೂರು, ಆ.14(ಬಿಎಲ್‌ಯು)– ರೈತರಿಗೆ ಮಂಜೂರಾದ ಜಮೀನುಗಳ ಪೋಡಿ, ದುರಸ್ತಿ ಕಾರ್ಯವನ್ನು ಆನ್‌ಲೈನ್ ಮೂಲಕ ನಿರ್ವಹಿಸಲು ಹೊಸ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದ್ದಾರೆ. ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ನೀಡಿರುವ ಅವರು, ಮಂಜೂರಾದ ಜಮೀನುಗಳ ಪೋಡಿ, ದುರಸ್ತಿಯಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಹೊಸ ತಂತ್ರಾಂಶ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದ್ದಾರೆ.



ಆದರೆ ತಂತ್ರಾಂಶವನ್ನು ಯಾವಾಗ ಲೋಕಾರ್ಪಣೆ ಮಾಡಲಾಗುತ್ತದೆ ಎಂಬ ಬಗ್ಗೆ ಮಾಹಿತಿ ನೀಡಿಲ್ಲ. ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಸರ್ಕಾರ ಈಗಾಗಲೇ ಪಹಣಿ ತಿದ್ದುಪಡಿ ಮತ್ತು ಪೌತಿ ಖಾತೆ ಇತ್ಯರ್ಥಕ್ಕೆ ಕಂದಾಯ ಅದಾಲತ್ ನಡೆಸುತ್ತಿದೆ ಎಂದು ಕೃಷ್ಣಭೈರೇಗೌಡ ತಿಳಿಸಿದ್ದಾರೆ.

ದಸರಾದಲ್ಲಿ ಮೈಸೂರು ಲೋಗೋ ಬಳಸಲು ಆದೇಶ

ಮೈಸೂರು, ಆ.14(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉಪ ಸಮಿತಿಗಳ ಎಲ್ಲಾ ಕಾರ್ಯಕ್ರಮಗಳಲ್ಲಿ ಮೈಸೂರು ಲೋಗೋವನ್ನು ಕಡ್ಡಾಯವಾಗಿ ಬಳಸುವಂತೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಆದೇಶ ನೀಡಿದ್ದಾರೆ. ಮೈಸೂರಿನ ಹಿರಿಮೆಯನ್ನು ಮತ್ತಷ್ಟು ಇಮ್ಮಡಿಗೊಳಿಸಲು ಕಳೆದ ವರ್ಷ ಕೂಡ ಮೈಸೂರು ಲೋಗೋ ಬಳಸುವಂತೆ ಸೂಚಿಸಲಾಗಿತ್ತು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮೈಸೂರು ಲೋಗೋವನ್ನು ಅತ್ಯುತ್ತಮವಾಗಿ ಬಳಸಿತ್ತು. ಅದರಂತೆ ಈ ಸಾಲಿನ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಎಲ್ಲಾ ಉಪ ಸಮಿತಿಗಳು ತಮ್ಮ ವ್ಯವಹಾರದಲ್ಲಿ, ಬ್ಯಾನರ್‌ಗಳಲ್ಲಿ, ಬ್ಯಾಕ್ ಡ್ರಾಪ್‌ಗಳಲ್ಲಿ, ಕರಪತ್ರಗಳಲ್ಲಿ ಹಾಗೂ ಆಹ್ವಾನ ಪತ್ರಗಳಲ್ಲಿ ಮೈಸೂರು ಲೋಗೋವನ್ನು ಕಡ್ಡಾಯವಾಗಿ ಬಳಸುವಂತೆ ಲಕ್ಷ್ಮಿಕಾಂತರೆಡ್ಡಿ ತಾಕೀತು ಮಾಡಿದ್ದಾರೆ.

MYSURU DASARA
Celebrations Since 1610 AD
Oct. 3 - Oct. 12, 2024

ಚಾಮುಂಡಿಬೆಟ್ಟ ದೇವಸ್ಥಾನದ ಆಸ್ತಿ ಮೈಸೂರು ಮಹಾರಾಜರಿಗೆ ಸೇರಿದೆ

ಶಾಸಕ ಜಿ.ಟಿ.ದೇವೇಗೌಡರು ಸಹಮತ



ಮೈಸೂರು, ಆ.14(ಬಿಎಲ್‌ಯು)– ಚಾಮುಂಡಿಬೆಟ್ಟದ ಆಸ್ತಿ ಮೈಸೂರು ಮಹಾರಾಜರಿಗೆ ಸೇರಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ.

ನಗರದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಚಾಮುಂಡಿಬೆಟ್ಟದ ದೇವಸ್ಥಾನದ ಆಡಳಿತವನ್ನು ಸರ್ಕಾರ ನಡೆಸುತ್ತಿದೆ. ಆದರೆ ಚಾಮುಂಡಿಬೆಟ್ಟದ ಆಸ್ತಿ ಮೈಸೂರು ಮಹಾರಾಜರಿಗೆ ಸೇರಿದೆ ಎಂದು ಹೇಳಿದರು. ಸರ್ಕಾರ ಚಾಮುಂಡಿಬೆಟ್ಟದ ಪ್ರಾಧಿಕಾರ ರಚನೆ ಮಾಡಿದೆ. ಆದರೆ ಪ್ರಾಧಿಕಾರದ ಕಾರ್ಯಕ್ರಮಗಳು ಇನ್ನು ಆರಂಭವಾಗಿಲ್ಲ ಎಂದು ತಿಳಿಸಿದರು.

ಚಾಮುಂಡಿಬೆಟ್ಟದ ದೇವಸ್ಥಾನ ನಿರ್ವಹಣೆಯನ್ನು ಸರ್ಕಾರ ಮಾಡುತ್ತಿದ್ದರೂ, ದೇವಸ್ಥಾನದ ಆಸ್ತಿ ಮಾತ್ರ ಮೈಸೂರು ಮಹಾರಾಜರಿಗೆ ಸೇರಿದೆ ಎಂದು ಪುನರುಚ್ಚರಿಸಿದ ಜಿ.ಟಿ.ದೇವೇಗೌಡರು, ಚಾಮುಂಡಿಬೆಟ್ಟದ ಕಾರ್ಯಗಳು ಈಗ ಹೇಗೆ ಶಿಸ್ತುಬದ್ಧವಾಗಿ ನಡೆಯುತ್ತಿದೆಯೊ ಹಾಗೇ ನಡೆಯಬೇಕು ಎಂದು ಅಭಿಪ್ರಾಯಪಟ್ಟರು.



ಈ ಮೂಲಕ ಚಾಮುಂಡಿಬೆಟ್ಟದ ಹಕ್ಕಿನ ಸಂಬಂಧ ಪ್ರಮೋದಾದೇವಿ ಒಡೆಯರ್ ನಡೆಸುತ್ತಿರುವ ಹೋರಾಟಕ್ಕೆ ಜಿ.ಟಿ.ದೇವೇಗೌಡರು ಪರೋಕ್ಷ ಬೆಂಬಲ ಸೂಚಿಸಿದರು. ಬಿಬಿಎಂಪಿ ಮಾದರಿಯಲ್ಲಿ ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮನವಿ ಸಲ್ಲಿಸಿದ್ದೇನೆ. ಹಾಗೆ ರಚನೆ ಮಾಡುವುದರಿಂದ ನಗರದ ಬೆಳವಣಿಗೆಗೆ ಏನೇನು ಉಪಯೋಗವಾಗಲಿದೆ ಎಂದು ಮನದಟ್ಟು ಮಾಡಿಕೊಟ್ಟಿದ್ದೇನೆ ಎಂದು ಹೇಳಿದರು. ತುಂಗಭದ್ರಾ ಜಲಾಶಯಕ್ಕೆ ಕ್ರಸ್ಟ್ ಗೇಟ್ ಅಳವಡಿಸಲು ವಿದೇಶಿ ತಜ್ಞರನ್ನು ಕರೆಸಿ ಆದಷ್ಟು ಬೇಗ ದುರಸ್ತಿ ಮಾಡಬೇಕು. ಜೊತೆಗೆ ರಾಜ್ಯದ ಎಲ್ಲಾ ಜಲಾಶಯಗಳ ಸುರಕ್ಷತೆ ಬಗ್ಗೆ ಗಮನಹರಿಸಬೇಕು ಎಂದು ತಿಳಿಸಿದರು. ಚನ್ನಪಟ್ಟಣ ಉಪ ಚುನಾವಣೆಗೆ ಇನ್ನು ಕೂಡ ಮೈತ್ರಿ ಅಭ್ಯರ್ಥಿ ಆಯ್ಕೆಯ ತೀರ್ಮಾನವಾಗಿಲ್ಲ ಎಂದು ಜಿ.ಟಿ.ದೇವೇಗೌಡರು ಈ ಸಂದರ್ಭದಲ್ಲಿ ಸ್ಪಷ್ಟನೆ ನೀಡಿದರು.

ವೈದ್ಯೆ ಮೇಲೆ ಅತ್ಯಾಚಾರ, ಕಗ್ಗೊಲೆ ಖಂಡಿಸಿ ಗಂಧದ ಗುಡಿ ಫೌಂಡೇಷನ್ ಪ್ರತಿಭಟನೆ



ನಗರದ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ವೈದ್ಯೆಯ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ಗಂಧದಗುಡಿ ಫೌಂಡೇಷನ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.14(ಜಿಎ)–ಕೋಲ್ಕತ್ತಾದ ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನಲ್ಲಿ ಮಹಿಳಾ ವೈದ್ಯೆಯ ಮೇಲೆ ನಡೆದಿರುವ ಅತ್ಯಾಚಾರ ಮತ್ತು ಕೊಲೆಯನ್ನು ಖಂಡಿಸಿ ಗಂಧದಗುಡಿ ಫೌಂಡೇಷನ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.


ನಗರದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಜಮಾವಣೆಗೊಂಡ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯೆಯನ್ನು ಕಿಡಿಗೇಡಿಗಳು ಅತ್ಯಾಚಾರವೆಸಗಿ ಕೊಲೆ ಮಾಡಿರುವುದು ಕಂಡುಬಂದಿದೆ. ಆದರೆ, ಅಪರಾಧಿಗಳ ಬಂಧನವಾಗಿಲ್ಲ. ಈ ಘಟನೆ ಇಡೀ ದೇಶವನ್ನು ಬೆಚ್ಚಿ ಬೀಳಿಸಿದೆ ಎಂದು ಕಳವಳ ವ್ಯಕ್ತಪಡಿಸಿದರು. ಘಟನೆಯಿಂದ ರಾತ್ರಿ ಕರ್ತವ್ಯ ಮತ್ತು ತುರ್ತು ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಮಹಿಳಾ ವೈದ್ಯರ ಸುರಕ್ಷತೆಗೆ ಆತಂಕ ತಂದಿದೆ. ಸುರಕ್ಷಿತ ಕೆಲಸದ ವಾತಾವರಣ ಸೃಷ್ಟಿಸುವುದು ಆಯಾ ಸರ್ಕಾರಗಳ ಜವಾಬ್ದಾರಿ. ಇದರಲ್ಲಿ ಮುಖ್ಯಮಂತ್ರಿ ಮಮತ ಬ್ಯಾನರ್ಜಿ ಸರ್ಕಾರ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಬಿಐ ಪ್ರಕರಣವನ್ನು ಕೈಗೆತ್ತಿಕೊಂಡು ತನಿಖೆ ನಡೆಸುತ್ತಿದ್ದು, ಅಪರಾಧಿಗಳನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಮಹತ್ವ ಕೊಡಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಗಂಧದಗುಡಿ ಫೌಂಡೇಷನ್‌ನ ಗೌರವಾಧ್ಯಕ್ಷ ನಾಗೇಂದ್ರ ಪ್ರಸಾದ್, ರಾಜ್ಯಾಧ್ಯಕ್ಷ ಆರ್ಯನ್ ಗಂಧದಗುಡಿ, ರಾಜ್ಯ ಉಪಾಧ್ಯಕ್ಷ ಮನೋಹರ್ ಗೌಡ, ಸಂಚಾಲಕ ರತನ್ ಚಿಕ್ಕು, ಜಿಲ್ಲಾ ಉಪಾಧ್ಯಕ್ಷ ಗೌತಮ್, ಮಹದೇವ್ ಶೆಟ್ಟಿ, ಆರ್.ಯಶೋಧ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರು ಈಗ ಗುಂಡಿಗಳ ನಗರ

ಮೈಸೂರು ನಗರಪಾಲಿಕೆ ದಿವ್ಯ ನಿರ್ಲಕ್ಷ್ಯ, ಸಾರ್ವಜನಿಕರ ಪರದಾಟ





ಮೈಸೂರು, ಆ.14(ಜಿಎ)–ಸಾಂಸ್ಕೃತಿಕ ನಗರಿ ಮೈಸೂರು ಹೆಸರಿಗಷ್ಟೇ ಸ್ವಚ್ಛನಗರಿ, ಸುಂದರ ನಗರ ಎನಿಸಿದೆ. ಏಕೆಂದರೆ ಪ್ರಮುಖ ರಸ್ತೆಗಳಲ್ಲಿ ಕಂಡ ಕಂಡಲ್ಲಿ ಜೀವಕ್ಕೆ ಕುತ್ತು ತರುವ ಗುಂಡಿಗಳು ಬಿದ್ದಿರುವುದೇ ಇದಕ್ಕೆ ಸಾಕ್ಷಿ. ನಗರಪಾಲಿಕೆ ದಿವ್ಯ ನಿರ್ಲಕ್ಷ್ಯದಿಂದ ರಸ್ತೆಗಳು ಅನಾಥವಾಗಿವೆ.

ಮೈಸೂರು ದಸರಾವನ್ನು ವೈಭವದಿಂದ ಆಚರಿಸಲು ಈಗಾಗಲೇ ಮುಖ್ಯಮಂತ್ರಿಗಳು ಉನ್ನತ ಮಟ್ಟದ ಸಭೆ ನಡೆಸಿ, ಸೂಚನೆಗಳನ್ನು ನೀಡಿದ್ದರಾದರೂ ಅವುಗಳು ಸದ್ಯಕ್ಕೆ ಕಾರ್ಯರೂಪಕ್ಕೆ ಬರುವುದು ಅನುಮಾನವಾಗಿದೆ. ಅಲ್ಲಿಯವರೆಗೂ ಮೈಸೂರಿನ ಜನರಿಗೆ ಗುಂಡಿ ಬಿದ್ದ ರಸ್ತೆಗಳೇ ಗತಿ!

ಮೈಸೂರಿಗೆ ವಾರದ ಕೊನೆ ದಿನಗಳಲ್ಲಿ ಇಲ್ಲಿನ ಪ್ರವಾಸಿ ತಾಣಗಳ ಸೌಂದರ್ಯ ಸವಿಯಲು ಮತ್ತು ದಸರಾ ವೇಳೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಲು, ಜೊತೆಗೆ ಮೈಸೂರಿನ ಅಂದವನ್ನು ಕಾಣಲು ದೇಶ–ವಿದೇಶಗಳಿಂದ ಬರುವ ಲಕ್ಷಾಂತರ ಪ್ರವಾಸಿಗರಿಗೆ ಈ ಕಿತ್ತು ಹೋದ ಮತ್ತು ಗುಂಡಿ ಬಿದ್ದ ರಸ್ತೆಗಳೇ ಸ್ವಾಗತ ಬಯಸುತ್ತವೆ. ರಾಜಮಾರ್ಗ ಸೇರಿದಂತೆ ಪ್ರಮುಖ ರಸ್ತೆಗಳನ್ನು ನೋಡಿಕೊಂಡು ಹೋಗುವ ಪ್ರವಾಸಿಗರು ಎಷ್ಟು ಅದ್ಭುತವಾದ ರಸ್ತೆಗಳು, ವಿಶಾಲ ಹಾಗೂ ಉತ್ತಮವಾಗಿವೆ ಎಂದು ಕೊಂಡಾಡುವುದು ಸಾಮಾನ್ಯ. ಆದರೆ, ನಗರ ಗ್ರಾಮಾಂತರ ಬಸ್ ನಿಲ್ದಾಣ(ಸಬರ್ಬನ್ ಬಸ್ ನಿಲ್ದಾಣ), ಸಿಟಿ ಬಸ್ ನಿಲ್ದಾಣದ ಮುಂಭಾಗದಲ್ಲಿರುವ ಭಾರಿ ಗುಂಡಿಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ.

ಮೈಸೂರಿನ ಪ್ರಮುಖ ವೃತ್ತಗಳಲ್ಲಿ ಜಯಚಾಮರಾಜೇಂದ್ರ ವೃತ್ತ(ಹಾರ್ಡಿಂಜ್ ಸರ್ಕಲ್) ಒಂದಾಗಿದ್ದೂ, ಈ ವೃತ್ತದಲ್ಲಿ ನಿತ್ಯವೂ ಲಕ್ಷಾಂತರ ವಾಹನಗಳು ಸಂಚರಿಸುತ್ತವೆ. ಚಾಮುಂಡಿಬೆಟ್ಟ, ಕಾರಂಜಿ ಕೆರೆ, ತಿ.ನರಸೀಪುರ ಸೇರಿದಂತೆ ಹಲವಾರು ಗ್ರಾಮಾಂತರ ಪ್ರದೇಶಕ್ಕೆ ತೆರಳುವ ವಾಹನಗಳು ಈ ವೃತ್ತದ ಮೂಲಕವೇ ಹಾದು ಹೋಗಬೇಕಿದೆ. ಇಂತಹ ವೃತ್ತದಲ್ಲಿ ಜೀವಕ್ಕೆ ಕುತ್ತು ತರುವ ದೊಡ್ಡ ದೊಡ್ಡ ಗುಂಡಿಗಳು ಆಗಿದ್ದು, ವಾಹನ ಸವಾರರು ತಮ್ಮ ಜೀವವನ್ನು ಕೈಯ್ಯಲ್ಲಿಡಿದು ಸಂಚರಿಸುವ ಸ್ಥಿತಿ ನಿರ್ಮಾಣವಾಗಿದೆ.

ಚಾಮರಾಜ ಜೋಡಿ ರಸ್ತೆ ಮೂಲಕ ಬಂದು ಹಾರ್ಡಿಂಜ್ ಸರ್ಕಲ್ ತಲುಪುವ ಮಾರ್ಗದಲ್ಲಿಯೇ ಗುಂಡಿಗಳು ನಿರ್ಮಾಣವಾಗಿದ್ದು, ಈ ಸ್ಥಳದಲ್ಲಿ ನಿತ್ಯವೂ ವಾಹನ ತಪಾಸಣೆ ನಡೆಸಿ, ದಂಡ ವಿಧಿಸುವ ಸಂಚಾರಿ ಪೊಲೀಸರು ಮುಂಜಾಗ್ರತ ಕ್ರಮವಾಗಿ ಬ್ಯಾರಿಕೇಡ್ ಇರಿಸಿದ್ದಾರೆ. ಅತೀ ವೇಗದಿಂದ ಬರುವ ವಾಹನ ಸವಾರರು ಈ ಗುಂಡಿಗಳನ್ನು ಕಾಣದೇ ಬಿದ್ದು ನಿತ್ಯವೂ ಗಾಯಗೊಳ್ಳುತ್ತಿರುವ ಘಟನೆಗಳು ಸಾಮಾನ್ಯವಾಗಿದೆ. ಹಾರ್ಡಿಂಜ್ ಸರ್ಕಲ್‌ನಿಂದ ಸಿಟಿ ಬಸ್ ನಿಲ್ದಾಣಕ್ಕೆ ತೆರಳುವ ಬಸ್‌ಗಳು ಈ ಗುಂಡಿಗಳಿಂದ ಹಾರ್ಡಿಂಜ್ ಸರ್ಕಲ್‌ನಲ್ಲಿ ನಿಲ್ಲಿಸದೇ ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ನಿಲ್ಲಿಸಲು ಮುಂದಾಗಿದ್ದು, ಇದರಿಂದ ಬಸ್‌ಗಳು ಸಾಲಾಗಿ ನಿಲ್ಲಲು ಆರಂಭಿಸಿವೆ. ಹಿಂದಿನಿಂದ ಬರುವ ವಾಹನಗಳು ನಿಯಂತ್ರಣ ತಪ್ಪಿ ಬಿದ್ದಿರುವ ಘಟನೆಗಳು ನಡೆಯುತ್ತಿವೆ. ನಗರ ಗ್ರಂಥಾಲಯದ ಮುಂಭಾಗದ ಸರ್ಕಾರಿ ಅತಿಥಿ ಗೃಹ ರಸ್ತೆಯಲ್ಲಿ ಇದೇ ರೀತಿ ಗುಂಡಿಗಳು ಉಂಟಾಗಿದ್ದು, ತಾಲೂಕು ಕಚೇರಿ, ಗ್ರಾಮಾಂತರ ಬಸ್ ನಿಲ್ದಾಣದಿಂದ ಬರುವ ವಾಹನ ಸವಾರರು ಬಿದ್ದು ಗಾಯಗೊಳ್ಳುತ್ತಿರುವ ಘಟನೆಗಳು ನಡೆಯುತ್ತವೆ. ನಿನ್ನೆ ರಾತ್ರಿ ಮಹಿಳೆಯೊಬ್ಬರು ಈ ಗುಂಡಿಯನ್ನು ನೋಡದೇ ದ್ವಿಚಕ್ರ ವಾಹನದಿಂದ ಬಿದ್ದು ಗಾಯಗೊಂಡಿದ್ದಾರೆ. ಗುಂಡಿಗಳ ಕುರಿತು ಪಾಲಿಕೆ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಕೇಂದ್ರೀಯ ರೈಲ್ವೆ ವರ್ಕ್‌ಶಾಪ್‌ನಲ್ಲಿ ಪಾರಂಪರಿಕ ಉಗಿಬಂಡಿಗೆ ಮರುಜೀವ

ಇಂದು ಗಂಟೆಗೆ ನಾಲ್ಕು ಬಾರಿ ಕೇಳಿ ಬರಲಿದೆ ಸ್ಟೀಮ್ ಇಂಜಿನ್ ಸದ್ದು

● 1926ರಲ್ಲಿ ಲಂಡನ್‌ನಲ್ಲಿ ತಯಾರಾದ ಇಎಸ್–507 ಮಾಡೆಲ್ ಸ್ಟೀಮ್ ಇಂಜಿನ್ ● ಸಾರ್ವಜನಿಕರಿಗೆ ಗತಕಾಲದ ವೈಭವ ನೆನಪಿಸಲಿದೆ ಉಗಿಬಂಡಿ

ಮೈಸೂರು, ಆ.14(ಎಂಟಿವೈ)– ಸ್ವಾತಂತ್ರ್ಯೋತ್ಸವದ ಅಂಗವಾಗಿ ಮೈಸೂರಿನ ಜನತೆಗೆ ಪಾರಂಪರಿಕ ಉಗಿಬಂಡಿ ಕಾರ್ಯವೈಖರಿಯ ಸೊಬಗು ಸವಿಯುವ ಅವಕಾಶ ದೊರಕಿದ್ದು, ಮೈಸೂರು–ಮಾನಂದವಾಡಿ ಮುಖ್ಯ ರಸ್ತೆಯಲ್ಲಿರುವ ನೈರುತ್ಯ ರೈಲ್ವೆಯ ಕೇಂದ್ರ ವರ್ಕ್‌ಶಾಪ್ ಮುಂದೆ ನಿಲ್ಲಿಸಿರುವ ಸ್ಟೀಮ್ ಇಂಜಿನ್ ಗಂಟೆಗೆ ನಾಲ್ಕು ಬಾರಿ ಹೊಗೆ ಸೂಸಿ, ಶಬ್ದ ಮಾಡುವ ಮೂಲಕ ಗತಕಾಲದ ವೈಭವದ ಅನುಭವ ನೀಡಲಿದೆ.

ಕೇಂದ್ರ ರೈಲ್ವೆ ವರ್ಕ್‌ಶಾಪ್ ಒಳಾಂಗಣದಲ್ಲಿದ್ದ ಪಾರಂಪರಿಕ ಉಗಿ ಬಂಡಿಯನ್ನು ವರ್ಕ್‌ಶಾಪ್ ಮುಂಭಾಗದ ಪ್ರವೇಶ ದ್ವಾರದ ಬಳಿಕ ಕಳೆದ ವರ್ಷ ತಂದು ಇಟ್ಟು, ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಒದಗಿಸಲಾಗಿತ್ತು. ಇದೀಗ ವರ್ಷದ ಬಳಿಕ ಪಾರಂಪರಿಕ ಉಗಿಬಂಡಿಯ ಕಾರ್ಯವೈಖರಿಯ ಅನುಭವ ಸಾರ್ವಜನಿಕರಿಗೆ ಮಾಡಿಕೊಡುವ ನಿಟ್ಟಿನಲ್ಲಿ ವರ್ಕ್‌ಶಾಪ್ ಅಧಿಕಾರಿಗಳು ಮತ್ತೊಂದು ಹೆಜ್ಜೆ ಮುಂದೆ ಸಾಗಿದ್ದಾರೆ. ದೇಶದ ಸ್ವಾತಂತ್ರ್ಯೋತ್ಸವ ಸವಿನೆನಪಿನಲ್ಲಿ ಸ್ಟೀಮ್ ಇಂಜಿನ್ ನಿಂತ ಸ್ಥಳದಲ್ಲೇ ಶಬ್ದದೊಂದಿಗೆ ಪರಿಸರಕ್ಕೆ ಹಾನಿಯಾಗದ ಕೃತಕ ಬಿಳಿಹೊಗೆ ಸೂಸುವ ಮೂಲಕ ಗಮನ ಸೆಳೆಯಲಿದೆ.

98 ವರ್ಷ ಹಳೆಯ ಇಂಜಿನ್: ರೈಲ್ವೆ ವರ್ಕ್‌ಶಾಪ್ ಮುಂದೆ ಇಟ್ಟು ಯಾಂತ್ರಿಕ ಶಕ್ತಿಯಿಂದ ಹೊಗೆ ಹಾಗೂ ಹಾರನ್ ಶಬ್ದ ಮಾಡುವಂತೆ ಸ್ಟೀಮ್ ಇಂಜಿನ್‌ಗೆ ವ್ಯವಸ್ಥೆ ಮಾಡಲಾಗಿದೆ. 1926ರಲ್ಲಿ ಲಂಡನ್‌ನಲ್ಲಿ ತಯಾರಾದ ಈ ಸ್ಟೀಮ್ ಇಂಜಿನ್ ಅನ್ನು ಸ್ವತಂತ್ರ್ಯ ಪೂರ್ವದ ಮೈಸೂರು ರಾಜ್ಯದ ರೈಲ್ವೆ ಇಲಾಖೆ 1926ರಲ್ಲಿ 1,65,865 ರೂ. ನೀಡಿ ಖರೀದಿಸಲಾಗಿತ್ತು. ಈ ಇಂಜಿನ್ ನಾಲ್ಕೂವರೆ ಟನ್ ಕಲ್ಲಿದ್ದಲು ಹಾಗೂ 5490 ಲೀಟರ್ ನೀರನ್ನು ಎಳೆದೊಯ್ಯುವ ಸಾಮರ್ಥ್ಯ ಹೊಂದಿದ್ದು, 1926ರಿಂದ 1983ರವರೆಗೆ ಬೆಂಗಳೂರು–ಬಂಗಾರಪೇಟೆ ನಡುವೆ ನ್ಯಾರೋಗೇಜ್‌ನಲ್ಲಿ ಪ್ರಯಾಣಿಕರ ಬೋಗಿಗಳನ್ನು ಎಳೆದೊಯ್ಯುತ್ತಿತ್ತು. ಭಾರತೀಯ ರೈಲ್ವೆಯಲ್ಲಿ 63 ವರ್ಷಗಳ ಕಾಲ ಯಶಸ್ವಿ ಸೇವೆ ಒದಗಿಸಿದ ಈ ಸ್ಟೀಮ್ ಇಂಜಿನ್ ಅನ್ನು 1983ರಲ್ಲಿ ಸೇವೆಯಿಂದ ವಿಮುಕ್ತಿಗೊಳಿಸಿ ಸಂರಕ್ಷಿಸಲಾಗಿತ್ತು. ಇದೀಗ ಭಾರತೀಯ ರೈಲ್ವೆ ಇಲಾಖೆಯ ವೈಭವಯುತ ಪರಂಪರೆ ಮಹತ್ವದ ಸಂಕೇತವಾಗಿ ರೈಲ್ವೆ ವರ್ಕ್‌ಶಾಪ್ ಮುಂದೆ ಪ್ರದರ್ಶನಕ್ಕಿಡಲಾಗಿದೆ.

ಗಮನ ಸೆಳೆಯಲಿದೆ ಈ ಉಗಿಬಂಡಿಯು ಸ್ವಾತಂತ್ರ್ಯೋತ್ಸವದ ದಿನದಿಂದ ಸಾರ್ವಜನಿಕರ ಗಮನ ಸೆಳೆಯಲಿದೆ. ಈ ಇಂಜಿನ್ ಒಳಗೆ ಯಂತ್ರವೊಂದನ್ನು ಅಳವಡಿಸಿದ್ದು, ನಾಳೆಯಿಂದ ಗಂಟೆಗೆ ನಾಲ್ಕು ಬಾರಿ ಇಂಜಿನ್ ಆನ್ ಆದಂತೆ ಹಾಗೂ ಬಿಳಿ ಹೊಗೆ ಬಿಟ್ಟು, ಹಾರನ್ ಹೊಡೆಯುವ ಹಾಗೂ ಇಂಜಿನ್ ಲೈಟ್ ಆನ್ ಆಗುವಂತೆ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಸ್ಟೀಮ್ ಇಂಜಿನ್ ಚಲಿಸುವಂತೆ ಅನುಭವವಾಗಲಿದೆ. ವರ್ಕ್‌ಶಾಪ್‌ನ ಮುಖ್ಯ ವರ್ಕ್‌ಶಾಪ್ ಮ್ಯಾನೇಜರ್ ಓಂ ಪ್ರಕಾಶ್ ಶಾ, ಸಹಾಯಕ ಮುಖ್ಯ ವ್ಯವಸ್ಥಾಪಕ ಬಿ.ಆಂಜನೇಯಲು ನೇತೃತ್ವದಲ್ಲಿ ವರ್ಕ್‌ಶಾಪ್ ಸಿಬ್ಬಂದಿ ಸ್ಟೀಮ್ ಇಂಜಿನ್ ಕಾರ್ಯನಿರ್ವಹಿಸುವಂತೆ ಮಾಡಲು ಶ್ರಮಿಸಿದ್ದಾರೆ.



ಮೈಸೂರು–ಮಾನಂದವಾಡಿ ರಸ್ತೆಯಲ್ಲಿರುವ ರೈಲ್ವೆ ಇಲಾಖೆಯ ಕೇಂದ್ರ ವರ್ಕ್‌ಶಾಪ್ ಮುಂದೆ ನಿಲ್ಲಿಸಿರುವ ಪಾರಂಪರಿಕ ಸ್ಟೀಮ್ ಇಂಜಿನ್ ಪ್ರಾಯೋಗಿಕವಾಗಿ ಹೊಗೆ ಸೂಸುವಂತೆ ಮಾಡಿರುವುದು.

ಅರ್ಜಿ ಆಹ್ವಾನ

ಮೈಸೂರು: 2020–21ನೇ ಸಾಲಿಗೆ ಪಿರಿಯಾಪಟ್ಟಣದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ಬೆಟ್ಟದಪುರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ವಿವಿಧ ವೃತ್ತಿ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿದೆ. ಪಿರಿಯಾಪಟ್ಟಣದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಸಿಓಪಿಎ, ಎಲೆಕ್ಟ್ರಿಷಿಯನ್, ಫಿಟ್ಟರ್, ಬೆಟ್ಟದಪುರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಎಲೆಕ್ಟ್ರಿಷಿಯನ್, ಫಿಟ್ಟರ್ ವೃತ್ತಿಗೆ ಸೇರಬಯಸುವವರು www.emptrg.kar.nic.in ನಲ್ಲಿ ಆ.31ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂ.08223–297565 ಸಂಪರ್ಕಿಸಿ.

ನಿಧನ

ಮಹದೇವಸ್ವಾಮಿ



ಸುತ್ತೂರು,ಆ.14–ನಂಜನಗೂಡು ತಾಲೂಕು ಸುತ್ತೂರು ಗ್ರಾಮದ ಪಶು ಆಸ್ಪತ್ರೆ ನಿವೃತ್ತ ನೌಕರ ಮಹದೇವಸ್ವಾಮಿ (62) ಬುಧವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸುತ್ತೂರು ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂಸದ ಯದುವೀರ್ ಒಡೆಯರ್‌ಗೆ ಶುಭಾಶಯ...



ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್ ಅವರ ನೂತನ ಕಚೇರಿ ಉದ್ಘಾಟನೆ ಹಿನ್ನೆಲೆ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ ಶುಭ ಕೋರಿದರು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ, ರಾಮ್‌ಪ್ರಸಾದ್, ಬಾಬು ಇತರರಿದ್ದರು.

ಪುರಾತತ್ವ ಶಾಸ್ತ್ರಜ್ಞ ಪ್ರೊ.ಎ.ವಿ.ನರಸಿಂಹಮೂರ್ತಿ ಅವರಿಗೆ ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿ ಪ್ರದಾನ

ಮೈಸೂರು, ಆ.14(ಜಿಎ)–ಮಣಿಪಾಲ್ ಉನ್ನತ ಶಿಕ್ಷಣ ಅಕಡೆಮಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಮೊದಲಾದವುಗಳ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪುರಾತತ್ವ ಶಾಸ್ತ್ರಜ್ಞ ಪ್ರೊ.ಎ.ವಿ. ನರಸಿಂಹಮೂರ್ತಿ ಅವರಿಗೆ ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಹಿರಿಯ ಸಾಹಿತಿ ಹಾಗೂ ವಿದ್ವಾಂಸ ಬೆಳಗೋಡು ರಮೇಶ್ ಭಟ್ ಮಾತನಾಡಿ, ಪ್ರೊ.ನರಸಿಂಹಮೂರ್ತಿ ಅವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಾಣ್ಯ ಶಾಸ್ತ್ರಜ್ಞರೆಂದೇ ಹೆಸರಾಗಿದ್ದಾರೆ. ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಮೀಮಾಂಸೆ ಬೋಧಿಸುವ ಮೂಲದ ಮಹಾರಾಜರಿಂದಲೂ ಗೌರವಿಸಲ್ಪಟ್ಟಿದ್ದಾರೆ. 20ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪಿಎಚ್.ಡಿ ಪದವಿಗೆ ಮಾರ್ಗದರ್ಶನ ಮಾಡಿದವರಾಗಿದ್ದಾರೆ. ಇವರಿಗೆ ಪ್ರಶಸ್ತಿ ಪ್ರದಾನ ಮಾಡುವುದು ಪುರಸ್ಕಾರಕ್ಕೇ ಪುರಸ್ಕಾರ ಸಂದಂತಾಗಿದೆ ಎಂದರು. ಕಾರ್ಯಕ್ರಮದಲ್ಲಿ ಡಾ.ಬಿ.ಜಗದೀಶ್ ಶೆಟ್ಟಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ.ಪಾದೇಕಲ್ಲು ವಿಷ್ಣು ಭಟ್ಟ ಮತ್ತಿತರರು ಉಪಸ್ಥಿತರಿದ್ದರು.



ಪುರಾತತ್ವ ಶಾಸ್ತ್ರಜ್ಞ ಪ್ರೊ.ಎ.ವಿ.ನರಸಿಂಹಮೂರ್ತಿ ದಂಪತಿಗೆ ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೇಜ್ರಿವಾಲರಂತೆ ಸಿಎಂ ಸಿದ್ದು ಜೈಲಿನಲ್ಲಿ ಕುಳಿತು ಆಡಳಿತ ಹೇಳಿಕೆ

ಇದು ಶಾಸಕ ಶ್ರೀವತ್ಸರ ಹೀನ ಸಂಸ್ಕೃತಿ: ಎಂಕೆಎಸ್ ಟೀಕೆ

ಮೈಸೂರು,ಆ.14(ಜಿಎ)–ಸಿದ್ದರಾಮಯ್ಯ ಅವರು ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್ ತರ ಜೈಲಿನಲ್ಲಿ ಕೂತು ಆಡಳಿತ ನಡೆಸುತ್ತಾರೆ ಎಂಬ ಹೇಳಿಕೆ ನೀಡುವ ಮೂಲಕ ಶಾಸಕ ಶ್ರೀವತ್ಸ ತಮ್ಮ ಹೀನ ಸಂಸ್ಕೃತಿ ತೋರಿಸಿದ್ದಾರೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ವಾಗ್ದಾಳಿ ನಡೆಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀವತ್ಸ ಅವರ ಹೇಳಿಕೆ ಅಕ್ಷಮ್ಯ, ಬಾಲಿಶವಾದದ್ದು. ಇದು ಇವರ ಕೊಳಕು ಮನಸ್ಥಿತಿ ತೋರಿಸುತ್ತದೆ ಈ ಕೂಡಲೇ ಸಿಎಂ ಸಿದ್ದರಾಮಯ್ಯ ಅವರನ್ನು ಶ್ರೀವತ್ಸ ಕ್ಷಮೆ ಕೇಳಬೇಕು. ಅವರ ಬಗ್ಗೆ ಮಾತಾಡುವ ನೈತಿಕತೆ ಇವರಿಗಿಲ್ಲ ಎಂದು ಕಿಡಿಕಾರಿದರು.

ಸಿಎಂ ಸಿದ್ದರಾಮಯ್ಯ ಒಬ್ಬ ಪ್ರಾಮಾಣಿಕ ಮುಖ್ಯಮಂತ್ರಿ. ಅವರಿಗೆ ಇದುವರೆಗೂ ಮೈಸೂರಿನಲ್ಲಿ ಒಂದು ಸ್ವಂತ ಮನೆ ಇಲ್ಲ. ಬಿಜೆಪಿಯಲ್ಲಿರುವ ಶಾಸಕ, ಸಂಸದರ ಮೇಲೆ ತನಿಖೆ ಮಾಡಿದ್ರೆ ನೂರಕ್ಕೆ 95ರಷ್ಟು ಭ್ರಷ್ಟರೇ ಇದ್ದಾರೆ. ಇವರ ಮಾತನ್ನು ಈ ಕೂಡಲೇ ವಾಪಸ್ ಪಡೆಯಬೇಕು. ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು. ಇವರು ಮಾಡುವ ಕೆಲಸವನ್ನು ಬಿಟ್ಟು ಬೇಜವಾಬ್ದಾರಿ ಹೇಳಿಕೆ ನೀಡಿರುವುದು ಖಂಡನೀಯ ಎಂದರು.



ಎಂ.ಕೆ.ಸೋಮಶೇಖರ್

ವೆಂಕಟೇಶ್ ಮಾತನಾಡಿ, ಅಚಾನಕ್ಕಾಗಿ ಗೆದ್ದು ಶಾಸಕರಾಗಿರುವ ಟಿ.ಎಸ್. ಶ್ರೀವತ್ಸ ಅವರು, ಕ್ಷೇತ್ರದ ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ. ಬದಲಿಗೆ ರಾಜಕಾರಣ ಮಾಡಿಕೊಂಡೇ ದಿನದೂಡುತ್ತಿದ್ದಾರೆ ಎಂದು ಕಿಡಿಕಾರಿದರು.

ಮುಡಾ ಹಗರಣವನ್ನು ಮುಂದಿಟ್ಟು ಸುಖಾಸುಮ್ಮನೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ. ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಮಾಡದೆ ಬರಿ ಹಿಂದುತ್ವ ಅಂತ ಕೇವಲ ಪ್ರತಿಭಟನೆಗಳನ್ನು ಮಾಡಿಕೊಂಡು ಸುಮ್ಮನಿದ್ದಾರೆ. ಶಾಸಕರಾಗಿರುವ ಶ್ರೀವತ್ಸ ಅವರು ಒಂದು ವಿಧಾನಸೌಧಕ್ಕೆ ಹೋಗೋದು ಮತ್ತೊಂದು ಸ್ಥಳೀಯ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರದ ಅನ್ವಯ ವೇದಿಕೆಗಳಲ್ಲಿ ಕುಳಿತುಕೊಳ್ಳುವುದನ್ನು ಮಾತ್ರ ಚೆನ್ನಾಗಿ ಮಾಡುತ್ತಾರೆ, ಹೀಗಾಗಿ ಸಿದ್ದರಾಮಯ್ಯ ಅವರ ಬಗ್ಗೆ ಮಾತನಾಡುವ ನೈತಿಕತೆ ಇವರಿಗಿಲ್ಲ ಎಂದು ಟೀಕಿಸಿದರು.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

16.08.2024 ಶುಕ್ರವಾರ, ಮಳೆ ನಕ್ಷತ್ರ: ಆಶ್ಲೇಷ 03.08.2024ರಿಂದ 16.08.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** 21ನೇ ಚಾತುರ್ಮಾಸ್ಯ ವ್ರತ, ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರಿಂದ ದತ್ತಯಾಗ, ವರಮಹಾಲಕ್ಷ್ಮಿ ವ್ರತ, ಸ್ಥಳ: ಆಶ್ರಮದ ಆವರಣ, ನಂಜನಗೂಡು ರಸ್ತೆ.

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯರ ಮೂಲ ಸಂಸ್ಥಾನ, ಶ್ರೀ ರಾಜೇಂದ್ರ ತೀರ್ಥರ ಪೂರ್ವಾದಿ ಮಠ, ಶ್ರೀ ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ):** ಶ್ರೀ ವಿದ್ಯಾ ಕರ್ನಾಟಕ ಸಿಂಹಾಸನಾಧೀಶ್ವರರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರ 8ನೇ ಚಾತುರ್ಮಾಸ್ಯ, ಸ್ಥಳ: ಶ್ರೀ ವ್ಯಾಸರಾಜ ಮಠ, ಸೋಸಲೆ ಕ್ಷೇತ್ರ, ಸಂಜೆ 4.30 ಗಂಟೆಯಿಂದ.

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವಪರ ಸಂಘಟನೆಗಳ ಸಹಭಾಗಿತ್ವ:** ಬಸವ ಧರ್ಮ ಜಾಗೃತಿ, ಅಭಿಯಾನ, ಇಷ್ಟಲಿಂಗ ಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ, ಶ್ರೀ ಬಸವಯೋಗಿ ಪ್ರಭುಸ್ವಾಮಿಗಳಿಂದ ಬಸವಣ್ಣನವರ ವಚನಗಳಲ್ಲಿ ಭಕ್ತಿಮಾರ್ಗ ಕುರಿತು ಉಪನ್ಯಾಸ, ಸ್ಥಳ: ಮಾಣಿಕ್ಯಪುರ, ಇಲವಾಲ ಹೋಬಳಿ, ಮೈಸೂರು ತಾ., ಸಂಜೆ 5ಕ್ಕೆ.

■ **ಡಾ.ಚಂದ್ರಶೇಖರ್ ಫೌಂಡೇಷನ್, ಕಾವೇರಿ ಆಯುರ್ವೇದ ಆಸ್ಪತ್ರೆ:** ಆಮವಾತ (ರುಮಟೈಡ್ ಆರ್ಥೈಟೀಸ್) ಕುರಿತು ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ ಬೆಳಗ್ಗೆ 9ರಿಂದ.

■ **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಕೆ.ಆರ್.ಮೊಹಲ್ಲಾ, ಸಂಜೆ 7ಕ್ಕೆ.

■ **ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಜನಪದ ಕಲಿಕಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಏಕತಾರಿ ಸಾಂಸ್ಕೃತಿಕ ಸಂಘಟನೆ:** ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಜನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರ, ಸ್ಥಳ: ಕಿರುರಂಗಮಂದಿರ ಆವರಣ, ಕಲಾಮಂದಿರ, ಸಂಜೆ 4 ರಿಂದ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ:** ಶ್ರಾವಣಮಾಸ ಪೂಜಾನುಸ್ಥಾನ ಮತ್ತು ಪ್ರವಚನ, ಮಹಾರಾಣಿ ಕಲಾ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ.ವಸಂತಕುಮಾರ್ ಅವರಿಂದ 'ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ' ಕುರಿತು ಪ್ರವಚನ, ವಿದುಷಿ ವಸಂತ ವೆಂಕಟೇಶ್ ಅವರಿಂದ ವಾಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ರಿಂದ.

■ **ಶ್ರೀ ಲಕ್ಷ್ಮೀ ತಾಯಿ ದೇವಾಲಯ ಸೇವಾ ಸಮಿತಿ:** ಬೆಳಗ್ಗೆ 8ಕ್ಕೆ ಶ್ರೀ ವರಮಹಾಲಕ್ಷ್ಮೀ ಅಮ್ಮನವರ ಪೂಜಾ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ಅನ್ನದಾಸೋಹ, ಸ್ಥಳ: ಶ್ರೀ ಲಕ್ಷ್ಮೀ ತಾಯಿ ದೇವಾಲಯ ಸೇವಾ ಸಮಿತಿ, ಅಶೋಕಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು' ಬಾನುಲಿ ಸರಣಿ, ರಚನೆ : ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಶರಣಮ್ಮ , ಮುಖ್ಯಸ್ಥರು, ಶಿಕ್ಷಣ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಪ್ರಾಯೋಜಕರು: ಮುಕ್ತ ವಿವಿ, ಮೈಸೂರು. ಪ್ರಸ್ತುತಿ: ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ನೈವಿಲೆ ಸಂತಾನಗೋಪಾಲನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸೈಕಲ್ ಸವಾರಿ ಮಾತಿನ ಲಹರಿ' ಪ್ರಸ್ತುತಿ: ಜಾಂಪಣ್ಣ ಆಶೀಹಾಳ್ **ಮಧ್ಯಾಹ್ನ:** 12.30 ದೇವರನಾಮ–ಶರ್ವಾಣಿ. ಎಸ್, 12.45 ಕಾದಂಬರಿ ವಿಹಾರ – ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್. ಎಸ್, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕರ್ನಾಟಕ ಪೋಲಿಸ್ ಬ್ಯಾಂಡ್–ವಾದ್ಯವೃಂದ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ– 'ಲಲಿತಕಲೆಗಳ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಮೈಸೂರು ವಿವಿ ಲಲಿತಕಲಾ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಅನಿತಾ ಬ್ರಾಗ್ಸ್ ಜೊತೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 6.50 ಕೃಷಿರಂಗ: ವ್ಯವಸಾಯದ ತಮ್ಮ ಅನುಭವ ಹಂಚಿಕೊಳ್ಳುತ್ತಾರೆ ಕೆ.ಆರ್.ಪೇಟೆ ತಾಲೂಕು ಕರೋಟಿ ಗ್ರಾಮದ ಮುಕುಂದೇಗೌಡ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ರಸಮಂಜರಿ : ರೂಪಕ 'ವೇದ ವೈಶಾಲ್ಯ', ರಚನೆ–ವಿದ್ವಾನ್ ನಾರಾಯಣ. ಎನ್. ದೇಸಾಯಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಉಮಯಾಳಪುರಂ. ಕೆ.ಶಿವರಾಮನ್–ಲಯವಿನ್ಯಾಸ, 10.00 ಹಳ್ಳಿ ಹಾಡು, 10.30 ಸವಿನೆನಪು

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಶ್ರೀ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** 21ನೇ ಚಾತುರ್ಮಾಸ್ಯ ವ್ರತ, ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರಿಂದ ದತ್ತಯಾಗ, ಸ್ವಾತಂತ್ರ್ಯ ದಿನಾಚರಣೆ, ಧ್ವಜ ವಂದನೆ, ಬಾಲಕ ಬಾಲಕಿಯರಿಗೆ ವಸ್ತದಾನ, ಸ್ಥಳ: ಆಶ್ರಮದ ಆವರಣ, ನಂಜನಗೂಡು ರಸ್ತೆ.

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವಪರ ಸಂಘಟನೆಗಳ ಸಹಭಾಗಿತ್ವ:** ಬಸವ ಧರ್ಮ ಜಾಗೃತಿ, ಅಭಿಯಾನ, ಇಷ್ಟಲಿಂಗ ಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ, ವಿಶ್ರಾಂತ ನ್ಯಾಯಮೂರ್ತಿ ಅರಳಿ ನಾಗರಾಜು ಅವರಿಂದ ಭವ್ಯ ಭಾರತಕ್ಕೆ ಸ್ವಾತಂತ್ರ್ಯ 78 ವರ್ಷ ಬಸವ ಧರ್ಮಕ್ಕೆ ಸಂವಿಧಾನಬದ್ಧ ಮಾನ್ಯತೆ ಎಂದು? ಕುರಿತು ಉಪನ್ಯಾಸ, ಸ್ಥಳ: ಸೋಮಶೇಖರ್‌ರವರ ಅನುರಾಗ ಮಕ್ಕಳ ಮನೆ, ದೇವಿರಮ್ಮನಹಳ್ಳಿ, ನಂಜನಗೂಡು ತಾ., ಬೆಳಗ್ಗೆ 9 ರಿಂದ.

■ **ಡಾ.ಚಂದ್ರಶೇಖರ್ ಫೌಂಡೇಷನ್, ಕಾವೇರಿ ಆಯುರ್ವೇದ ಆಸ್ಪತ್ರೆ:** ಆಮವಾತ (ರುಮಟೈಡ್ ಆರ್ಥೈಟೀಸ್) ಕುರಿತು ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ಬೆಳಗ್ಗೆ 9 ರಿಂದ.


■ **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಬೆಳಗ್ಗೆ 10 ರಿಂದ.

■ **ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ :** ಪ್ರತಿಭಾ ಪುರಸ್ಕಾರ ಸಮಾರಂಭ, ಸಾನ್ನಿಧ್ಯ : ಶ್ರೀ ಗೌರಿಶಂಕರ ಸ್ವಾಮೀಜಿ, ಸನ್ಮಾನ ಮಾಡುವವರು: ಎಂಎಲ್‌ಸಿ ಹೆಚ್. ವಿಶ್ವನಾಥ್, ಸ್ಥಳ: ಬ್ಯಾಂಕಿನ ಆವರಣ, ಬೆಳಗ್ಗೆ 10.30ಕ್ಕೆ

■ **ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನ :** ದಿವಂಗತ ಪಿ.ಆರ್. ತಿಪ್ಪೇಸ್ವಾಮಿ ಅವರ ಜನ್ಮ ದಿನೋತ್ಸವ ಆಚರಣೆ, ಪುಷ್ಪಾರ್ಚನೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಬಸವರಾಜ ಮುಸಾವಳಗಿ, ಉಪಸ್ಥಿತರು: ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ.ಮಾನಸ, ಪ್ರತಿಷ್ಠಾನ ಕೋಶಾಧ್ಯಕ್ಷ ಪರಮೇಶ್ವರಯ್ಯ, ಕಾರ್ಯದರ್ಶಿ ಬಾಬುರಾವ್, ಅಧ್ಯಕ್ಷತೆ: ಡಾ.ರಾಜಶೇಖರ ಕದಂಬ, ಸ್ಥಳ: ಶ್ರೀಕಲಾ ನಿಕೇತನ, ವಿಜಯನಗರ 2ನೇ ಹಂತ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಜನಪದ ಕಲಿಕಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಏಕತಾರಿ ಸಾಂಸ್ಕೃತಿಕ ಸಂಘಟನೆ:** ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಜನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರ, ಸ್ಥಳ: ಕಿರು ರಂಗ ಮಂದಿರ ಆವರಣ, ಕಲಾಮಂದಿರ, ಸಂಜೆ 4 ರಿಂದ.

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯರ ಮೂಲ ಸಂಸ್ಥಾನ, ಶ್ರೀ ರಾಜೇಂದ್ರ ತೀರ್ಥರ ಪೂರ್ವಾದಿ ಮಠ, ಶ್ರೀ ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ):** ಶ್ರೀ ವಿದ್ಯಾ ಕರ್ನಾಟಕ ಸಿಂಹಾಸನಾಧೀಶ್ವರರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರ 8ನೇ ಚಾತುರ್ಮಾಸ್ಯ, ಸ್ಥಳ: ಶ್ರೀ ವ್ಯಾಸರಾಜ ಮಠ, ಸೋಸಲೆ ಕ್ಷೇತ್ರ, ಸಂಜೆ 4.30 ಗಂಟೆಯಿಂದ.



ಇಂದಿನ ಪಂಚಾಂಗ

15.08.2024 ಗುರುವಾರ, ಮಳೆ ನಕ್ಷತ್ರ: ಆಶ್ಲೇಷ 03.08.2024ರಿಂದ 16.08.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ನೃತ್ಯಗಿರಿ:** ನೃತ್ಯ ಸಂಜೆ, ವಿದುಷಿ ಸ್ಫೂರ್ತಿ ಭಟ್ ಮತ್ತು ರಂಜಿತಾರಾವ್ (ಡಾ.ಕೃಪಾ ಫಡ್ಕೆ ಶಿಷ್ಯಂದಿರು) ಅವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ನೃತ್ಯಗಿರಿ ಸಭಾಂಗಣ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ರಿಂದ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಮಹಾರಾಣಿ ಕಲಾ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ. ವಸಂತಕುಮಾರ್ ಅವರಿಂದ 'ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ' ಕುರಿತು ಪ್ರವಚನ, ವಿದುಷಿ ವಸಂತ ವೆಂಕಟೇಶ್ ಅವರಿಂದ ವಾಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಕೆ.ಆರ್.ಮೊಹಲ್ಲಾ, ಸಂಜೆ 7ಕ್ಕೆ.

78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು:** ಸ್ವಾತಂತ್ರ್ಯ ದಿನಾಚರಣೆ, ಸಾನ್ನಿಧ್ಯ: ಶ್ರೀನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಧ್ವಜಾರೋಹಣ: ಗಾಂಧಿ ಪರ ಚಿಂತಕಿ ಪ್ರೊ.ಬಿ.ಪಿ.ಇಂದಿರಾ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ, ಸ್ಥಳ: ಕಾಲೇಜು ಒಳಾಂಗಣ, ಬೆಳಗ್ಗೆ 8ಕ್ಕೆ.

■ **ಸಂಧ್ಯಾ ಸುರಕ್ಷಾ ಟ್ರಸ್ಟ್, ಶಾಕಂಬರಿ ಧಾರ್ಮಿಕ ಶ್ರದ್ಧಾ ಕೇಂದ್ರ:** ಸ್ವಾತಂತ್ರ್ಯ ದಿನಾಚರಣೆ, ಸರ್ದಾರ್ ವಲ್ಲಭಭಾಯಿ ಪಟೇಲ್ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ಪ್ರದಾನ, ಪ್ರಶಸ್ತಿಗೆ ಭಾಜನರು: ಮಾಜಿ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ ಉಪಸ್ಥಿತರು: ಶಾಸಕ ಟಿ.ಎಸ್.ಶ್ರೀವತ್ಸ ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಎಂ.ಚಿದಾನಂದಗೌಡ, ಸ್ಥಳ: ಭಾರತಮಾತಾ ಧ್ವಜಕಟ್ಟೆ, ದೇವಯ್ಯನಹುಂಡಿ, ಹುಣಸೆಮರದ ಹತ್ತಿರ, ಬೆಳಗ್ಗೆ 8ಕ್ಕೆ



■ **ಮೈಸೂರು ವಿಶ್ವವಿದ್ಯಾನಿಲಯ:** ಸ್ವಾತಂತ್ರ್ಯ ದಿನಾಚರಣೆ, ಸ್ಥಳ: ಮೈಸೂರು ವಿವಿ ಕ್ರಾಫರ್ಡ್ ಭವನದ ಮುಂಭಾಗ, ಬೆಳಗ್ಗೆ 7.30ಕ್ಕೆ

■ **ಮಹಾಜನ ವಿದ್ಯಾಸಂಸ್ಥೆ:** ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ: ಮೈಸೂರು ವಿವಿ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ.ಕೃಷ್ಣ, ಅಧ್ಯಕ್ಷತೆ: ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಉಪಸ್ಥಿತರು: ಟಿ.ಮುರಳೀಧರ ಭಾಗವತ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9ಕ್ಕೆ.

■ **ಶ್ರೀಕಾಂತ ವಿದ್ಯಾಸಂಸ್ಥೆಗಳು :** ಸ್ವಾತಂತ್ರ್ಯ ದಿನಾಚರಣೆ, ಅಧ್ಯಕ್ಷತೆ: ಕೆ.ಎನ್.ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ ಖಜಾಂಚಿ ಎನ್.ಎಸ್.ರಂಗರಾಜನ್, ಧ್ವಜಾರೋಹಣ: ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಕೆ.ಪಿ.ಪರಮಶಿವಯ್ಯ, ಸ್ಥಳ: ವಿದ್ಯಾಸಂಸ್ಥೆಯ ಆವರಣ, ಬೆಳಗ್ಗೆ 8.30ಕ್ಕೆ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳು:** ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ : ನಿವೃತ್ತ ಪ್ರಾಧ್ಯಾಪಕ ಡಾ.ಸುಧಾಮಣಿ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಮುಖ್ಯ ಅತಿಥಿಗಳು: ಆಡಳಿತ ಮಂಡಳಿ ಸದಸ್ಯ ಶಿವಲಿಂಗಯ್ಯ, ಉಪಸ್ಥಿತರು: ಕಾಲೇಜು ಪ್ರಿನ್ಸಿಪಾಲ್ ಡಾ.ಮರೀಗೌಡ, ಪ್ರಾಂಶುಪಾಲರಾದ ಡಾ.ಪಿ.ದೀಪು, ಸಿದ್ದಯ್ಯ, ಉಪಪ್ರಾಂಶುಪಾಲ ಸುರೇಶ, ಸ್ಥಳ: ಬಯಲು ರಂಗ ಮಂದಿರ, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಆವರಣ, ಶೇಷಾದ್ರಿ ಅಯ್ಯರ್ ರಸ್ತೆ, ಬೆಳಗ್ಗೆ 7.30ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಸ್ವಾತಂತ್ರ್ಯ ದಿನಾಚರಣೆ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ ಶರಣಪ್ಪ ವಿ. ಹಲಸೆ, ಮುಖ್ಯ ಭಾಷಣಕಾರರು: ಮಾಜಿ ವಿಧಾನಸಭಾ ಸದಸ್ಯ ಡಿ.ಮಾದೇಗೌಡ, ಉಪಸ್ಥಿತರು: ಕುಲಸಚಿವ ಪ್ರೊ ಕೆ.ಬಿ.ಪ್ರವೀಣ, ಡೀನ್ (ಶೈಕ್ಷಣಿಕ) ಪ್ರೊ.ಎನ್.ಲಕ್ಷ್ಮೀ, ಕುಲಸಚಿವ ಡಾ.ವಿಶ್ವನಾಥ್, ಹಣಕಾಸು ಅಧಿಕಾರಿ ಶ್ವೇತ, ಡೀನ್ ಪ್ರೊ ರಾಮನಾಥಂ ನಾಯುಡು, ಪ್ರಾಸ್ತಾವಿಕ ನುಡಿ: ನೋಡಲ್ ಅಧಿಕಾರಿ ಡಾ.ಚಂದ್ರೇಗೌಡ, ಸ್ಥಳ: ಆಡಳಿತ ಭವನ ಮುಂಭಾಗ, ಕರಾಮುವಿವಿ, ಬೆಳಗ್ಗೆ 8ಕ್ಕೆ

■ **ರಾಮಕೃಷ್ಣ ವಿದ್ಯಾಕೇಂದ್ರ, ಆರ್‌ಕೆವಿಕೆ ಸಂಯುಕ್ತ ಪದವಿ ಪೂರ್ವ ಕಾಲೇಜು:** ಸ್ವಾತಂತ್ರ್ಯ ದಿನಾಚರಣೆ, ಅಧ್ಯಕ್ಷತೆ: ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಮುಖ್ಯ ಅತಿಥಿಗಳು: ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ರಮೇಶ್ ನರಸಯ್ಯ, ಉಪಸ್ಥಿತರು: ಪ್ರೊ.ಜಿ. ಚಂದ್ರಶೇಖರ್, ಜಿ.ಎನ್.ವಿಶ್ವನಾಥ್, ಸಿ.ಶಿವಪ್ಪ, ವೀಣಾ ಕೆ.ಹೆಗಡೆ, ಶ್ರೀಮತಿ ಪಿ.ವಿ.ಸವಿತಾ, ಸ್ಥಳ: ಶಾಲೆ ಆವರಣ, ಬೆಳಗ್ಗೆ 8ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 'ಸಂವಹನ ಸಮಾಚಾರ' ಬಾನುಲಿ ಸರಣಿ, ಪ್ರಸ್ತುತಿ: ಅಲಕಾ ಕಟ್ಟೆಮನೆ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಶಾಂತಲಾ ವಟ್ಟಂ, ವ್ಯಾಖ್ಯಾನ: ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಅರಣ್ಯ ಇಲಾಖೆ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಬಿ.ಶ್ರೀರಾಮ್ ಭಟ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.30 ದೇವರನಾಮ–ಶ್ರುತಿ ರಂಜನಿ. ಎಂ.ಟಿ, 12.45 ಚಟ್–ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 1.20 ಭಾವಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ, 6.10 'ಸಂವಹನ ಸಮಾಚಾರ' ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ, ಸ್ವಾತಂತ್ರ್ಯೋತ್ಸವದ ಮುನ್ನಾದಿನದಂದು ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದೇಶವನ್ನುದ್ದೇಶಿಸಿ ಮಾಡುವ ಪ್ರಸಾರ ಭಾಷಣದ ಕನ್ನಡ ಅವತರಣಿಕೆಯ ಮರುಪ್ರಸಾರ. ಕೃಷಿ ಹಾಡುಗಳು, 7.45 ರಾಜ್ಯದ ವಿವಿಧೆಡೆಗಳಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಸಮಾರಂಭ ಕುರಿತು ವಿಶೇಷ ವಾರ್ತಾ ಚಿತ್ರ, 10.00 ನಾಟಕ–ವಿಧಿ ವಿಲಾಸ, ರಚನೆ–ಎಂ.ಶಿವಕುಮಾರ್, ನಿರ್ದೇಶನ–ರಘು ಹೆಗ್ಡೆ, 10.30 ಸವಿನೆನಪು

■ **ಜೆಎಸ್‌ಎಸ್ ಶಿಕ್ಷಣ ಸಂಸ್ಥೆ, ಸರಸ್ವತಿಪುರಂ:** ಸ್ವಾತಂತ್ರ್ಯೋತ್ಸವ ಆಚರಣೆ, ಅಧ್ಯಕ್ಷತೆ: ಶಾಲೆ ಮುಖ್ಯೋಪಾಧ್ಯಾಯ ನಾಗರಾಜ, ಧ್ವಜಾರೋಹಣ: ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಪ್ರಧಾನ ಕಾರ್ಯದರ್ಶಿ ನಂಜುಂಡಸ್ವಾಮಿ, ಅತಿಥಿಗಳು: ಎನ್.ಜಿ. ಶಿವಮೂರ್ತಿ, ಶ್ರೀಮತಿ ಮಮತಾ ಸುರೇಶ್, ಎಂ. ಗುರುಸ್ವಾಮಿ, ಜಿ. ಸರ್ವಮಂಗಳ, ಸ್ಥಳ: ಸಂಸ್ಥೆ ಆವರಣ, ಸರಸ್ವತಿಪುರಂ, ಬೆಳಗ್ಗೆ 8ಕ್ಕೆ.

■ **ಶಾರದಾ ವಿಲಾಸ ಶಿಕ್ಷಣ ಸಂಸ್ಥೆ:** ಸ್ವಾತಂತ್ರ್ಯೋತ್ಸವ, ಧ್ವಜಾರೋಹಣ, ಅಧ್ಯಕ್ಷತೆ: ಸಂಸ್ಥೆ ಅಧ್ಯಕ್ಷ ಬಿ.ಎಂ.ಸುಬ್ರಾಯ, ಮುಖ್ಯ ಅತಿಥಿಗಳು: ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳ ಪಿಎಫ್‌ಎಸ್ ಹಾಗೂ ಪಿಸಿಸಿಎಫ್. (ನಿವೃತ್ತ) ಅಧಿಕಾರಿ ಡಾ.ಅಶೋಕ್ ಕುಮಾರ್, ಸ್ಥಳ: ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 8.30ಕ್ಕೆ.

■ **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ರಮ್ಮನಹಳ್ಳಿ:** ಸ್ವಾತಂತ್ರ್ಯ ದಿನಾಚರಣೆ, ಉದ್ಘಾಟನೆ : ಸ್ಪೀಡ್ ಟಾರ್ಗೆಟ್ ಸಂಸ್ಥಾಪಕರಾದ ವಸಂತ್ ಅಲಗೂರು, ಅಧ್ಯಕ್ಷತೆ : ಮಹದೇವ ಮದಕರಿ, ಮುಖ್ಯ ಅತಿಥಿಗಳು : ಮಹೇಶ್, ರಾಜೇಶ್, ಚೌಡಯ್ಯ, ಮಹಾದೇವ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣ, ರಮ್ಮನಹಳ್ಳಿ, ಬೆಳಗ್ಗೆ 9ಕ್ಕೆ.

■ **ಕರ್ನಾಟಕ ಅರಸು ಮಹಾಮಂಡಳಿ ಚಾರಿಟೆಬಲ್ ಟ್ರಸ್ಟ್, ಫೆಡರೇಷನ್ ಅರಸು ಅಸೋಸಿಯೇಷನ್ಸ್:** ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ: ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್, ಗೌರವ ಅತಿಥಿಗಳು: ಅಮರನಾಥ್‌ರಾಜೇ ಅರಸ್, ಡಾ.ಎಂ.ಜಿ.ಆರ್.ಅರಸ್, ಡಾ.ಇಂದುಕಲಾ ಅರಸ್, ಸ್ಥಳ: ವೇಣುಗೋಪಾಲಸ್ವಾಮಿ ದೇವಸ್ಥಾನದ ಎದುರು, ಬೆಳಗ್ಗೆ 9.15ಕ್ಕೆ

■ **ಟಿ.ಎನ್. ಆದರ್ಶ ವಿದ್ಯಾರ್ಥಿನಿಲಯ:** ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ : ವಕೀಲ ಎಂ. ಪ್ರಫುಲ್ಲಕುಮಾರ್, ಸ್ಥಳ: ನಿಲಯ ಆವರಣ, ಬೆಳಗ್ಗೆ 9.30ಕ್ಕೆ.

■ **ವನಿತಾ ಸದನ :** ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ: ಡಾ.ಶ್ರೀಧರ್‌ಮೂರ್ತಿ, ಜಯರಾಜ್ ಹೆಗ್ಡೆ, ಅಧ್ಯಕ್ಷತೆ: ಪಿ.ಶ್ರೀನಿವಾಸರಾವ್, ವನಿತಾ ಸದನ ಅಧ್ಯಕ್ಷೆ ಶ್ರೀಮತಿ ಎನ್.ಭಾರತಿ, ಸ್ಥಳ : ಶಾಲೆ ಆವರಣ, ಬೆಳಗ್ಗೆ 8ಕ್ಕೆ.

■ **ಇಂಡಿಯನ್ ಸೊಸೈಟಿ ಫಾರ್ ಟ್ರೈನಿಂಗ್ ಅಂಡ್ ಡೆವಲಪ್‌ಮೆಂಟ್, ಮೈಸೂರು ಚಾಪ್ಟರ್ ಮತ್ತು ಸಪ್ನಾ ಬುಕ್‌ಹೌಸ್:** ಸ್ವಾತಂತ್ರ್ಯ ದಿನಾಚರಣೆ, ಉಪಸ್ಥಿತರು: ಐಎಸ್‌ಟಿಡಿ, ಮೈಸೂರು ಚಾಪ್ಟರ್ ಅಧ್ಯಕ್ಷ ಜಿ.ಪಿ.ರಾಜೀವ್ ಸಾರಥಿ, ಅಮಯ್ ಆಯುರ್ವೇದ ಆಸ್ಪತ್ರೆ ಸಿಇಓ ಎಂ.ಎಲ್. ನಾಗೇಶ್, ಸ್ಥಳ: ಸಪ್ನಾ ಬುಕ್ ಹೌಸ್, ಬೆಳಗ್ಗೆ 9ಕ್ಕೆ.

■ **ಮೈಸೂರು ಜಿಲ್ಲಾಡಳಿತ:** ಸ್ವಾತಂತ್ರ್ಯೋತ್ಸವ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಧ್ವಜಾರೋಹಣ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು: ಸಚಿವ ಕೆ.ವೆಂಕಟೇಶ್, ಶಾಸಕರಾದ ಸಿ.ಅನಿಲ್‌ಕುಮಾರ್, ರಮೇಶ್ ಬಂಡಿಸಿದ್ದೇಗೌಡ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ.ಪುಷ್ಪ, ಅಧ್ಯಕ್ಷತೆ: ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು : ಸಂಸದರಾದ ಯದುವೀರ ಒಡೆಯರ್, ಸುನೀಲ್ ಬೋಸ್, ಸ್ಥಳ: ಪಂಜಿನ ಕವಾಯಿತು ಮೈದಾನ, ಬನ್ನಿಮಂಟಪ, ಬೆಳಗ್ಗೆ 9ಕ್ಕೆ

■ **ದೀಪಾ ಶಿಕ್ಷಣ ಮತ್ತು ಸೇವಾ ಟ್ರಸ್ಟ್:** ಸ್ವಾತಂತ್ರ್ಯೋತ್ಸವ, ಮುಖ್ಯ ಅತಿಥಿಗಳು: ಚಾರ್ಟರ್ಡ್ ಅಕೌಂಟೆಂಟ್ ಎಸ್. ನಟರಾಜ, ಅಧ್ಯಕ್ಷತೆ: ಸಂಸ್ಥೆ ಅಧ್ಯಕ್ಷ ಎಂ.ರಾಮಪ್ಪ, ಸ್ಥಳ: ದೀಪಾ ಶಾಲೆ ಆವರಣ, ರೂಪಾನಗರ, ಬೆಳಗ್ಗೆ 9ಕ್ಕೆ

■ **ಮೈಸೂರು ಜಿಲ್ಲಾ ಅಮರಶಿಲ್ಪಿ ವೇದಿಕೆ:** ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ: ಶಾಸಕ ಕೆ.ಹರೀಶ್‌ಗೌಡ, ಉಪಸ್ಥಿತರು: ರವಿ ಮಂಚೇಗೌಡನಕೊಪ್ಪಲು, ಮುಖಂಡರಾದ ರಾಮಚಂದ್ರ ಎನ್.ಭಾಗ್ಯಲಕ್ಷ್ಮಿ, ಆರ್.ಹೆಚ್.ಪವಿತ್ರ, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್, ಪ್ರೇಮ ಶಂಕರೇಗೌಡ, ಪೈಲ್ವಾನ್ ಶ್ರೀನಿವಾಸ್, ಭಾಗ್ಯಮ್ಮ, ರಮಣಿ, ಛಾಯಾದೇವಿ, ಸ್ಥಳ: ಲಕ್ಷ್ಮೀಕಾಂತನಗರ, ಹೆಬ್ಬಾಳು, ಬೆಳಗ್ಗೆ 10ಕ್ಕೆ.

ಸಂಸದ ಯದುವೀರ್‌ಗೆ ಶುಭಾಶಯ...



ನೂತನ ಕಚೇರಿ ಆರಂಭಿಸಿದ ಸಂಸದ ಯದುವೀರ್ ಒಡೆಯರ್ ಅವರಿಗೆ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ ಎನ್.ಅರುಣ್‌ಕುಮಾರ್‌ಗೌಡ ಶುಭ ಕೋರಿದರು. ಈ ವೇಳೆ ಅಧ್ಯಕ್ಷ ಪೈಲ್ವಾನ್ ರವಿ, ಮುಖಂಡರಾದ ಬೆಲವತ್ತ ಸುರೇಶ್, ಮಾದಹಳ್ಳಿ ನಂಜುಂಡಸ್ವಾಮಿ, ಎನ್.ಕೆ.ರವಿಕುಮಾರ್, ಕಾಮನಕೆರೆಹುಂಡಿ ಲೋಹಿತ್, ಸುನಿಲ್, ನಟರಾಜು, ಪ್ರಕಾಶ್ ಪಟೇಲ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಕಾಡಾ ಕಚೇರಿಯಲ್ಲಿ ಸಂಸದ ಯದುವೀರ್ ಒಡೆಯರ್ ತಮ್ಮ ಕಚೇರಿ ಉದ್ಘಾಟನೆ ವೇಳೆ ಮಾಜಿ ಸಚಿವ ಸಾ.ರಾ.ಮಹೇಶ್ ಭಾಗವಹಿಸಿ, ಶುಭ ಕೋರಿದರು.



ಸಂಸದ ಯದುವೀರ್ ಒಡೆಯರ್ ಅವರ ನೂತನ 'ಸೇವಾರಂಭ' ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಭಾಗವಹಿಸಿ ಹೂಗುಚ್ಛ ನೀಡಿ, ಶುಭ ಕೋರಿದರು. ಈ ವೇಳೆ ನಿಕಿಲೇಶ್, ಮಂಜು ಅರಸ್ ಉಪಸ್ಥಿತರಿದ್ದರು.



ಸಂಸದ ಯದುವೀರ್ ಒಡೆಯರ್ ಅವರ ನೂತನ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಮೈಸೂರು ನಗರ ST ಮೋರ್ಚಾ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ನಾರಾಯಣ, ಲೋಲಪ್ಪ ಕೃಷ್ಣನಾಯಕ, ಉಪಾಧ್ಯಕ್ಷರಾದ ಟೆನ್ನಿಸ್ ಗೋಪಿ, ಲೋಕೇಶ್, ಜಯಸಿಂಹ, ತ್ಯಾಗರಾಜ್, ಸಿದ್ದರಾಜು, ನಂದೀಶ್ ನಾಯಕ, ಬಾಲರಾಜ್ ಮತ್ತಿತರರಿದ್ದರು.



ಸಂಸದ ಯದುವೀರ್ ಒಡೆಯರ್ ಅವರ ನೂತನ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಮಾಜಿ ಕಾರ್ಪೋರೇಟರ್ ಜೆ.ಎಸ್.ಜಗದೀಶ್ ಭಾಗವಹಿಸಿ ಶುಭ ಕೋರಿದರು. ಈ ವೇಳೆ ಲೋಹಿತ್ ಶರ್ಮಾ ಇನ್ನಿತರರಿದ್ದರು.

ಸ್ಥಾನಿಕ ವೈದ್ಯರ ಶಿಷ್ಯವೇತನ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ

ಮಂಡ್ಯ,ಆ.14– ನಗರದ ಜಿಲ್ಲಾಸ್ಪತ್ರೆಯ ಸ್ಥಾನಿಕ ವೈದ್ಯರ ಶಿಷ್ಯವೇತನ ಹೆಚ್ಚಳಕ್ಕೆ ಆಗ್ರಹಿಸಿ ಕರ್ನಾಟಕ ಸ್ಥಾನಿಕ ವೈದ್ಯರ ಸಂಘ ಜಿಲ್ಲಾ ಘಟಕವು (ಕೆಎಆರ್‌ಡಿ) ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿದ್ದು, ಅಖಿಲ ಕರ್ನಾಟಕ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳ ಸಂಘ ಬೆಂಬಲ ನೀಡಿತು.

ಬಳಿಕ ಮಾತನಾಡಿದ ಅಖಿಲ ಕರ್ನಾಟಕ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳ ಸಂಘದ ಕಾರ್ಯದರ್ಶಿ ಡಾ.ಯೋಗೇಂದ್ರಕುಮಾರ್, ಸ್ಥಾನೀಯ ವೈದ್ಯರು ಶಿಷ್ಯ ವೇತನ ಹೆಚ್ಚಿಸುವಂತೆ ನಡೆಸುತ್ತಿರುವ ಪ್ರತಿಭಟನೆ ನ್ಯಾಯಯುತವಾಗಿದ್ದು ಆಸ್ಪತ್ರೆಗಳಲ್ಲಿ ಬೇಸಿಕ್ ಪಿಲ್ಲರ್‌ಗಳಾಗಿ ಕೆಲಸ ನಿರ್ವಹಿಸುವ ಸ್ಥಾನೀಯ ವೈದ್ಯರ ಮನವಿಗೆ ಸಚಿವ ಶರಣ ಪ್ರಕಾಶ್‌ಪಾಟೀಲ್ ಸ್ಪಂದಿಸಬೇಕು ಎಂದು ಒತ್ತಾಯಿಸಿದರು.

ಆಸ್ಪತ್ರೆಯ ಸ್ಥಾನಿಕ ವೈದ್ಯರ ಸೇವೆಯನ್ನು ಗಮನದಲ್ಲಿರಿಸಿಕೊಂಡು ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಹಾಗೂ ಶಾಸಕ ರವಿಕುಮಾರ್ ಗಣಿಗ ಕಿರಿಯ ಸ್ಥಾನೀಯ ವೈದ್ಯರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕೆಂದು ಮನವಿ ಮಾಡಿದರು.



ಮಂಡ್ಯ ನಗರದ ಜಿಲ್ಲಾಸ್ಪತ್ರೆಯಲ್ಲಿರುವ ಸ್ಥಾನಿಕ ವೈದ್ಯರ ಶಿಷ್ಯವೇತನ ಹೆಚ್ಚಳಕ್ಕೆ ಆಗ್ರಹಿಸಿ ಕೆಎಆರ್‌ಡಿ ಅನಿರ್ದಿಷ್ಟಾವಧಿ ಪ್ರತಿಭಟನೆ ಮುಂದುವರಿಸಿದ್ದು, ಬುಧವಾರ ಅಖಿಲ ಕರ್ನಾಟಕ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳ ಸಂಘ ಬೆಂಬಲ ನೀಡಿತು.

ರಾಜ್ಯದಲ್ಲಿ ಸುಮಾರು 4ಸಾವಿರ ಸ್ಥಾನಿಕ ವೈದ್ಯರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದು, ಜಿಲ್ಲಾ ಕೇಂದ್ರಗಳಲ್ಲಿ ರೋಗಿಗಳು ಚಿಕಿತ್ಸೆ ದೊರೆಯದೆ ತೊಂದರೆ ಅನುಭವಿಸುತ್ತಿದ್ದಾರೆ, ತುರ್ತು ಚಿಕಿತ್ಸೆ ಲಭ್ಯವಿದೆ, ಹೊರ ರೋಗಿಗಳ ವಿಭಾಗ ಹಾಗೂ ತುರ್ತು ಅಲ್ಲದ ಸೇವೆಗಳು ಸ್ಥಗಿತವಾಗಿವೆ ಎಂದು ನುಡಿದರು.

'ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಶುಲ್ಕ ಅಧಿಕವಿದೆ. ಹೆಚ್ಚು ಪ್ರವೇಶ ಶುಲ್ಕ ಪಡೆದು, ಕಡಿಮೆ ಶಿಷ್ಯವೇತನ ನೀಡುವ ಮೂಲಕ ವಂಚಿಸಲಾಗುತ್ತಿದೆ' ಎಂದು ಆರೋಪಿಸಿದರು.

ಕೆಎಆರ್‌ಡಿ ಹಮ್ಮಿಕೊಂಡಿರುವ ಶಿಷ್ಯವೇತನ ಹೆಚ್ಚಳಕ್ಕೆ ಆಗ್ರಹಿಸಿ ಸ್ಥಾನಿಕ ವೈದ್ಯರ ಪ್ರತಿಭಟನೆಗೆ ನಮ್ಮ ಸಂಘವು ಬೆಂಬಲ ನೀಡಿದೆ, ಇವರ ಬೇಡಿಕೆಗಳು ಶೀಘ್ರವಾಗಿ ಈಡೇರಲಿ, ರಾಜ್ಯ ಸರ್ಕಾರ ಗಮನ ಹರಿಸಲಿ ಎಂದು ಒತ್ತಾಯಿಸಿದರು.

ಕೋಲ್ಕತ್ತಾದ ವೈದ್ಯಕೀಯ ಕಾಲೇಜಿನಲ್ಲಿ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿ ಮೇಲಿನ ಅತ್ಯಾಚಾರ, ಹತ್ಯೆಗೆ ಖಂಡನೆ ವ್ಯಕ್ತಪಡಿಸಿದ ಅವರು ತುರ್ತು ಕ್ರಮ ಕೈಗೊಂಡು ನ್ಯಾಯ ಒದಗಿಸಲಿ ಎಂದು ಕೋರಿದರು.

ಪ್ರತಿಭಟನೆಯಲ್ಲಿ ಡಾ.ಚೇತನ್, ಡಾ ರೋಹನ್ ಸೇರಿದಂತೆ ಮಿಮ್ಸ್ ಆಸ್ಪತ್ರೆಯ ರೆಸಿಡೆಂಟ್ ವೈದ್ಯರು ಭಾಗಿಯಾಗಿದ್ದರು.

ಭಾಷೆ ಬೆಳವಣಿಗೆಗೆ ಬೇರೆ ಭಾಷೆ ಬೇಕು: ಮೀರಾ

ಮಂಡ್ಯ: ಭಾಷೆ ಬೆಳವಣಿಗೆಗೆ ಬೇರೆ ಭಾಷೆ ಬೇಕು, ಅನೇಕ ಭಾಷೆಗಳ ಬೆಳವಣಿಗೆಯಿಂದ ಇಂಗ್ಲಿಷ್ ಭಾಷೆ ಬೆಳೆದಿದೆ ಎಂದು ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ ಹೇಳಿದರು.

ಕರ್ನಾಟಕ ಲೇಖಕಿಯರ ಸಂಘ ಮಂಡ್ಯ ಜಿಲ್ಲಾ ಘಟಕದ ವತಿಯಿಂದ ಮಂಡ್ಯದ ಜ್ಞಾನಸಾಗರ ಕ್ಯಾಂಪಸ್‌ನ ಎಸ್‌ಟಿಎಸ್ ಸಭಾಂಗಣದಲ್ಲಿ ನಡೆದ ಕವಿ–ಕಾವ್ಯಾವಲೋಕನ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂಗ್ಲಿಷ್ ಹಾಗೂ ಕನ್ನಡ ಸಮ್ಮಿಶ್ರಣ ಮಾತನಾಡುವುದು ಭಾಷಾ ಬೆಳವಣಿಗೆಗೆ ಸೂಕ್ತವಲ್ಲ ಎಂದು ನುಡಿದರು.

ಪ್ರಪಂಚದಲ್ಲಿ ಸುಮಾರು ಆರು ಸಾವಿರ ಭಾಷೆಗಳಿದ್ದು,ಕರ್ನಾಟಕ ರಾಜ್ಯದಲ್ಲಿ ಸುಮಾರು 172 ಕ್ಕಿಂತ ಹೆಚ್ಚು ಬೇರೆ ಬೇರೆ ಮಾತೃ ಭಾಷೆಗಳನ್ನು ಮಾತನಾಡುತ್ತಿದ್ದಾರೆ ಎಂದರು.

ನಾಡು ನುಡಿ ಮೇಲೆ ಅನೇಕ ಆಕ್ರಮಣಗಳು ನಡೆದಿದೆ, ಹರಿದು ಹಂಚಿಹೋಗಿದ್ದ ಆಕ್ರಮಣವನ್ನು ತಡೆಯಲು ಕನ್ನಡ ಚಳವಳಿಗಳು ಭಾಷೆ ಆಧಾರದ ಮೇಲೆ ನಡೆದು ಕನ್ನಡ ನಾಡು ಏಕೀಕರಣ ಆಗಿದೆ. ಕನ್ನಡವನ್ನು ಬೆಳೆಸಬೇಕು ಎಂದು ಅನೇಕ ಕವಿಗಳು ಹೋರಾಟ ನಡೆಸಿ ಭಾಷೆ ಉಳಿವಿಗೆ ಶ್ರಮಿಸಿದ್ದಾರೆ ಎಂದು ಹೇಳಿದರು.



ಕವಿ–ಕಾವ್ಯಾವಲೋಕನ ಉಪನ್ಯಾಸ ಕಾರ್ಯಕ್ರಮವನ್ನು ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾಧ್ಯಕ್ಷೆ ಡಾ. ಮೀರಾ ಶಿವಲಿಂಗಯ್ಯ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣದಿಂದ ವ್ಯಕ್ತಿತ್ವ ರೂಪುಗೊಳ್ಳಬೇಕು ಅದಕ್ಕಾಗಿ ವಿದ್ಯಾರ್ಥಿಗಳು ಸಾಹಿತ್ಯ ಅಭ್ಯಾಸದಿಂದ, ಪಠ್ಯಪುಸ್ತಕವನ್ನು ಓದುವುದರಿಂದ ಭಾವನೆಗಳ ಶುದ್ಧೀಕರಣಗೊಳಿಸುತ್ತದೆ ಎಂದರು.

ಇಂಡುವಾಳು ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕಿ ಡಾ.ಎಸ್.ಸಿ.ಮಂಗಳ ಮಾತನಾಡಿ, ವಿಶ್ವ ಪರಂಪರೆಯಲ್ಲಿ ಕನ್ನಡಕ್ಕೆ ಎರಡು ಕೊಡುಗೆಗಳನ್ನು ಕೊಟ್ಟಿದ್ದಾರೆ ಒಂದು ವಚನ ಸಾಹಿತ್ಯ ಮತ್ತೊಂದು ದಾಸ ಸಾಹಿತ್ಯ ಎಂದು ಹೇಳಿದರು.

ಕನ್ನಡ ಸಾಹಿತ್ಯಕ್ಕೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿದೆ. ಅದಕ್ಕಾಗಿ ವಿದ್ಯಾರ್ಥಿಗಳು ಸಾಹಿತಿಗಳ ಸ್ಫೂರ್ತಿ ಪಡೆಯಬೇಕು ನಾವು ಕೂಡ ಸಾಧನೆ ಮಾಡಲು ಪ್ರಯತ್ನಪಡಬೇಕು, ಸಾಧನೆ ಮಾಡಲು ಸಾಕಷ್ಟು ಅವಕಾಶಗಳಿವೆ. ಸಾಧನೆಗೆ ಅಸಾಧ್ಯವಾದುದು ಯಾವುದು ಇಲ್ಲ. ಅದಕ್ಕಾಗಿ ವಿದ್ಯಾರ್ಥಿಗಳು ಪ್ರಯತ್ನಪಡಿ ಎಂದು ಹೇಳಿದರು.

ಶಿಕ್ಷಕ ಕೊತ್ತತ್ತಿ ರಾಜು ಅವರು, ಕಡಿಕೊಳ್ಳ ಮಡಿವಾಳಪ್ಪ ಮತ್ತು ಸಂತ ಶಿಶುನಾಳ ಶರೀಫರ ತತ್ವಪದ ಹಾಗೂ ಹಿಂದೂಮತಿ ಲಮಾಣಿಯವರ 'ನನ್ನಾಸೆ' ಎಂಬ ಕವನ ವಿಷಯ ಕುರಿತು ವಿಷಯ ಮಂಡನೆ ಮಾಡಿದರು.

ವೇದಿಕೆಯಲ್ಲಿ ಗೀತಾಂಜಲಿ ಅಂತರ ರಾಷ್ಟ್ರೀಯ ಶಾಲೆಯ ಪ್ರಾಂಶುಪಾಲೆ ಹೆಚ್.ಸರೋಜ, ಲೇಖಕಿಯರ ಸಂಘದ ನಿರ್ದೇಶಕರಾದ ಎ.ಎನ್.ಶರ್ಮಿಳಾ, ಡಿ.ಶಿಲ್ಪ, ಆಶಾ ಇತರರು ಹಾಜರಿದ್ದರು.

ಮಿಮ್ಸ್ ಮೇಲೆ ದಾಳಿ: ಅವಧಿ ಮುಗಿದ 40 ಲಕ್ಷ ಮೌಲ್ಯದ ಔಷಧಗಳು ಪತ್ತೆ

ಮಂಡ್ಯ,ಆ.14– ಮಿಮ್ಸ್ (ಜಿಲ್ಲಾಸ್ಪತ್ರೆ)ನ ಔಷಧ ಉಗ್ರಾಣದ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ ಸುಮಾರು 40 ಲಕ್ಷ ಮೌಲ್ಯದ ಅವಧಿ ಮುಗಿದಿರುವ ರೆಮ್ಡಿಸಿವರ್ ಮೆಡಿಸಿನ್ ಪತ್ತೆಯಾಗಿರುವುದು ಬೆಳಕಿಗೆ ಬಂದಿದೆ.

ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಅವಧಿ ಮೀರಿದ ಲಕ್ಷಾಂತರ ರೂಪಾಯಿಯ ಮೆಡಿಸಿನ್ ಇದ್ದು, ಅಧಿಕಾರಿಗಳು ಏಜೆನ್ಸಿಯವರೊಂದಿಗೆ ಮೆಡಿಕಲ್ ಮಾಫಿಯಾದಲ್ಲಿ ಭಾಗಿಯಾಗಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟ ಮಾಡುತ್ತಿದ್ದಾರೆ ಎಂದು ಕೇಶವಮೂರ್ತಿ ಎಂಬುವರು ದೂರು ನೀಡಿದ ಹಿನ್ನೆಲೆಯಲ್ಲಿ ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ನೇತೃತ್ವದಲ್ಲಿ ದಾಳಿ ನಡೆದಿದೆ.

ದಾಳಿ ವೇಳೆ ಪ್ರಮುಖವಾಗಿ ಕೊರೊನಾ ಕಾಲದಲ್ಲಿ ಬಹು ಬೇಡಿಕೆ ಇದ್ದ ರೆಮ್ಡಿಸಿವರ್ ಇಂಜೆಕ್ಷನ್ ಎಕ್ಸ್‌ಪೈರಿಯಾಗಿರುವುದು ಕಂಡುಬಂದಿದೆ. ಬರೋಬ್ಬರಿ 40 ಲಕ್ಷ ಮೌಲ್ಯದ ರೆಮ್ಡಿಸಿವರ್ ಇಂಜೆಕ್ಷನ್ ಅವಧಿ 2022ರಲ್ಲಿಯೇ ಮುಕ್ತಾಯವಾಗಿದೆ. ಕೇವಲ ರೆಮ್ಡಿಸಿವರ್ ಮಾತ್ರವಲ್ಲದೇ ಬೇರೆ ಬೇರೆ ರೋಗಗಳಿಗೆ ನೀಡುವ ಔಷಧಿ, ಮಾತ್ರೆ, ಇಂಜೆಕ್ಷನ್‌ನ ಅವಧಿಯೂ ಮುಕ್ತಾಯವಾಗಿದ್ದು, ಲಕ್ಷಾಂತರ ರೂಪಾಯಿ ನಷ್ಟ ಸರ್ಕಾರಕ್ಕೆ ಉಂಟಾಗಿದೆ ಎಂದು ತಿಳಿದು ಬಂದಿದೆ.

ಈ ಬಗ್ಗೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಸರ್ಕಾರಿ ಆಸ್ಪತ್ರೆಯಲ್ಲಿ ಮೆಡಿಸಿನ್ ಇದ್ದರೂ ಖಾಸಗಿ ಮೆಡಿಕಲ್ ಸ್ಟೋರ್‌ಗಳಿಗೆ ಚೀಟಿ ಬರೆದು ಕಳುಹಿಸುತ್ತಾರೆ. ಇದೀಗ ಲಕ್ಷಾಂತರ ಮೌಲ್ಯದ ಮೆಡಿಸಿನ್‌ನ ಅವಧಿ ಮುಗಿದಿದ್ದು, ಈ ಬಗ್ಗೆ ಆರೋಗ್ಯ ಇಲಾಖೆ ಹಾಗೂ ಸರ್ಕಾರ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಆದರೆ ಇಲಾಖೆಯ ಉನ್ನತ ಅಧಿಕಾರಿಗಳು ಮಾತ್ರ ಇದು ಸಿಬ್ಬಂದಿಗಳ ನಿರ್ಲಕ್ಷ್ಯದಿಂದ ಈ ಸಮಸ್ಯೆಯಾಗಿದ್ದು, ಅಂತಹವರ ವಿರುದ್ಧ ಕ್ರಮ ಕೈಗೊಳ್ಳುವುದು ಎಂದು ಹೇಳಿದ್ದು, ಈ ರೀತಿಯ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿಗೆ ಯಾರು ಹೊಣೆಯೋ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕಾದ ಅವಶ್ಯಕತೆ ಇದೆ.

ಮಾರಮ್ಮ ದೇವಸ್ಥಾನ ಹುಂಡಿ ಒಡೆದು ಹಣ ಕಳವು





ಪಾಂಡವಪುರ: ತಾಲೂಕಿನ ಡಿಂಕಾ ಗ್ರಾಮದ ಆದಿಶಕ್ತಿ ಡಿಂಕದ ಮಾರಮ್ಮ ದೇವಸ್ಥಾನದ ಹುಂಡಿ ಒಡೆದು ಕಳ್ಳರು ಸಾವಿರಾರು ಹಣವನ್ನು ಕದ್ದು ಪರಾರಿಯಾಗಿರುವ ಘಟನೆ ಮಂಗಳವಾರ ರಾತ್ರಿ ನಡೆದಿದೆ.

ಶ್ರೀ ಆದಿಶಕ್ತಿ ಡಿಂಕದ ಮಾರಮ್ಮ ದೇವಸ್ಥಾನದ ಮುಂಭಾಗ ಹಾಕಿದ್ದಂತಹ ಹುಂಡಿಯನ್ನು ಒಡೆದಿರುವ ಕಳ್ಳರು ಹುಂಡಿಯಲ್ಲಿದ್ದ ಸಾವಿರಾರು ರೂ.ಗಳನ್ನು ಕದ್ದು ಪರಾರಿಯಾಗಿದ್ದಾರೆ. ಖಾಲಿ ಹುಂಡಿಯನ್ನು ದೇವಸ್ಥಾನದ ಮುಂಭಾಗ ಇರುವಂತ ಕೆರೆಯ ಬಳಿ ಬಿಸಾಡಿ ಪರಾರಿಯಾಗಿದ್ದಾರೆ. ಬುಧವಾರ ಬೆಳಿಗ್ಗೆ ಘಟನೆ ಬೆಳಕಿಗೆ ಬಂದಿದೆ. ಸ್ಥಳೀಯರು ನೀಡಿದ ಮಾಹಿತಿಯ ಮೇರೆಗೆ ಕೆಆರ್‌ಎಸ್ ಠಾಣೆಯ ಪೊಲೀಸರು ದೇವಸ್ಥಾನದ ಬಳಿ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ.

ದೇವಸ್ಥಾನದ ಸಿಸಿಟಿವಿ ಫುಟೇಜ್‌ಗಳನ್ನು ಪೊಲೀಸರು ಸಂಗ್ರಹಿಸಿದ್ದಾರೆ. ಘಟನೆ ಸಂಬಂಧ ದೇವಸ್ಥಾನದ ಅರ್ಚಕ ದೇವರಾಜು ನೀಡಿದ ದೂರಿನ ಮೇರೆಗೆ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಇನ್ನು ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪಿಗಳ ಪತ್ತೆಗಾಗಿ ಪಿಎಸ್‌ಐ ರಾಮಣ್ಣ ಅವರ ನೇತೃತ್ವದಲ್ಲಿ ತಂಡ ರಚಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಗಾಂಜಾ ಮಾರುತ್ತಿದ್ದ ಇಬ್ಬರ ಬಂಧನ



ಪ್ರದೀಶ್,



ಫಾರೂಕ್

ಮಡಿಕೇರಿ, ಆ.14–ಸಿದ್ದಾಪುರ ಪೊಲೀಸ್ ಠಾಣೆ ವ್ಯಾಪ್ತಿಯ ನೆಲ್ಯಹುದಿಕೇರಿ ಗ್ರಾಮದಲ್ಲಿ ಗಾಂಜಾ ಮಾರುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ನೆಲ್ಯಹುದಿಕೇರಿ ಗ್ರಾಮ ನಿವಾಸಿಗಳಾದ ಪ್ರದೀಶ್ (30) ಮತ್ತು ಫಾರೂಕ್ (28) ಬಂಧಿತ ಆರೋಪಿಗಳಾಗಿದ್ದು, 191 ಗ್ರಾಂ ಗಾಂಜಾ ಹಾಗೂ ಗೂಡ್ಸ್ ವಾಹನ ವಶಪಡಿಸಿಕೊಳ್ಳಲಾಗಿದೆ.

ಮಂಗಳವಾರ ನೆಲ್ಯಹುದಿಕೇರಿ ಎಂ.ಜಿ. ಕಾಲೋನಿ ರಸ್ತೆಯಲ್ಲಿ ಗೂಡ್ಸ್ ವಾಹನದಲ್ಲಿ ಗಾಂಜಾ ಸರಬರಾಜು ಮತ್ತು ಮಾರಾಟಕ್ಕೆ ಯತ್ನಿಸುತ್ತಿದ್ದ ಈ ಇಬ್ಬರನ್ನು ಪೊಲೀಸರು ಇಬ್ಬರು ಮಾಲು ಸಹಿತ ಬಂಧಿಸಿದ್ದಾರೆ. ಮಡಿಕೇರಿ ಡಿವೈಎಸ್‌ಪಿ ಮಹೇಶ್ ಕುಮಾರ್, ವೃತ್ತ ನಿರೀಕ್ಷಕ ರಾಜು, ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಭಾರಿ ಮಳೆಯಿಂದ ಮನೆಗಳಿಗೆ ನುಗ್ಗಿದ ನೀರು



ಗದ್ದೆಹಳ್ಳದ ತಗ್ಗು ಪ್ರದೇಶದ ಮನೆಗೆ ಮಳೆ ನೀರು ನುಗ್ಗಿರುವುದು.

ಸುಂಟಿಕೊಪ್ಪ, ಆ.14–ಸುಂಟಿಕೊಪ್ಪ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ಭಾರಿ ಗುಡುಗು ಸಿಡಿಲು ಸಹಿತ 1 ಗಂಟೆ ಕಾಲ ಮಳೆ ಸುರಿದಿದ್ದು, ತಗ್ಗು ಪ್ರದೇಶದ ನಿವಾಸಿಗಳ ಮನೆಗಳಿಗೆ ಕೊಳಚೆ ನೀರು ನುಗ್ಗಿದ ಪರಿಣಾಮ ಸಂಕಷ್ಟ ಎದುರಿಸುವಂತಾಯಿತು.

ಸುಂಟಿಕೊಪ್ಪದಿಂದ ಗದ್ದೆಹಳ್ಳಕ್ಕೆ ಹರಿಯುವ ತೋಡು ನೀರು ತುಂಬಿಕೊಂಡ ತಗ್ಗು ಪ್ರದೇಶದ 10 ರಿಂದ 12 ಮನೆಗಳಿಗೆ ನೀರು ನುಗ್ಗಿದ್ದು, ಮನೆಯ ಗೃಹೋಪಯೋಗಿ ವಸ್ತು ಹಾಗೂ ಪೀಠೋಪಕರಣಗಳನ್ನು ನೀರಿನಿಂದ ರಕ್ಷಿಸಲು ರಾತ್ರಿಯಿಡೀ ಹರಸಾಹಸ ಪಡುವಂತಾಯಿತು.

ಈ ಬಗ್ಗೆ ಸಂಬಂಧಿಸಿದ ಇಲಾಖೆಗೆ ದೂರು ನೀಡಿದ್ದರೂ ಅಧಿಕಾರಿಗಳು ಭೇಟಿ ನೀಡಿದ್ದರೆ ಹೊರತು ಶಾಶ್ವತ ಪರಿಹಾರಕ್ಕೆ ಮುಂದಾಗುತ್ತಿಲ್ಲ. ಇದರಿಂದ ಯಾವಾಗ ನೀರು ಮನೆಗಳಿಗೆ ನುಗ್ಗುವುದೋ ಎನ್ನುವ ಭೀತಿಯಲ್ಲಿ ನೆಲೆಸುವಂತಾಗಿದೆ ಎಂದು ಈ ಭಾಗದ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಗ್ರಾಮ ಪಂಚಾಯಿತಿ ಅಧ್ಯಕ್ಷ ಪಿ.ಆರ್. ಸುನಿಲ್ ಕುಮಾರ್ ಹಾಗೂ ಉಪಾಧ್ಯಕ್ಷೆ ಶಿವಮ್ಮ ಮಹೇಶ್ ಸದಸ್ಯ ಪಿ.ಎಫ್.ಸಬಾಸ್ಟೀನ್ ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸಿದರು.

ಯುವತಿ ಗರ್ಭಿಣಿಗೆ ಕಾರಣನಾದ ಯುವಕ ಬಂಧನ

ಮಡಿಕೇರಿ, ಆ.14–ಮದುವೆಯಾಗುವುದಾಗಿ ನಂಬಿಸಿ ಯುವತಿಯೊಂದಿಗೆ ದೈಹಿಕ ಸಂಪರ್ಕ ಬೆಳೆಸಿ ಆಕೆಯ ಗರ್ಭಿಣಿಗೆ ಕಾರಣನಾದ ಯುವಕನನ್ನು ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಗಣಪತಿ

ವಿರಾಜಪೇಟೆ ತಾಲೂಕಿನ ತೋರಾ ಗ್ರಾಮದ ನಿವಾಸಿ ಗಣಪತಿ ಅಲಿಯಾಸ್ ಚುಮ್ಮಿ(20) ಬಂಧಿತ ಆರೋಪಿ. ಈತ ಗ್ರಾಮವೊಂದರ 20 ವರ್ಷದ ಯುವತಿಯನ್ನು 3 ತಿಂಗಳ ಗರ್ಭಿಣಿಯಾಗಿಸಿದ್ದಾನೆ. ಬಳಿಕ ಆಕೆಯನ್ನು ವಿವಾಹವಾಗಲು ನಿರಾಕರಿಸಿದ್ದ. ಇದರಿಂದ ಮನನೊಂದ ಯುವತಿ ಆತ್ಮಹತ್ಯೆ ಪ್ರಯತ್ನ ನಡೆಸಿದ್ದಳು. ಬಳಿಕ ಪೋಷಕರು ಯುವತಿಯನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದರು. ಈ ಸಂಬಂಧ ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ದೂರು ದಾಖಲಿಸಿಕೊಂಡಿದ್ದು, ಆರೋಪಿಯನ್ನು ಬಂಧಿಸಿ, ನ್ಯಾಯಂಗ ವಶಕ್ಕೆ ಒಪ್ಪಿಸಿದ್ದಾರೆ.

ಮಹಿಳೆ ನಾಪತ್ತೆ

ಮಂಡ್ಯ,ಆ.14– ಮದ್ದೂರು ತಾಲೂಕು ಕೊಪ್ಪ ಹೋಬಳಿ ಬಿದರಕೋಟೆ ಗ್ರಾಮದ ಪೂಜಾ ಟಿ.ಆರ್.(21) ಎಂಬವರು ಕಾಣೆಯಾಗಿದ್ದಾರೆ ಎಂದು ಮದ್ದೂರು ತಾಲೂಕು ಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಣೆಯಾದ ಮಹಿಳೆಯು ಎಣ್ಣೆಗೆಂಪು ಬಣ್ಣ, ದುಂಡುಮುಖ, ಸಾಧಾರಣ ಶರೀರ, ಉದ್ದನೆಯ ಕಪ್ಪು ತಲೆ ಕೂದಲು ಹೊಂದಿದ್ದು ಕಾಣೆಯಾದ ದಿನ ಸಿಮೆಂಟ್ ಬಣ್ಣದ ಪ್ಯಾಂಟ್ ಮತ್ತು ಟಿ–ಶರ್ಟ್ ಧರಿಸಿದ್ದರು. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ದೂ.ಸಂ: 08232–224200/9480804870 ಅನ್ನು ಸಂಪರ್ಕಿಸಬಹುದು ಎಂದು ತಾಲೂಕು ಕೊಪ್ಪ ಪೊಲೀಸ್ ಠಾಣೆಯ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಾವುದೇ ಕಾರಣಕ್ಕೂ ಭತ್ತ ಕೃಷಿ ಹಿಂಜರಿಕೆ ಬೇಡ

● ಸಚಿವ ಎನ್.ಎಸ್.ಭೋಸರಾಜು ಧೈರ್ಯ ● ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ಬೊಳ್ಳುಮಾಡುನಲ್ಲಿ ಬೇಲ್ ನಮ್ಮೆ

ಮಡಿಕೇರಿ, ಆ.14–ರೈತರು ಭತ್ತ ಕೃಷಿ ಪದ್ಧತಿಯನ್ನು ಮತ್ತಷ್ಟು ಹೆಚ್ಚಿಸಬೇಕು. ಯಾವುದೇ ಕಾರಣಕ್ಕೂ ಭತ್ತ ಕೃಷಿಯಿಂದ ಹಿಂಜರಿಕೆ ಬೇಡ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಧೈರ್ಯ ನೀಡಿದರು.

ವಿರಾಜಪೇಟೆ ತಾಲೂಕಿನ ಬೊಳ್ಳುಮಾಡು ಗ್ರಾಮದ ಮಾತಂಡ ಶಕು ಅಕ್ಕಮ್ಮ ಹಾಗೂ ಮನು ಅವರ ಗದ್ದೆಯಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ಬುಧವಾರ ಆಯೋಜಿಸಿದ್ದ 'ಬೇಲ್ ನಮ್ಮೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದಕ್ಷಿಣ ಭಾರತದಲ್ಲಿ ಭತ್ತ ಪ್ರಮುಖ ಆಹಾರ ಬೆಳೆಯಾಗಿದೆ. ಆದ್ದರಿಂದ ಯಾವುದೇ ಕಾರಣಕ್ಕೂ ಭತ್ತ ಕೃಷಿಯಿಂದ ವಿಮುಖರಾಗದೆ, ಭತ್ತ ಬೆಳೆಯನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ತಿಳಿಸಿದರು.

ಭತ್ತ ಕೃಷಿಯಿಂದ ಅಂತರ್ಜಲ ಸಹ ಹೆಚ್ಚಾಗಲಿದೆ. ಆದ್ದರಿಂದ ಭತ್ತದ ಉತ್ಪಾದನೆಯಿಂದ ಲಾಭ–ನಷ್ಟ ಬಗ್ಗೆ ನೋಡದೆ ಭತ್ತ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಕರ್ನಾಟಕದ ಉತ್ತರ ಭಾಗದ ತುಂಗಾಭದ್ರ ಮತ್ತು ಆಲಮಟ್ಟಿ ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿ ಭತ್ತವನ್ನು ವರ್ಷಕ್ಕೆ ಎರಡು ಬೆಳೆ ಬೆಳೆಯಲಾಗುತ್ತದೆ. ಭತ್ತವೇ ಪ್ರಮುಖ ಕೃಷಿ ಪದ್ಧತಿಯಾಗಿದ್ದು, ಭತ್ತ ಕೃಷಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸರ್ಕಾರ ಸಹ ಹಲವು ಸಹಾಯಧನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಬಿತ್ತನೆ ಬೀಜವನ್ನು ಸಹಾಯಧನದಡಿ ನೀಡಲಾಗುತ್ತಿದ್ದು, ಭತ್ತ ಬೆಳೆದ ನಂತರ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸರ್ಕಾರದಿಂದ ಖರೀದಿಸಲಾಗುತ್ತದೆ. ಸಹಾಯಧನದಡಿ ಪವರ್ ಟಿಲ್ಲರ್, ಭತ್ತದ ನಾಟಿ ಯಂತ್ರ ಒದಗಿಸಲಾಗುತ್ತಿದೆ. ಕರ್ನಾಟಕ ಕೃಷಿ ಸಮೃದ್ಧಿ ಯೋಜನೆ ಪ್ರಸಕ್ತ ಬಜೆಟ್‌ನಲ್ಲಿ ಘೋಷಣೆಯಾಗಿದ್ದು, ಅನುಷ್ಠಾನಗೊಳ್ಳಬೇಕಿದೆ ಎಂದು ಸಚಿವರು ತಿಳಿಸಿದರು.

ಇದೇ ವೇಳೆ ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಸೋಮಶೇಖರ್, ತಹಸೀಲ್ದಾರ್ ಎಚ್.ಎನ್.ರಾಮಚಂದ್ರ, ಕಾಕೋಟುಪರಂಬು ಗ್ರಾಪಂ ಅಧ್ಯಕ್ಷ ಬಟ್ಟಿಕಾಳಂಡ ಕಾಮುಣಿ ಸುರೇಶ್, ಬೊಳ್ಳುಮಾಡು ವಿಎಸ್‌ಎಸ್‌ಎನ್ ಅಧ್ಯಕ್ಷ ಮಾತಂಡ ಬೇಬ ಪೂವಯ್ಯ, ಬೊಳ್ಳುಮಾಡು ಗ್ರಾಪಂನ ಸಂಜು ಕಾಳಯ್ಯ, ರಿಜಿಸ್ಟ್ರಾರ್ ಅಜ್ಜಿಕುಟ್ಟಿರ ಗಿರೀಶ್, ಸದಸ್ಯರಾದ ಪುತ್ತರಿರ ಪಪ್ಪು ತಿಮ್ಮಯ್ಯ, ಚೊಟ್ಟೆಯಂಡ ಸಂಜು ಕಾವೇರಪ್ಪ, ಪೊನ್ನಿರ ಯು.ಗಗನ್, ಕೊಂಡಿಜಮ್ಮನ ಎಂ.ಬಾಲಕೃಷ್ಣ, ಕುಂಬೆಯಂಡ ಡೀನಾ ಬೋಜಣ್ಣ, ಮೊಳ್ಳೆಕುಟ್ಟಡ ದಿನು ಬೋಜಪ್ಪ, ಪಾನಿಕುಟ್ಟಿರ ಕೆ.ಕುಟ್ಟಪ್ಪ, ಕುಡಿಯರ ಕಾವೇರಪ್ಪ, ನಾಯಂದಿರ ಆರ್.ಶಿವಾಜಿ, ಚೆಪ್ಪುಡಿರ ಎಸ್.ಉತ್ತಪ್ಪ, ನಾಯಕಂಡ ಬೇಬಿ ಚಿಣ್ಣಪ್ಪ, ನಾಪಂಡ ಸಿ.ಗಣೇಶ್ ಇತರರು ಇದ್ದರು.



ಬೊಳ್ಳುಮಾಡು ಗ್ರಾಮದಲ್ಲಿ ಆಯೋಜಿಸಿದ್ದ 'ಬೇಲ್ ನಮ್ಮೆ' ಕಾರ್ಯಕ್ರಮದಲ್ಲಿ ಮಹಿಳಾ ಕೃಷಿಕರಾದ ಮಾತಂಡ ಶಕುಅಕ್ಕಮ್ಮ ಅವರನ್ನು ಸನ್ಮಾನಿಸಲಾಯಿತು.

ಕೆಸರು ಗದ್ದೆ ಕ್ರೀಡಾಕೂಟ

ಕಾರ್ಯಕ್ರಮಕ್ಕೂ ಮೊದಲು ನಾಟಿ, ಹಗ್ಗಜಗ್ಗಾಟ ಸೇರಿದಂತೆ ಹಲವು ಕೆಸರು ಗದ್ದೆ ಕ್ರೀಡಾಕೂಟ ನಡೆದವು. ಸಚಿವ ಎನ್.ಎಸ್.ಭೋಸರಾಜು ಅವರನ್ನು ಕೊಡವ ವಾದ್ಯದೊಂದಿಗೆ ಸ್ವಾಗತಿಸಿ, ರಾಷ್ಟ್ರಧ್ವಜ ನೀಡುವ ಮೂಲಕ ಬರಮಾಡಿಕೊಳ್ಳಲಾಯಿತು.

ಬೇಲ್‌ನಮ್ಮೆ ಕಾರ್ಯಕ್ರಮದಲ್ಲಿ ಹರ್ ಘರ್ ತಿರಂಗಾ ಅಭಿಯಾನ ಪ್ರಯುಕ್ತ ತ್ರಿವರ್ಣ ಧ್ವಜ ಮೂಲಕ ಸಚಿವರು ಸೇರಿದಂತೆ ಶಾಸಕರು ಆಗಮಿಸಿದರು. ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್‌ಗೌಡ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಠಾನ ಸಮಿತಿ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಹಾಗೂ ಅಕಾಡೆಮಿ ಸದಸ್ಯರು ಭತ್ತ ನಾಟಿ ಮಾಡಿ ಗಮನ ಸೆಳೆದರು. ಇದೇ ವೇಳೆ ಕೊಡಗು ವಿಜ್ಞಾನ ವೇದಿಕೆ ಯಧ್ಯಕ್ಷ ನಿ.ಡೀನ್ ಡಾ.ಚೆಪ್ಪುಡಿರ ಜಿ.ಕುಶಾಲಪ್ಪ ಕೃಷಿ ಕ್ಷೇತ್ರದ ತಿಳಿಸಿದರು. ಬೊಳ್ಳುಮಾಡು ಗ್ರಾಮದ ಮಹಿಳಾ ಕೃಷಿಕರಾದ ಮಾತಂಡ ಶಕುಅಕ್ಕಮ್ಮ ಅವರನ್ನು ಸನ್ಮಾನಿಸಲಾಯಿತು.

> **ಅಕಾಡೆಮಿ ವತಿಯಿಂದ ಕೃಷಿ, ಕಲೆ, ಸಂಸ್ಕೃತಿ, ಸಾಹಿತ್ಯ ಚಟುವಟಿಕೆಗೆ ಹೆಚ್ಚಿನ ಗಮನಹರಿಸಲಾಗಿದೆ. ಕೃಷಿ ಉಳಿದಲ್ಲಿ ಕೊಡವ ಸಂಸ್ಕೃತಿ ಉಳಿದಂತೆ ಆ ನಿಟ್ಟಿನಲ್ಲಿ ಕೃಷಿಗೆ ಪೂರಕವಾಗಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ.**
> –ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ವಿದ್ಯುತ್ ದೀಪಾಲಂಕಾರ ವೇಳೆ ಅವಘಡ

ವಾಟರ್‌ಮ್ಯಾನ್ ಸಾವು, ಮತ್ತೊಬ್ಬನಿಗೆ ಗಾಯ

ಪಾಂಡವಪುರ: ಗುರುವಾರ ನಡೆಯುವ ಸ್ವಾತಂತ್ರ್ಯ ದಿನಾಚರಣೆಗಾಗಿ ಗ್ರಾಮ ಪಂಚಾಯಿತಿ ಕಟ್ಟಡಕ್ಕೆ ವಿದ್ಯುತ್ ದೀಪಾಲಂಕಾರ ಮಾಡುವ ಸಂದರ್ಭದಲ್ಲಿ ವಿದ್ಯುತ್ ತಗುಲಿ ಗ್ರಾಪಂ ವಾಟರ್ ಮ್ಯಾನ್ ಮೃತಪಟ್ಟಿದ್ದು, ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಹಳೇಬೀಡು ಗ್ರಾಪಂನಲ್ಲಿ ಬುಧವಾರ ಮಧ್ಯಾಹ್ನ ನಡೆದಿದೆ.



ತಾಲೂಕಿನ ಹೊಸಕೋಟೆ ಗ್ರಾಮದ ನಿವಾಸಿ ವೆಂಕಟಯ್ಯ ಎಂಬುವರ ಪುತ್ರ ಗ್ರಾಪಂ ವಾಟರ್ ಮ್ಯಾನ್ ವೆಂಕಟೇಶ್(45) ಮೃತ ವ್ಯಕ್ತಿ. ಮೇನಾಗರ ಗ್ರಾಮದ ನಿವಾಸಿ, ವಾಟರ್‌ಮ್ಯಾನ್ ಲೋಕೇಶ್(36) ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗ್ರಾಮ ಪಂಚಾಯಿತಿಯಲ್ಲಿ ಆ.15ರಂದು ನಡೆಯುವ ಸ್ವಾತಂತ್ರ್ಯ ದಿನ ಆಚರಣೆ ಮಾಡಲು ಗ್ರಾಪಂ ಕಟ್ಟಡಕ್ಕೆ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದ್ದ ಸಂದರ್ಭದಲ್ಲಿ ಸಿಬ್ಬಂದಿಗಳಿಗೆ ಸಹಾಯ ಮಾಡಲು ಗ್ರಾಪಂ ವ್ಯಾಟರ್‌ಮ್ಯಾನ್‌ಗಳಾದ ವೆಂಕಟೇಶ್, ಲೋಕೇಶ್ ತೆರಳಿದ್ದಾರೆ. ಈ ವೇಳೆ ಗ್ರಾಮ ಪಂಚಾಯಿತಿ ಕಟ್ಟಡದ ಪಕ್ಕದಲ್ಲಿಯೇ ಹೋಗಿದ್ದ 11 ಕೆವಿ ವಿದ್ಯುತ್ ತಂತಿಯಿಂದ ವಿದ್ಯುತ್ ಸ್ಪರ್ಶವಾಗಿ ವಾಟರ್‌ಮ್ಯಾನ್ ಪ್ರಕಾಶ್ ಹಾಗೂ ಲೋಕೇಶ್ ಗಂಭೀರವಾಗಿ ಗಾಯಗೊಂಡಿದ್ದಾರೆ.

ತಕ್ಷಣ ಇಬ್ಬರನ್ನು ಚಿಕಿತ್ಸೆಗಾಗಿ ಪಾಂಡವಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಪ್ರಕಾಶ್ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ಮತ್ತೊಬ್ಬ ವಾಟರ್‌ಮ್ಯಾನ್ ಲೋಕೇಶ್ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ಸಂಬಂಧ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ವಾತಂತ್ರ್ಯ ಪಡೆಯುವ ವೇಳೆ ಯಾವ ನಾಯಕರಿಗೂ ದೇಶ ವಿಭಜನೆ ಪರಿಕಲ್ಪನೆ ಇರಲಿಲ್ಲ

● ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ವಿಷಾದ ● ಆದರೆ ದೇಶವೂ ವಿಭಜನೆ ಆಯ್ತು; ಎಲ್ಲರಿಗೂ ಅಧಿಕಾರ ಗದ್ದುಗೆಯೂ ಸಿಕ್ತು, ಕೊನೆಗೆ ಎಲ್ಲರೂ ಸುಮ್ಮನಾದರು!



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಚುಟುಕು ಕವಿಗೋಷ್ಠಿಯಲ್ಲಿ ವಿಜೇತ ಚುಟುಕು ಕವಿಗಳಿಗೆ ಪ್ರಶಸ್ತಿ ವಿತರಿಸಲಾಯಿತು.

ಮೈಸೂರು, ಆ.14(ಎಂಟಿವೈ)– ದೇಶಕ್ಕೆ ಸ್ವಾತಂತ್ರ್ಯ ಸಿಗುವ ಸಂದರ್ಭದಲ್ಲಿ ಅಂದಿನ ನಾಯಕರು ದೇಶ ವಿಭಜಿಸುವ ಪರಿಕಲ್ಪನೆ ಹೊಂದಿರಲಿಲ್ಲ ಎಂದು ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ತಿಳಿಸಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಹಿಳಾ ಘಟಕ ಹಾಗೂ ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ 'ಸ್ವಾತಂತ್ರ್ಯೋತ್ಸವ ಚುಟುಕು ಕವಿಗೋಷ್ಠಿ' ಉದ್ಘಾಟಿಸಿ ಮಾತನಾಡಿದ ಅವರು, ಭಾರತಕ್ಕೆ ಯಾವಾಗ ಸ್ವಾತಂತ್ರ್ಯ ಸಿಕ್ಕಿದೆ ಎಂದರೆ ಎಲ್ಲರೂ ಹೇಳುತ್ತಾರೆ. ಕಳೆದುಕೊಂಡ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ. ಆದರೆ ಯಾವಾಗ ಸ್ವಾತಂತ್ರ್ಯ ಕಳೆದುಕೊಂಡೆವು ಎಂದು ಯಾರಿಗೂ ಗೊತ್ತಿಲ್ಲ. ಈ ಸಂಬಂಧ ಸರಿಯಾದ ಉತ್ತರವೂ ಸಿಗುತ್ತಿಲ್ಲ. ಚರಿತ್ರೆಯಲ್ಲೂ ಉಲ್ಲೇಖವಾಗಿಲ್ಲ ಎಂದರು.

ಭಾರತ ದೇಶ 1947ರಲ್ಲಿ ಹುಟ್ಟಿಲ್ಲ. ನಮ್ಮದು ಅತ್ಯಂತ ಪ್ರಾಚೀನವಾದ ದೇಶ. ತನ್ನದೇ ಆದ ಇತಿಹಾಸ ಹೊಂದಿದೆ. ಸ್ವಾತಂತ್ರ್ಯ ಸಿಕ್ಕಿದ ಸಂದರ್ಭದಲ್ಲಿ ಏನೆಲ್ಲಾ ಆಗಿದೆ ಎಂದು ಅವಲೋಕನ ಮಾಡಿಕೊಳ್ಳಬೇಕು. ಭಾರತವನ್ನು ತುಂಡರಿಸಿ ಸ್ವಾತಂತ್ರ್ಯ ಗಳಿಸಬೇಕು ಎಂದು ನಮ್ಮ ಹಿರಿಯರಲ್ಲಿ ಇರಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಸಿಗಲು ಮಹಾತ್ಮಗಾಂಧೀಜಿ, ಕಾಂಗ್ರೆಸ್ ಹೋರಾಟ ಕಾರಣ ಎಂದು ಹೇಳಿದ್ದನ್ನು ಅನೇಕ ಸಂದರ್ಭದಲ್ಲಿ ಕೇಳುತ್ತೇವೆ. ಇದರೊಂದಿಗೆ ಕ್ರಾಂತಿಕಾರಿಗಳ ಹೋರಾಟವೂ ಸೇರಿದೆ ಕೇವಲ ಶಾಂತಿಯುತವಾದ ಹೋರಾಟದಿಂದ ಮಾತ್ರ ಸ್ವಾತಂತ್ರ್ಯ ಸಿಕ್ಕಿಲ್ಲ. ಭಗತ್ ಸಿಂಗ್, ಸಾವರ್ಕರ್, ಅನೇಕರ ಹೋರಾಟ ನೆನೆಸಿಕೊಳ್ಳಬೇಕು. ಅಂದಿನ ಹಿರಿಯ ನಾಯಕರಿಗೆ ಸ್ವಾತಂತ್ರ್ಯ ಪೂರ್ವದಲ್ಲಿ ದೇಶ ವಿಭಜನೆಯ ದೃಷ್ಟಿ ಇರಲಿಲ್ಲ. 1936ರಲ್ಲಿ ಲಾಹೋರ್ ಕಾಂಗ್ರೆಸ್ ಅಧಿವೇಶನ ನಡೆದಿತ್ತು. ಆ ಸಭೆಯಲ್ಲಿ ಅಂದಿನ ಮುಸ್ಲಿಂ ಲೀಗ್ ನಾಯಕರು ವಿಭಜನೆ ಪ್ರಸ್ತಾಪ ಮಾಡಿದ್ದರು ಎಂದು ವಿವರಿಸಿದರು.

ಅಂದಿನ ನಾಯಕರು ಎಂತಹ ಮನಸ್ಥಿತಿಯನ್ನು ಹೊಂದಿದ್ದರು ಎಂದು ಗಮನಿಸಬೇಕು. ವಿಭಜನೆಯ ವಿಚಾರ ಮುಂದೆ ಬಂದಾಗ ನೆಹರು ವಿಭಜನೆಗೆ ಅವಕಾಶ ಕೊಡುವುದಿಲ್ಲ. ವಿಭಜನೆ ಎನ್ನುವುದು ಹುಚ್ಚು ಮನಸ್ಸಿನ ಕಲ್ಪನೆ ಎಂದರು. ಆದರೆ, ವಿಭಜಿತ ಭಾರತದ ಮೊದಲ ಪ್ರಧಾನಿಯಾಗುತ್ತಾರೆ. ಮುಸ್ಲಿಮ್ ಲೀಗ್ ನಾಯಕರು ದೇಶದ ವಿಭಜನೆಯಾಗದಿದ್ದರೆ ರಕ್ತಕ್ರಾಂತಿ ಆಗುತ್ತದೆ ಎನ್ನುತ್ತಾರೆ. ಇದಕ್ಕೆ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಬಾಯಿ ಪಟೇಲ್ ತಕ್ಕ ಉತ್ತರ ಕೊಡುತ್ತೇವೆ. ದೇಶ ವಿಭಜನೆಗೆ ಅವಕಾಶ ಕೊಡಲ್ಲ ಎಂದು ಹೇಳಿದ್ದರೂ ನಂತರ ವಿಭಜಿತ ಭಾರತದ ಮೊದಲನೇ ಉಪ ಪ್ರಧಾನಿಯಾಗುತ್ತಾರೆ. ಬಾಬು ರಾಜೇಂದ್ರ ಪ್ರಸಾದ್ ಅಂದಿನ ಸ್ವಾತಂತ್ರ್ಯ ಚಳುವಳಿಯಲ್ಲಿ ದೇಶವನ್ನು ತುಂಡರಿಸಲು ಸಾಧ್ಯವಿಲ್ಲ ಎಂದು ಪುಸ್ತಕ ಬರೆಯುತ್ತಾರೆ. ಆದರೆ ಮೊದಲ ರಾಷ್ಟ್ರಪತಿಯಾಗುತ್ತಾರೆ. ಮಹಾತ್ಮಗಾಂಧೀಜಿ ಹಿಂದು–ಮುಸ್ಲಿಂ ಸಮುದಾಯಗಳು ನನ್ನೆರಡು ಕಣ್ಣುಗಳಿದ್ದಂತೆ, ದೇಶ ವಿಭಜನೆಗೂ ಮುನ್ನ ನನ್ನ ದೇಹ ತುಂಡರಿಸಿ ಎನ್ನುತ್ತಾರೆ. ಆದರೆ ಅವರ ಸಮ್ಮುಖದಲ್ಲಿಯೇ ವಿಭಜಿತ ಸರ್ಕಾರ ರಚನೆಯಾಯಿತು ಎಂದು ತಿಳಿಸಿದರು.

ದೇಶದ ಬಗ್ಗೆ ಚಿಂತನೆ ಮಾಡುವವರು ಸುದೀರ್ಘ ಅವಧಿಯ ಬಗ್ಗೆ ಚಿಂತಿಸಬೇಕಾಗಿದೆ. ಇಂದು ಅಖಂಡ ಭಾರತವನ್ನು ಕಲ್ಪನೆ ಮಾಡಿಕೊಂಡಾಗ ಶ್ರೀಲಂಕಾ, ಪಾಕಿಸ್ತಾನ ಬಾಂಗ್ಲಾ, ನೇಪಾಳ, ಅಫ್ಘಾನಿಸ್ತಾನವನ್ನು ಕಳೆದುಕೊಂಡಿದ್ದೇವೆ. ಆದರೆ ಈಗಲೂ ನಾವು ನೆಮ್ಮದಿಯಿಂದಿಲ್ಲ. ನೆರೆ ರಾಷ್ಟ್ರಗಳಲ್ಲಿರುವ ಬಂಧುಗಳಿಗೆ ತೊಂದರೆ ಯಾಗುತ್ತಿದೆ. ನಮ್ಮ ದೇಶ ಬೆಳೆಯುತ್ತಿರುವುದನ್ನು ಕಂಡು ಅನೇಕರು ಸಹಿಸಿಕೊಳ್ಳುತ್ತಿಲ್ಲ ಎಂದರು.

ಚುಟುಕು ಯೋಗಾಚಾರ್ಯ ಡಾ. ಎಂ.ಜಿ.ಆರ್.ಅರಸ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಹಿಳಾ ಘಟಕದ ಅಧ್ಯಕ್ಷೆ ಡಾ.ರತ್ನಾ ಹಾಲಪ್ಪಗೌಡ, ವಾಣಿಜ್ಯ ಮತ್ತು ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷ ಲಿಂಗರಾಜು, ಕಸಾಪ ಕಾರ್ಯದರ್ಶಿ ಡಾ. ಹೆಚ್.ಎನ್. ಲೋಕೇಶಪ್ಪ ಇನ್ನಿತರರು ಉಪಸ್ಥಿತರಿದ್ದರು.

ಮೂವರು ಶ್ರೀಗಂಧದ ಚೋರರ ಸೆರೆ



ಶ್ರೀಗಂಧದ ಚೋರರನ್ನು ಬಂಧಿಸಿರುವ ಪೊಲೀಸರು.

ಬೈಲಕುಪ್ಪೆ, ಆ.14– ಅಕ್ರಮವಾಗಿ ಗಂಧದ ಮರವನ್ನು ಕಡಿದು ಸಾಗಿಸುತ್ತಿದ್ದ ಮೂವರು ಶ್ರೀಗಂಧದ ಚೋರರನ್ನು ಬಂಧಿಸಿರುವ ಬೈಲುಕುಪ್ಪೆ ಪೊಲೀಸರು 11.5 ಕೆಜಿ ಗಂಧದ ತುಂಡುಗಳನ್ನು ವಶಪಡಿಸಿಕೊಂಡಿದ್ದಾರೆ,

ಪಿರಿಯಾಪಟ್ಟಣ ತಾಲೂಕಿನ 80 ಎಕರೆ ಹಾಡಿ ಗ್ರಾಮದ ನಿವಾಸಿಗಳಾದ ಮುತ್ತು (37), ಶಶಿಧರ್ (32), ಸಂತೋಷ್ (20) ಬಂಧಿತ ಆರೋಪಿಗಳು. ಗುಡ್ಡೆ ಹೊಸೂರು ಗ್ರಾಮದ ನಿವಾಸಿ ಯತೀಶ್ ಅವರ ಜಮೀನಿನಲ್ಲಿದ್ದ ಗಂಧದ ಮರವನ್ನು ಕಡಿದು ಸಾಗಿಸು ತ್ತಿದ್ದಾಗ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳ ವಿರುದ್ಧ ಬೈಲಕುಪ್ಪೆ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಾರ್ಯಾಚರಣೆಯಲ್ಲಿ ಎಸ್ಐ ಅಜಯ್‌ಕುಮಾರ್, ಎಎಸ್ಐ ಸೋಮಶೇಖರ್, ಸಿಬ್ಬಂದಿಗಳಾದ ಮುದ್ದುರಾಜು, ಮಹದೇವಪ್ಪ, ಕುಮಾರಸ್ವಾಮಿ, ಸುರೇಶ್, ತ್ರಿನೇಶ್ ಇದ್ದರು.

ಮೈಮುಲ್ ಅಧ್ಯಕ್ಷರಿಂದ ಒಕ್ಕಲಿಗ ಸಮಾಜದ ಮುಖಂಡನಿಗೆ ಅಭಿನಂದನೆ



ನೂತನ ಅಧ್ಯಕ್ಷ ಆರ್. ಚೆಲುವರಾಜ್‌ರವರು ಒಕ್ಕಲಿಗ ಸಮಾಜದ ಹಿರಿಯ ಮುಖಂಡ ಕೆ ವಜ್ರೇಗೌಡರವರನ್ನು ಸನ್ಮಾನಿಸಿದರು.

ತಿ.ನರಸೀಪುರ, ಆ.14– ನಂದಿನಿ ಹಾಲು ಮತ್ತು ನಂದಿನಿ ಉತ್ಪನ್ನಗಳು ನೈಜ ರುಚಿ ಹಾಗೂ ಪರಿಶುದ್ಧತೆಯಿಂದ ಕೂಡಿದ್ದು, ಸಾರ್ವಜನಿಕರು ನಂದಿನಿ ಉತ್ಪನ್ನಗಳನ್ನೇ ಬಳಸುವ ಮೂಲಕ ರೈತರ ಸಂಸ್ಥೆಯಾದ ಮೈಮುಲ್ ಸಂಸ್ಥೆಯ ಬೆಳವಣಿಗೆಗೆ ಸಹಕಾರಿ ಯಾಗಬೇಕು ಎಂದು ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಹಾಗೂ ಒಕ್ಕಲಿಗರ ಸಮಾಜದ ಹಿರಿಯ ಮುಖಂಡ ಕೆ. ವಜ್ರೇಗೌಡ ಮನವಿ ಮಾಡಿದ್ದಾರೆ.

ನೂತನ ಅಧ್ಯಕ್ಷ ಆರ್. ಚೆಲುವರಾಜ್ ಒಕ್ಕಲಿಗ ಸಮಾಜದ ಹಿರಿಯ ಮುಖಂಡ ಕೆ.ವಜ್ರೇಗೌಡರನ್ನು ಅಭಿನಂದಿಸಿದ ವೇಳೆ ಅಭಿನಂದನೆ ಸ್ವೀಕರಿಸಿ ಮಾತನಾಡಿ, ನಂದಿನಿ ಉತ್ಪನ್ನಗಳು ರಾಜ್ಯದ ಸಾವಿರಾರು ರೈತರ ಹಾಗೂ ಬಡ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸುವ ಆಸ್ತಿಯಾಗಿದ್ದು, ಉತ್ತಮ ಗುಣಮಟ್ಟದಿಂದ ತಯಾರಾಗುವ ನಂದಿನಿ ಉತ್ಪನ್ನಗಳನ್ನು ಎಲ್ಲರೂ ಖರೀದಿ ಮಾಡುವ ಮೂಲಕ ಮೈಮುಲ್ ಸಂಸ್ಥೆಯನ್ನು ಮತ್ತಷ್ಟು ಬೆಳೆಸಲು ಸಹಕರಿಸಬೇಕೆಂದರು.

ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಮಾತನಾಡಿ, ಮೈಮುಲ್‌ನಿಂದ ತಯಾರಾಗುವ ನಂದಿನಿ ಉತ್ಪನ್ನಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದು, ಹಸುವಿನ ಬೆಣ್ಣೆಯಿಂದಲೇ ಮಾಡಲಾದ ತುಪ್ಪದಿಂದ ತಯಾರಿಸಲಾಗುತ್ತದೆ ಹಾಗಾಗಿ ಸಾರ್ವಜನಿಕರು, ಶಾಲಾ ಮಕ್ಕಳು ಹೆಚ್ಚು ಹೆಚ್ಚು ನಂದಿನಿ ಉತ್ಪನ್ನಗಳನ್ನು ಖರೀದಿ ಮಾಡುವ ಮೂಲಕ ರೈತರಿಗೆ ಪ್ರೋತ್ಸಾಹ ನೀಡ ಬೇಕು ಎಂದು ಮನವಿ ಮಾಡಿದರು.

ಮಹಾಲಕ್ಷ್ಮಿ ಬಸ್ ಮಾಲೀಕರು ಸಚಿನ್, ಎಸ್‌ಪಿಎಲ್ ಮಹದೇವು, ಮಹದೇಶ್ವರ ಬಸ್ ಮ್ಯಾನೇಜರ್ ರಾಮು ಮತ್ತಿತರಿದ್ದಾರೆ.

ಯಂತ್ರಶ್ರೀ ಪದ್ಧತಿಯಿಂದ ರೈತರಿಗೆ ಅನುಕೂಲ, ಹೆಚ್ಚಿನ ಇಳುವರಿ, ಆದಾಯ ಬರಲಿದೆ



ತಲಕಾಡು, ಆ.14– ಸಾಂಪ್ರದಾಯಿಕ ಭತ್ತ ಬೇಸಾಯ ಪದ್ಧತಿಗಿಂತ ಯಂತ್ರ ಶ್ರೀ ಪದ್ಧತಿಯಿಂದ ಕೃಷಿ ಕೂಲಿ ಕಾರ್ಮಿಕರ ಸಮಸ್ಯೆ ಕಡಿಮೆಯಾಗಿ, ಕಡಿಮೆ ಬಿತ್ತನೆ ಬೀಜ, ಕಡಿಮೆ ಶ್ರಮ, ಕಡಿಮೆ ಸಮಯದಲ್ಲಿ, ಕಡಿಮೆ ಖರ್ಚಿನಲ್ಲಿ, ಹೆಚ್ಚು ಇಳುವರಿ, ಆದಾಯ ಪಡೆಯಬಹುದು ಎಂದು ಕೃಷಿ ಮೇಲ್ವಿಚಾರಕ ಕುಮಾರ್ ಟಿ.ಆರ್ ತಿಳಿಸಿದರು.

ತಾಲೂಕಿನ ತಲಕಾಡು ಶ್ರೀ ಹಸ್ತಿಕೇರಿ ಮಠದ ಶ್ರೀ ಸಿದ್ದಮಲ್ಲಿಕಾರ್ಜುನ ಸ್ವಾಮೀಜಿ ರವರ 12 ಎಕರೆ ಜಮೀನಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಯಂತ್ರ ಶ್ರೀ ಭತ್ತ ಬೇಸಾಯದ ಸಸಿ ಮಡಿ ತಯಾರಿಸಲಾಯಿತು. ಈ ಸಂದರ್ಭ ಮಠದ ಶ್ರೀ ಅವರು ಹಾಗೂ ಕೃಷಿ ಮೇಲ್ವಿಚಾರಕ ಕುಮಾರ್ ಟಿ.ಆರ್., ಬಿಜಿಪುರ ರೈತ ಸೇವಾ ಕೇಂದ್ರದ ವ್ಯವಸ್ಥಾಪಕ ಅಣ್ಣಯ್ಯ, ಯಜಮಾನ್ ಶಿವಕುಮಾರ್, ಅಭಿಲಾಷ್ ಉಪಸ್ಥಿತರಿದ್ದರು.

ಬ್ಯಾಂಕ್ ಕಿರುಕುಳ ತಪ್ಪಿಸಲು ಹೋರಾಟಕ್ಕೆ ತೀರ್ಮಾನ



ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಹುಣಸೂರು, ಆ.14– ಕೃಷಿ ಸಾಲ ನೀಡಿರುವ ಬ್ಯಾಂಕುಗಳು ಸಾಲ ಬಾಕಿ ವಸೂಲಿಗಾಗಿ ನಾನಾ ರೀತಿಯ ಕಿರುಕುಳ ನೀಡುತ್ತಿದ್ದು, ರೈತ ಕುಟುಂಬದ ಸ್ಥಿರಸ್ವತ್ತುಗಳನ್ನೇ ಆನ್‌ಲೈನ್ ಮೂಲಕ ಹರಾಜು ಹಾಕುತ್ತಿವೆ. ಇದರ ವಿರುದ್ಧ ಹೋರಾಟ ಮಾಡಲು ಇಂದು ಹುಣಸೂರು ರಾಘವೇಂದ್ರ ಮಠದ ಆವರಣದಲ್ಲಿ ರಾಜ್ಯ ರೈತ ಸಂಘದ ಅಧ್ಯಕ್ಷರಾದ ಬಡಗಲಪುರ ನಾಗೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಲಗಾರರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅತಿವೃಷ್ಟಿ, ಅನಾವೃಷ್ಟಿಯಾಗಿದ್ದರೂ ಬ್ಯಾಂಕುಗಳು ಬಡ್ಡಿ, ಚಕ್ರಬಡ್ಡಿ ಹಾಕಿ ವಸೂಲಿ ತಗಾದೆ ಮಾಡುತ್ತಿವೆ. ಈ ಕಾರಣದಿಂದಲೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರ ಸಾಲದ ಬಾಕಿಗಾಗಿ ರೈತರ ಜಮೀನನ್ನು ಹರಾಜು ಹಾಕುವುದನ್ನು ತಡೆಗಟ್ಟಲು ಸೂಕ್ತ ಕಾನೂನು ರೂಪಿಸಬೇಕೆಂದು ನಾಗೇಂದ್ರ ಒತ್ತಾಯಿಸಿದರು.

ವಿವಿಧ ಬ್ಯಾಂಕ್‌ಗಳಿಂದ ಕೃಷಿ ಸಾಲ ಪಡೆದು ಸುಸ್ತಿದಾರರಾಗಿರುವ ತಾಲೂಕಿನ ರೈತರ ಸಭೆಯನ್ನು ಸೆಪ್ಟೆಂಬರ್‌ನಲ್ಲಿ ಹುಣಸೂರಿನಲ್ಲಿ ಹೊಸೂರು ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಕರೆಯಲು ನಿರ್ಣಯಿಸಲಾಗಿದ್ದು, ಅಂದು ಮುಂದಿನ ಹೋರಾಟದ ರೂಪುರೇಷೆಗಳ ಬಗ್ಗೆ ನಿರ್ಧರಿಸಲು ತೀರ್ಮಾನಿಸಿತು. ಸಭೆಯಲ್ಲಿ ಸಂಘದ ಜಿಲ್ಲಾಧ್ಯಕ್ಷರಾದ ಹೊಸೂರು ಕುಮಾರ್, ಹನಗೋಡು ಮಹದೇವ್, ಹಿಂಡಗೂಡ್ಲು ಶಿವರಾಮೇಗೌಡ, ಕಟ್ಟೆಮಳಲವಾಡಿ ಸ್ವಾಮಿಗೌಡ, ಹೆಚ್.ಡಿ. ಕೋಟೆ ತಾಲೂಕು ಮಹದೇವು ಮತ್ತು ಹಲವಾರು ರೈತರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಆ.17, ಬಿವಿಬಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ



ರಮೇಶ್‌ಚಂದ್ರ



ರಶ್ಮಿ



ರಘುನಾಥ್



ನಾಗಲಿಂಗು



ಗುರುದತ್

ಮೈಸೂರು, ಆ.14(ಎಸ್‌ಬಿಡಿ)– ಭಾರತೀಯ ವಿದ್ಯಾಭವನ ಹಾಗೂ ಇನ್ಫೋಸಿಸ್ ಪ್ರತಿಷ್ಠಾನ ಸಹಯೋಗದಲ್ಲಿ 'ಅಮೃತ ಧಾರೆ' ಶೀರ್ಷಿಕೆಯಡಿ 133ನೇ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮೈಸೂರು ವಿಜಯ ನಗರ 1ನೇ ಹಂತದ ಭಾರತೀಯ ವಿದ್ಯಾಭವನ(ಬಿವಿಬಿ) ದಲ್ಲಿ ಆಗಸ್ಟ್ 17ರಂದು ಸಂಜೆ 6ಕ್ಕೆ ಆಯೋಜಿಸಲಾಗಿದೆ.

ರಮೇಶ್ ಚಂದ್ರ ಹಾಗೂ ಶ್ರೀಮತಿ ರಶ್ಮಿ ಚಿಕ್ಕಮಗಳೂರು ಅವರು ಗಾಯನ ಪ್ರಸ್ತುತಿಗೆ ರಘುನಾಥ (ತಬಲ), ನಾಗಲಿಂಗು (ಕೀಬೋರ್ಡ್) ಹಾಗೂ ಗುರುದತ್ತ ಹುಣಸೂರು (ರಿದಂ ಪ್ಯಾಡ್) ವಾದ್ಯ ಸಹಕಾರ ನೀಡಲಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರ ಸೂರಿ ಅವರ ಜನ್ಮ ಶತಾಬ್ಧಿ ಆಚರಣೆ

ಮೈಸೂರು, ಆ.14(ಜಿಎ)–ಸ್ವಾತಂತ್ರ್ಯ ಹೋರಾಟಗಾರ, ಕಾರ್ಮಿಕ ನಾಯಕ ಸೂರ್ಯನಾರಾಯಣರಾವ್ (ಸೂರಿ) ಅವರ ಜನ್ಮ ಶತಾಬ್ಧಿ ಆಚರಣಾ ಕಾರ್ಯಕ್ರಮವನ್ನು ಸಿಐಟಿಯು ವತಿಯಿಂದ ಆ.17 ರಂದು ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಎನ್.ಕೆ. ಬಾಲಾಜಿ ರಾವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಅಂದು ಬೆಳಗ್ಗೆ 10.30ಕ್ಕೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಉದ್ಘಾಟಿಸುವರು, ಹಿರಿಯ ಪತ್ರಕರ್ತರಾದ ಕೃಷ್ಣಪ್ರಸಾದ್, ಎಸ್. ವರಲಕ್ಷ್ಮಿ, ಮೀನಾಕ್ಷಿ ಸುಂದರಂ ಇನ್ನಿತರರು ವೇದಿಕೆಯಲ್ಲಿರುವರು. ಜಿ. ಜಯರಾಂ ಅಧ್ಯಕ್ಷತೆ ವಹಿಸುವರು, ಮಧ್ಯಾಹ್ನ 12.30ಕ್ಕೆ ಮಂಡ್ಯದ ವಿಮಲಾ ರಣದಿವೆ ತಂಡದಿಂದ ಡಾ. ರಾಜಪ್ಪ ದಳವಾಯಿ ಅವರ ರಚನೆಯ, ಕೆ.ಆರ್. ಸುಮತಿ ನಿರ್ದೇಶನದ 'ನ್ಯಾಯ ಕೇಳಿದ ನಿಂಗಪ್ಪ' ನಾಟಕ ಪ್ರದರ್ಶನವಿರಲಿದೆ. ಮಧ್ಯಾಹ್ನ 2.15ಕ್ಕೆ ಸೂರ್ಯ ನಾರಾಯಣರಾವ್ ಜೀವನ ಚರಿತ್ರೆ ಆಧಾರಿತ 'ಕಾಮ್ರೇಡ್ ಸೂರಿ' ನಾಟಕ ಪ್ರದರ್ಶನವಿರಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಮಿಕ ಮುಖಂಡರಾದ ಎಂ.ಅಣ್ಣಪ್ಪ, ಬಸವಯ್ಯ, ಮೆಹಬೂಬ್ ಉಪಸ್ಥಿತರಿದ್ದರು.

ಮುತ್ತುರಾಜ್ ಹೆಗ್ಗನೂರು ಗ್ರಾಪಂ ಅಧ್ಯಕ್ಷ



ಹೆಗ್ಗನೂರು ಗ್ರಾಪಂ ಅಧ್ಯಕ್ಷರಾಗಿ ಮುತ್ತುರಾಜ್ ಆಯ್ಕೆಯಾದರು.

ಸರಗೂರು, ಆ.14– ಹೆಗ್ಗನೂರು ಗ್ರಾಮ ಪಂಚಾಯಿತಿಗೆ ನೂತನ ಅಧ್ಯಕ್ಷರಾಗಿ ಬಿಜೆಪಿ–ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಮುತ್ತುರಾಜ್ ಆಯ್ಕೆಯಾಗಿದ್ದಾರೆ.

ತಾಲೂಕಿನ ಹೆಗ್ಗನೂರು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಬುಧವಾರ ನಡೆದ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಮುತ್ತುರಾಜ್ ಒಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಅವರು ಅವಿರೋಧವಾಗಿ ಆಯ್ಕೆಯಾದರು. ನೀರಾವರಿ ಇಲಾಖೆ ಎಂಜಿನಿಯರ್ ಉಷಾ, ಪಿಡಿಒ ಲೋಕೇಶ್ ಚುನಾವಣೆ ಪ್ರಕ್ರಿಯೆ ನಡೆಸಿಕೊಟ್ಟರು.

ಉಪಾಧ್ಯಕ್ಷೆ ರುಕ್ಮಿಣಿ ಬಸವರಾಜು, ಸದಸ್ಯರಾದ ಸುಧೀರ್, ಶೋಭಾರಾಣಿ ಲೋಕೇಶ್, ಡಿ.ಎಂ.ಸವಿತಾ, ಮಂಜುಳ ವಸಂತಕುಮಾರ್, ಪ್ರಮೀಳಾ ಮಹೇಶ್, ಮಾರಯ್ಯ, ನಾಗಮ್ಮ, ನಾಗೇಂದ್ರ, ಶಿವಶಂಕರ, ಮಂಜುಳ ಚಲುವರಾಜು, ಎಂ.ಲೋಕೇಶ್, ಬಸವರಾಜು, ಚಿಕ್ಕಶಂಬೇಗೌಡ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಕೆ.ಎಸ್.ವೀರಭದ್ರಪ್ಪ (ನಟರಾಜು), ಮಾಜಿ ಅಧ್ಯಕ್ಷ ಡಿ.ಜಿ. ಶಿವರಾಜು ಇನ್ನಿತರರು ಇದ್ದರು.

ಬೀಚನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ರತ್ನಮ್ಮ ಅವಿರೋಧ ಆಯ್ಕೆ



ಬೀಚನಹಳ್ಳಿ ಗ್ರಾಪಂ ಅಧ್ಯಕ್ಷೆಯಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರತ್ನಮ್ಮ ನಾಗನಾಯಕ ಅವಿರೋಧವಾಗಿ ಆಯ್ಕೆಯಾದರು.


ಹೆಚ್.ಡಿ.ಕೋಟೆ, ಆ.14– ಬೀಚನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರತ್ನಮ್ಮ ನಾಗನಾಯಕ ಆಯ್ಕೆಯಾಗಿದ್ದು, ಶಾಸಕ ಅನಿಲ್ ಚಿಕ್ಕಮಾದು ಅವರ ಮಾರ್ಗದರ್ಶನದಂತೆ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿ ಗ್ರಾಪಂ ಆವರಣದಲ್ಲಿ ನಡೆದ ಗ್ರಾಪಂ ಚುನಾವಣೆಯಲ್ಲಿ ಆಯ್ಕೆಯಾದ ಬಳಿಕ ಮಾತನಾಡಿದ ಅವರು, ಮುಂದಿನ ಒಂಬತ್ತು ತಿಂಗಳ ಅಧಿಕಾರ ಅವಧಿಯಲ್ಲಿ ಉತ್ತಮ ಆಡಳಿತ ನಡೆಸುವೆ. ಹಿರಿಯರ ಮಾರ್ಗದರ್ಶನ ಪಡೆದು, ನಮ್ಮದೇ ಸರ್ಕಾರ ಇರುವ ಕಾರಣ, ಶಾಸಕ ಅನಿಲ್ ಚಿಕ್ಕಮಾದು ಅವರ ಮಾರ್ಗದರ್ಶನದಲ್ಲಿ ಹಾಗೂ ಅವರ ಸಹಕಾರದೊಂದಿಗೆ, ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವೆ ಎಂದು ತಿಳಿಸಿದರು.

ಗ್ರಾಮ ಪಂಚಾಯತಿ ಸದಸ್ಯ ಭಾಸ್ಕರ ಮಾತನಾಡಿ, ಮುಂದಿನ 18 ತಿಂಗಳ 2ಅವಧಿಗಳಿಗೆ ಇಬ್ಬರು ಅಧ್ಯಕ್ಷರನ್ನು ಒಪ್ಪಂದದ ಮೇರೆಗೆ ಆಯ್ಕೆ ಮಾಡುವ ಸಂದರ್ಭ ಒದಗಿ ಬಂದ ಕಾರಣ, ಮುಂದಿನ 9 ತಿಂಗಳ ಮೊದಲ ಅವಧಿಗೆ ಮಾಗುಡಿಲು ಗ್ರಾಮದ ರತ್ನಮ್ಮ ನಾಗನಾಯಕ ಅವರನ್ನು ಆಯ್ಕೆಮಾಡಲಾಗಿದೆ. ನಂತರದ ಅವಧಿಗೆ ಮತ್ತೊಬ್ಬ ಸದಸ್ಯರು ಅಧ್ಯಕ್ಷರಾಗಿ ಆಯ್ಕೆಯಾಗಲಿದ್ದಾರೆ ಎಂದು ತಿಳಿಸಿದರು. ಅಧ್ಯಕ್ಷರಾಗಿ ರತ್ನಮ್ಮ ನಾಗನಾಯಕ ಅವರು ಆಯ್ಕೆಯಾದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರುಗಳು ಅಧ್ಯಕ್ಷರನ್ನು ಸನ್ಮಾನಿಸಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಚುನಾವಣಾಧಿಕಾರಿಗಳಾಗಿ ತಾರಕ ಕಾರ್ಯಪಾಲಕ ಅಭಿಯಂತರರಾದ ರಾಮೇಗೌಡ, ಸಹಾಯಕರಾಗಿ ಶಿವರಾಜು ಕಾರ್ಯ ನಿರ್ವಹಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಆರ್.ವಿ. ಪ್ರೇಮ್‌ಕುಮಾರ್, ಸದಸ್ಯರಾದ ಲಕ್ಷ್ಮಿ ರಮೇಶ್, ಎಂ.ಎಸ್. ರವಿ, ಭಾಸ್ಕರ, ಸುಬ್ರಹ್ಮಣ್ಯ, ಬಸವರಾಜನಾಯಕ, ಗೌರಮ್ಮ ಗೋವಿಂದರಾಜು, ಪಾಪೇಗೌಡ, ನಂದಿನಿ, ಮಹದೇವಮ್ಮ, ಮುಖಂಡ ರಾದ ಮಣಿ, ಹೇಮಂತ್‌ಕುಮಾರ್, ಮಂಜು ನಾಥಸ್ವಾಮಿ, ಕಂದೇಗಾಲ ಶಿವರಾಜು, ಲೋಕೇಶ್, ಸೋಮಣ್ಣ ಎಂ.ಕೆ. ನಾಗರಾಜು, ಅನಂತ, ನೀಲಕಂಠ, ಕುಮಾರ್, ಮೂರ್ತಿ, ಮಂಜು, ವೆಂಕಟನಾಯಕ, ಆನಂದ, ಶಿವ ರಾಜು, ಪ್ರಕಾಶ್, ಮಾಜಿ ಸದಸ್ಯ ಗೋವಿಂದ ರಾಜು, ಪಿಡಿಓ ಪ್ರಭಾಕರ್, ಕಾರ್ಯದರ್ಶಿ ನಾಗರಾಜು, ಮಹೇಶ್, ಕಚೇರಿ ಸಿಬ್ಬಂದಿಗಳು ಇದ್ದರು.

ಉದ್ಘಾಟನೆ ಭಾಗ್ಯ ಕಾಣದ ನುಗು ಏತ ನೀರಾವರಿ ಯೋಜನೆ

ಶಾಸಕರ ಇಚ್ಛಾಶಕ್ತಿ ಕೊರತೆ ಎಂದು ಮಾಜಿ ಶಾಸಕ ಹರ್ಷವರ್ಧನ್ ವಾಗ್ದಾಳಿ



ನೀರೆತ್ತುವ ಪಂಪ್‌ಹೌಸ್‌ಗೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲನೆ ನಡೆಸುತ್ತಿರುವುದು.

ನಂಜನಗೂಡು, ಆ.14– ಕಳೆದ 35 ವರ್ಷಗಳಿಂದ ರೈತರ ಪಾಲಿಗೆ ಹಗಲು ಕನಸಾಗಿದ್ದ ನುಗು ಏತ ನೀರಾವರಿ ಯೋಜನೆ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡಿದ್ದರೂ ಸಹ ಸ್ಥಳೀಯ ಶಾಸಕರ ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದ ಉಧ್ಘಾಟನೆಗೊಂಡಿಲ್ಲ. ರೈತರ ವಿಷಯದಲ್ಲಿ ರಾಜಕೀಯ ಮಾಡುವುದು ಬೇಡ ಎಂದು ಶಾಸಕರನ್ನು ಆಗ್ರಹಿಸುತ್ತೇನೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ಕಣೆನೂರು ಸಮೀಪದ ನುಗು ಏತ ನೀರಾವರಿ ಯೋಜನೆಯ ನೀರೆತ್ತುವ ಪಂಪ್‌ಹೌಸ್‌ಗೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲನೆ ನಡೆಸಿ ಅವರು ಮಾತನಾಡಿದರು. ನನ್ನ 5 ವರ್ಷದ ರಾಜಕೀಯ ತಪಸ್ಸಿನ ಫಲ ಯೋಜನೆ ಪೂರ್ಣಗೊಂಡಿದೆ. 3 ದಶಕಗಳ ರೈತರ ಕನಸಾಗಿದ್ದ ಈ ಯೋಜನೆ ಜಾರಿಗೊಳಿಸಲು ಮಾಜಿ ಸಚಿವರಾದ ಎಂ.ಮಹದೇವಪ್ಪ, ಡಿ.ಟಿ.ಜಯಕುಮಾರ್ ಸೇರಿದಂತೆ ಹಲವಾರು ಘಟಾನುಘಟಿ ನಾಯಕರು ಪ್ರಯತ್ನಿಸಿದರೂ ಸಹ ಯೋಜನೆ ಅನುಷ್ಠಾನಗೊಂಡಿರಲಿಲ್ಲ, 2018ರಲ್ಲಿ ನೂತನ ಶಾಸಕನಾಗಿ ಆಯ್ಕೆಯಾದ ನಂತರ ಯೋಜನೆ ಆರಂಭಿಸುವ ಮಾತನಾಡಿದಾಗ ಹಿರಿಯ ರಾಜಕಾರಣಿಗಳು, ರಾಜಕೀಯ ತಿಳಿಯದ ಅಪ್ರಬುದ್ದರು, ಈತನಿಂದ ಸಾಧ್ಯವೇ ಎಂದೂ ಸಹ ಕುಹಕವಾಡಿದ್ದರು. ಎಚ್.ಡಿ. ಕುಮಾರಸ್ವಾಮಿ ಸುತ್ತೂರು ಜಾತ್ರೆಯಲ್ಲಿ ಪಾಲ್ಗೊಂಡಿದ್ದ ವೇಳೆ ಸುತ್ತೂರು ಶ್ರೀಗಳ ಮೂಲಕ ಯೋಜನೆಗೆ ಒಪ್ಪಿಗೆ ಸೂಚಿಸುವಂತೆ ಬೇಡಿಕೆ ಇಟ್ಟ ಪರಿಣಾಮ ಎಚ್.ಡಿ.ಕುಮಾರಸ್ವಾಮಿರವರು ಬಜೆಟ್‌ನಲ್ಲಿ ಸೇರಿಸಿ 80 ಕೋಟಿ ಅನುದಾನವನ್ನು ಮೀಸಲಿಟ್ಟದ್ದರು. ಆದರೆ ಕೊರೋನಾ ಸಂಧರ್ಭದಲ್ಲಿ ಯಾವುದೇ ಹಣ ಬಿಡುಗಡೆಯಾಗದೆ ಮತ್ತೆ 2 ವರ್ಷ ವಿಳಂಬವಾಯಿತು, ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಸ್ಥಿತ್ವಕ್ಕೆ ಬಂದ ನಂತರ ಯೋಜನೆಗೆ ಒಪ್ಪಿಗೆ ನೀಡಿ ಆಡಳಿತಾತ್ಮ ಅನುಮೋದನೆ ನೀಡಿದ್ದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿರವರು ಶಂಕುಸ್ಥಾಪನೆ ನೆರವೇರಿಸಿ ಅನುಷ್ಠಾನಗೊಳಿಸಿದರು ಎಂದರು.

80 ಕೋಟಿ ಅನುದಾನದಲ್ಲಿ 60 ಕೋಟಿ ಮಾತ್ರ ಬಳಕೆ: ಕಾವೇರಿ ನಿರಾವರಿ ನಿಗಮದ ಎಂಡಿಯಾಗಿದ್ದ ಜಯಪ್ರಕಾಶರವರು ಈ ನುಗು ಏತ ನಿರಾವರಿ ಯೋಜನೆಯನ್ನು ಸೋಲಾರ್ ಶಕ್ತಿಯಿಂದ ಕಾರ್ಯ ನಿರ್ವಹಿಸುವಂತಹ ಯೋಜನೆ ಸಿದ್ದಪಡಿಸಿದ್ದರು. ಆದರೆ ಶಾಸಕರ ಇಚ್ಛಾಶಕ್ತಿ ಕೊರತೆಯಿಂದ ಆ 20 ಕೋಟಿ ಸೋಲಾರ್ ಶಕ್ತಿ ಯೋಜನೆಗೆ ಕಾರ್ಯಗತಗೊಳಿಸದೆ ಬರೀ ವಿದ್ಯುತ್‌ಶಕ್ತಿ ಮೂಲಕವೇ ಕಾರ್ಯ ನಿರ್ವಹಿಸುವಂತೆ ಮಾಡಿದ್ದಾರೆ. ಇಡೀ ರಾಜ್ಯದಲ್ಲಿ ಸೋಲಾರ್‌ನಲ್ಲಿ ಕಾರ್ಯನಿರ್ವಹಿಸುವ ಕಾರ್ಯಯೋಜನೆ ಎಲ್ಲೂ ಇಲ್ಲ. ಬಹುಶಃ ಈ ಯೋಜನೆಯನ್ನು ಶಾಸಕರು ಪೂರ್ಣಗೊಳಿಸಿದಲ್ಲಿ ನಂಜನಗೂಡು ಕ್ಷೇತ್ರಕ್ಕೆ ಬಹು ದೊಡ್ಡ ಹೆಸರು ಬರುತ್ತಿತ್ತು. ಆದರೆ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಯೋಜನೆಯಲ್ಲಿ 20 ಕೋಟಿಗಳನ್ನು ಬಳಕೆ ಮಾಡಿಕೊಳ್ಳಲು ಮನಸ್ಸು ಮಾಡಿಲ್ಲ ಎಂದು ಹರಿಹಾಯ್ದರು.

ಶಾಸಕರು ರೈತ ವಿರೋಧ ನೀತಿ ಅನುಸರಿಸಿದ್ದಾರೆ: ಯೋಜನೆ ಪೂರ್ಣಗೊಂಡು ಸುಮಾರು 2 ತಿಂಗಳು ಕಳೆದಿದೆ, ಈ ವರ್ಷ ಅದೃಷ್ಟಕ್ಕೆ ಉತ್ತಮ ಮಳೆಯಾಗಿದೆ, ಈ ಯೋಜನೆ ಉದ್ಘಾಟನೆಗೊಂಡಿದ್ದಲ್ಲಿ 900 ಎಕರೆ ಪ್ರದೇಶದ ನರಸಾಂಬುದಿ ಕೆರೆ ಸೇರಿದಂತೆ ತಾಲೂಕಿನ 7 ಕೆರೆಗಳು ತುಂಬಿ ಸುಮಾರು 25 ಹೆಕ್ಟೇರ್ ಪ್ರದೇಶಕ್ಕೆ ನಿರಾವರಿ ಸೌಲಭ್ಯ ಒದಗಿಸುವ ಮೂಲಕ ರೈತರಿಗೆ ಅನುಕೂಲವಾಗುತ್ತಿತ್ತು. ಅಲ್ಲದೆ ಅಂತರ್ಜಲ ಹೆಚ್ಚಳಕ್ಕೆ ಸಹಕಾರಿಯಾಗುತ್ತಿತ್ತು. ಹಲವಾರು ಬಾರಿ ಮುಖ್ಯಮಂತ್ರಿಗಳು ನಂಜನಗೂಡಿಗೆ ಬಂದಿದ್ದರೂ ಸಹ ಯೋಜನೆ ಉದ್ಘಾಟನೆಗೊಳಿಸದೆ ಶಾಸಕ ದರ್ಶನ್ ಧ್ರುವನಾರಾಯಣ್‌ರವರು ರಾಜಕೀಯ ಮಾಡಿಕೊಂಡು ನಿರ್ಲಕ್ಷ್ಯ ವಹಿಸುವ ಮೂಲಕ ರೈತ ವಿರೋಧಿ ನೀತಿ ಅನುಸರಿಸುತ್ತಿರುವುದು ಮೇಲ್ನೋಟಕ್ಕೆ ಕಾಣಿಸುತ್ತಿದೆ ಎಂದು ಆಪಾದಿಸಿದರು. ಈ ಯೋಜನೆ ಉದ್ಘಾಟನೆಗೊಳಿಸಿದರೆ ಹರ್ಷವರ್ಧನ್‌ಗೆ ಹೆಸರು ಬಂದುಬಿಡುತ್ತದೆ ಎಂದು ವಿಳಂಬಗೊಳಿಸುತ್ತಿದ್ದಾರೆ. ಈ ಯೋಜನೆಯನ್ನು ತುರ್ತಾಗಿ ಅನುಷ್ಠಾನಗೊಳಿಸಿ ತಾಲೂಕು ಆಡಳಿತ ವಿಫಲವಾದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಬೇಟಿ ಮಾಡಿ ಯೋಜನೆಯನ್ನು ಉದ್ಘಾಟನೆಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕಣೆನೂರು ಪರಶಿವಮೂರ್ತಿ, ತಾಪಂ ಮಾಜಿ ಸದಸ್ಯರಾದ ಹುಲ್ಲಹಳ್ಳಿ ಶಿವಣ್ಣ, ಕೊಂಗಳ್ಳಿಬಸವರಾಜು, ಮುಖಂಡರಾದ ಶಿವರುದ್ರ, ದೊಡ್ಡಂಕಶೆಟ್ಟಿ, ಶಿವಬಸಪ್ಪ, ರಜಾಕ್, ಮಹೇಶ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.